# ಪ್ರಸಾದ

ಮಾಸಿಕ

ಮೇ 2025

ಸಂಪುಟ 40 ಸಂಚಿಕೆ 5



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಮೈಸೂರು ಕಲಾಮಂದಿರದಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆ ಮತ್ತು ಬಸವ ಬಳಗಗಳ ಒಕ್ಕೂಟದಿಂದ ಆಯೋಜಿಸಿದ್ದ ಬಸವ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು. ಶ್ರೀ ತನ್ವೀರ್ ಸೇಠ್, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಹೆಚ್.ವಿ. ಬಸವರಾಜು, ಶ್ರೀ ಎಂ.ಎಸ್.ಎಸ್. ಕುಮಾರ್, ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ರಹೀಂ ಖಾನ್, ಶ್ರೀ ಕೆ. ಹರೀಶ್‌ಗೌಡ ಹಾಗೂ ಶ್ರೀ ಬಿ.ಕೆ. ನಾಗರಾಜುರವರುಗಳಿದ್ದಾರೆ (24 ಮೇ 2025)

# ಪ್ರಸಾದ

**ಸಂಪುಟ 40 : ಸಂಚಿಕೆ 5** **ಮೇ 2025**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 223




**ಸಂಸ್ಥಾಪಕರು**

ಶ್ರೀಮನ್ಮಹಾರಾಜ  ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ಮೈಸೂರಿನಲ್ಲಿ ನಡೆದ 'ರಾಷ್ಟ್ರ ರಕ್ಷಣೆಗಾಗಿ ನಾಗರಿಕರು' ತಿರಂಗಾ ಯಾತ್ರೆಯಲ್ಲಿ ಪರಮಪೂಜ್ಯ ಜಗದ್ಗುರುಗಳವರು, ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳು, ಶ್ರೀ ಸೋಮನಾಥಾನಂದ ಸ್ವಾಮಿಗಳು, ಶ್ರೀ ದತ್ತ ವಿಜಯನಾಂದ ತೀರ್ಥ ಸ್ವಾಮಿಗಳು, ಮಾಜಿ ಸಂಸದರಾದ ಶ್ರೀ ಪ್ರತಾಪ ಸಿಂಹ, ಶಾಸಕರುಗಳಾದ ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಸಿ.ಎನ್. ಮಂಜೇಗೌಡ, ಸಂಸದರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಶಾಸಕರಾದ ಶ್ರೀ ಎಲ್. ನಾಗೇಂದ್ರ, ವಿವಿಧ ಧಾರ್ಮಿಕ ಮುಖಂಡರುಗಳು, ನಾಗರಿಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು (16 ಮೇ 2025)


**ದಶವಾರ್ಷಿಕ ಚಂದಾ : 500/-  *  ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಕಾಯಕಯೋಗ–ಪ್ರಸನ್ನತಾ ಪ್ರಸಾದ 10
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಮೌನಧ್ವನಿ 15
ಪ್ರೊ. ಮ.ಗಂ. ರೇಣುಕ ಪ್ರಸನ್ನ

ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ 22
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಮಹಾನ್ ದಾರ್ಶನಿಕ ಬಸವಣ್ಣನವರು 28
ಡಾ. ಆರ್.ಬಿ. ಚಿಲುಮಿ

ಗುಬ್ಬಿ ಹೊಸಹಳ್ಳಿ ಅರಸು ಮನೆತನದವರಲ್ಲಿ ದೊರೆತ
ಮೈಸೂರು ಅರಸರ ಪ್ರಧಾನ ಚನ್ನಪ್ಪಯ್ಯನ ಪತ್ರ 33
ಡಾ. ಬಿ. ನಂಜುಂಡಸ್ವಾಮಿ

ಬರವಣಿಗೆ : ಒಂದು ತಪಸ್ಸು 37
ಡಾ. ಎಸ್. ಆರ್. ಗುಂಜಾಳ

ಕಿಗ್ಗ ಗ್ರಾಮದ ಕ್ಷೇತ್ರದರ್ಶನ 40
ಡಾ. ಎಸ್.ಜಿ. ರಾಮದಾಸ ರೆಡ್ಡಿ
(ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ)

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಚನಗಳು 44
ರಂಗನಾಥ್ ಮೈಸೂರು

ವಾರ್ತಾವಿಹಾರ 48
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

## ರತ್ನ-ರತ್ನ-ರತ್ನ

ಆರು ಬಣ್ಣದ
ಹದಿನೈದು ದೇಹದ ಕೋಡಗ
ಒಂದು ರತ್ನವ ಮೆಟ್ಟಿಕೊಂಡು
ಒಂದು ರತ್ನವ ಹಿಡಿದುಕೊಂಡು
ಮತ್ತೊಂದು ರತ್ನವ ಮರೆಮಾಡಿಕೊಂಡು
ಮೇರು ಪರ್ವತದ ಶಿಖರವನೇರಿತು ನೋಡಾ !
ಅದು ತಾನಿದ್ದ ಪಂಚವರ್ಣದ ಪಟ್ಟಣವ ಹಾಳುಮಾಡಿ
ಆ ಪಟ್ಟಣದ ಪ್ರಜೆಪರಿವಾರಂಗಳ ಕೈಕಾಲುಗಳಂ ಕೊಯ್ದು
ಮಂತ್ರಿನಾಲ್ವರ ಕಡಿಖಂಡಮಂ ಮಾಡಿ
ಪ್ರಾಣ ಸ್ನೇಹಿತರಪ್ಪ ಸಂಗಾತಿಗಳೈವರ ಕಣ್ಣ ಕಳೆದು
ಒಡ ಹುಟ್ಟಿದಿಬ್ಬರ ತಲೆಯೊಡೆಯನಿಕ್ಕಿ
ತನ್ನಿಂದ ತಾನೇ [ನೊಂದಿತ್ತು] ಸತ್ತಿತ್ತು

[ಆಗ] ಭಕ್ತಿಯೆಂಬ ಬಿಲ್ಲ ಹಿಡಿದು
ನಿರಹಂಕಾರವೆಂಬ ತಿರುವನೇರಿಸಿ
ಉರಿಯ ಬಾಣದಲೆಚ್ಚು
ಮರ್ಕಟನ ಕೊಂದು
ಆ ರತ್ನಗಳಂ ಕೊಂಡು
ಸೂರೆಯಂ ಬಿಟ್ಟಾತನೀಗ
ಲಿಂಗಕ್ಕೆ ಸಲೆ ಸಂದ ಶರಣನಯ್ಯ !
ಘನಲಿಂಗಿಯ ಮೋಹದ ಮಲ್ಲಿಕಾರ್ಜುನ !

– ಘನಲಿಂಗಿದೇವರು

# ಗುರುವಾಣಿ

ಓಂ ಸಹನಾವವತು ಸಹನೌಭುನಕ್ತು ಸಹವೀರ್ಯಂ ಕರವಾವಹೈ ।
ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ
ಓಂ ಶಾಂತಿಃ ಶಾಂತಿಃ ಶಾಂತಿಃ ।

ಯಜುರ್ವೇದದ ಈ ಸುಪ್ರಸಿದ್ಧ ಶಾಂತಿಮಂತ್ರ ಪ್ರಾಜ್ಞರೆಲ್ಲರ ಗಮನ ಸೆಳೆದಿದೆ. ಈ ಮಂತ್ರವನ್ನು ಸಾಧಾರಣವಾಗಿ ಗುರು–ಶಿಷ್ಯರ ಸಮಾಗಮದಲ್ಲಿ ಮತ್ತು ಸಮಕ್ಷಮದಲ್ಲಿ, ವಿಶೇಷವಾಗಿ ಭೋಜನದ ಸಂದರ್ಭದಲ್ಲಿ, ಹೇಳುವುದು ರೂಢಿ. ಇದರ ಅರ್ಥ "ಭಗವಂತನು ನಮ್ಮೆಲ್ಲರನ್ನೂ ಕಾಪಾಡಲಿ, ನಾವು ಒಟ್ಟಿಗೆ ಊಟ ಮಾಡೋಣ, ಒಟ್ಟಿಗೆ ಕಾರ್ಯ ನಿರ್ವಹಿಸೋಣ, ಒಟ್ಟಿಗೆ ಅಧ್ಯಯನ ಮಾಡಿ ತೇಜಸ್ವಿಗಳಾಗೋಣ, ನಮ್ಮ ನಡುವೆ ದ್ವೇಷ ಬಾರದಿರಲಿ; ಶಾಂತಿಯಿರಲಿ, ಶಾಂತಿಯಿರಲಿ, ಶಾಂತಿಯಿರಲಿ". ಈ ಮಂತ್ರದ ಪ್ರತಿ ಪದವನ್ನೂ ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ಹಿರಿದು–ಕಿರಿದು ಎಂಬ ಭೇದವಿಲ್ಲ. ಕೊಡುವ–ಕೊಳ್ಳುವ ತರತಮವಿಲ್ಲ. ಮೇಲು–ಕೀಳಿನ ಮನೋಭಾವವಿಲ್ಲ; ಇಲ್ಲಿರುವುದು ಕೇವಲ ಸಾಮರಸ್ಯದ ಬೆಳಕು.

ಇಂಗ್ಲಿಷ್‌ನ ಪ್ರಸಿದ್ಧ ಕವಿ ಟಿ.ಎಸ್. ಎಲಿಯಟ್‌ಗೆ ನೊಬೆಲ್ ಪ್ರಶಸ್ತಿ ತಂದುಕೊಟ್ಟ "ವೇಸ್ಟ್ ಲ್ಯಾಂಡ್" ಕಾವ್ಯ ಕೊನೆಯಾಗುವುದು ಮೇಲಿನ ಶಾಂತಿಮಂತ್ರದ ಮೂಲಕ ಎನ್ನುವುದು ಗಮನಾರ್ಹ. ಮೂಲತಃ ತತ್ವಶಾಸ್ತ್ರದ ವಿದ್ಯಾರ್ಥಿಯಾಗಿದ್ದ ಎಲಿಯಟ್‌ಗೆ ಯೂರೋಪಿನ ಕೈಗಾರಿಕಾ ಕ್ರಾಂತಿ, ಮೊದಲನೆಯ ಮಹಾಯುದ್ಧದಿಂದಾದ ವಿನಾಶಗಳನ್ನೆಲ್ಲ ನೋಡಿ, ಮನಸ್ಸು ವಿಹ್ವಲಗೊಂಡಿತು. ಅದರ ಪರಿಣಾಮವೆಂಬಂತೆ ೧೯೨೨ರಲ್ಲಿ ಈ ಕಾವ್ಯ ರಚನೆಯಾಯಿತು. ಕ್ರಾಂತಿ ಮತ್ತು ವಿನಾಶಕ್ಕೆ ಪರಿಹಾರ ಆತನಿಗೆ ಉಪನಿಷತ್ತಿನಲ್ಲಿ ಗೋಚರಿಸಿತು ಎನ್ನುವುದು ಗಮನಾರ್ಹ.

ಎಲಿಯಟ್ ಈ ಮಂತ್ರದಿಂದ ತನ್ನ ಕಾವ್ಯವನ್ನು ಏಕೆ ಮುಕ್ತಾಯ ಮಾಡಿರಬಹುದು ಎಂಬುದನ್ನು ಗ್ರಹಿಸಬೇಕು. ಈ ಮಂತ್ರದ ಮೊದಲನೆಯ ಭಾಗ "ಭಗವಂತ ಎಲ್ಲರನ್ನೂ ಕಾಪಾಡಲಿ". ಮೊದಲನೆಯ ಮಹಾಯುದ್ಧದಲ್ಲಿ ಜರ್ಮನಿ ಮತ್ತು ಇಂಗ್ಲೆಂಡಿನ ಎರಡು ಪಾಳೆಯಗಳೂ ನಂಬಿದ್ದದ್ದು ಯೇಸುವನ್ನು ಮಾತ್ರ. ಆತ ನಮ್ಮ ಅಜ್ಞಾನವನ್ನು ಹೋಗಲಾಡಿಸಲಿ ಎನ್ನುವುದು ಇಲ್ಲಿನ ಆಶಯ. "ನಮ್ಮಿಬ್ಬರ" ಎನ್ನುವಾಗ ಎಲಿಯಟ್ ಎರಡು ಪಕ್ಷಗಳನ್ನೂ ಪ್ರತಿನಿಧಿಸುತ್ತಾನೆ. ಇದು ಮಹಾಯುದ್ಧದ ಎರಡು ಪಕ್ಷಗಳು

ಮಾತ್ರವಲ್ಲ; ಇದು ಇಬ್ಬರು ವ್ಯಕ್ತಿಗಳು, ಎರಡು ಕುಟುಂಬಗಳು, ಎರಡು ಸಮಾಜಗಳು, ಎರಡು ರಾಜ್ಯಗಳು, ಎರಡು ದೇಶಗಳು – ಹೀಗೆ ದ್ವಂದ್ವಭಾವದ ಎಲ್ಲವನ್ನೂ ಪ್ರತಿನಿಧಿಸುತ್ತದೆ. ಅಜ್ಞಾನದಿಂದ ದ್ವಂದ್ವದಲ್ಲಿ ತೊಳಲುತ್ತಿರುವ ಲೋಕವು ತನ್ನ ಅಜ್ಞಾನವನ್ನು ದಾಟಿ ಅದ್ವೈತ ಸ್ಥಿತಿಗೇರಿದಾಗ ಪರಸ್ಪರಲ್ಲಿ "ವಿರುದ್ಧ" ಎಂಬ ಮಾತೇ ಉದ್ಭವಿಸುವುದಿಲ್ಲ.

ಈ ಮಂತ್ರದಲ್ಲಿ ಮತ್ತೊಂದು ಅದ್ಭುತ ಮಾತಿದೆ. ಅದು "ಒಟ್ಟಿಗೆ ಅಧ್ಯಯನ ಮಾಡೋಣ, ತೇಜಸ್ವಿಗಳಾಗೋಣ" ಎನ್ನುವುದು. ಸಾಮಾನ್ಯವಾಗಿ ಶಿಷ್ಯನು ಗುರುವಿಗೆ ಅಧೀನನಾಗಿ ವಿದ್ಯೆ ಕಲಿಯಬೇಕು ಎನ್ನುವುದು ಸಂಪ್ರದಾಯ. ಆದರೆ ಭಾರತೀಯ ವಿವೇಕ ಈ ಅಧೀನತೆಯನ್ನು ಅಷ್ಟಾಗಿ ಒಪ್ಪುವುದಿಲ್ಲ. ವಾಡಿಕೆಯ ಅರ್ಥದಲ್ಲಿ 'ಗುರು'ವಾದವನು ಶಿಷ್ಯನ ಅಜ್ಞಾನವನ್ನು ಹೋಗಲಾಡಿಸಿ ಜ್ಞಾನದ ಬೆಳಕು ನೀಡುವವನು. ಆದರೆ ಈ ಮಂತ್ರ 'ಒಟ್ಟಿಗೆ ಅಧ್ಯಯನ ಮಾಡೋಣ' ಎನ್ನುತ್ತದೆಯಲ್ಲ! ಇದರ ಅರ್ಥ ಗುರುವಾದವನು ಶಿಷ್ಯನಿಗೆ ಬೋಧಿಸುತ್ತಲೇ ತಾನೂ ಕಲಿಯುತ್ತಾನೆ. ಕಲಿಯುವ ಪ್ರಕ್ರಿಯೆ ಎಂಬುದು ಏಕಮುಖಿಯಲ್ಲ; ಅದು ಉಭಯತ್ರರಿಗೂ ಸಮಾನವಾದುದು ಮತ್ತು ಪರಸ್ಪರ ಲಾಭಕರವಾದುದು ಎಂಬುದು ಇಲ್ಲಿನ ಮಥಿತಾರ್ಥ.

ಇಂಥ ತಿಳಿವಳಿಕೆ ಹಿಂದೆಂದಿಗಿಂತಲೂ ಇಂದು ಜಗತ್ತಿಗೆ ಅತ್ಯಗತ್ಯವಾಗಿದೆ. ಭಾರತ ಗುರುವಿನ ಸ್ಥಾನದಲ್ಲಿ ನಿಂತು ಜಗತ್ತಿಗೆ ಈ ಮಹಾಸತ್ಯವನ್ನು ಬೋಧಿಸಬೇಕಾಗಿದೆ. ಮನುಷ್ಯರ ನಡುವಣ ದ್ವೇಷಾಸೂಯೆಗಳಿಗೆ ಹಲವಾರು ಸಂಕೀರ್ಣ ಅಂಶಗಳು ಕಾರಣವಾಗಿವೆ. ಅದರಲ್ಲಿ ಅತ್ಯಂತ ಮುಖ್ಯವಾದದ್ದು ವ್ಯಕ್ತಿಪ್ರಜ್ಞೆ, ತಾನು, ತನ್ನದು, ತನಗಾಗಿ ಎಂಬ ಅಹಮಿಕೆಯ ಭಾವ ಮನುಷ್ಯನನ್ನು ಇಡಿಯಾಗಿ ಆವರಿಸಿಕೊಂಡಿದೆ. ಹಾಗೆ ನೋಡಿದರೆ ಮನುಷ್ಯನಿಗೆ ಯಾವ ಒಂದು ವಸ್ತುವನ್ನೂ ಸ್ವತಂತ್ರವಾಗಿ ಸೃಷ್ಟಿಸಬಲ್ಲ ಶಕ್ತಿ ಇಲ್ಲ. ಆತ ಭೂಮಿ, ನೀರು, ಗಾಳಿ, ಸೂರ್ಯಚಂದ್ರರು ಏನನ್ನೂ ಸೃಷ್ಟಿಸಲಾರ. ಇವೆಲ್ಲವೂ ನಿಸರ್ಗದ ಅಪ್ರತಿಮ ಕೊಡುಗೆಗಳು. ಈ ಸುಂದರವಾದ ಪ್ರಕೃತಿ ಎಲ್ಲರಿಗೂ ಸೇರಿದ್ದು; ಇದನ್ನು ನೋಡುವ, ಸವಿಯುವ ಸೌಭಾಗ್ಯ ಮಾತ್ರ ಎಲ್ಲರದ್ದು. ಹಾಗೆ ಸವಿಯಬೇಕಾದರೆ ಅಂತರಂಗದಲ್ಲಿ ಶಾಂತಿ, ನೆಮ್ಮದಿ ಇರಬೇಕು. ಉದ್ವೇಗದಲ್ಲಿ, ಭ್ರಮೆಗಳಲ್ಲಿ ಕದಡಿಹೋಗಿರುವ ನೀರಿನಲ್ಲಿ ಮುಖ ಕಾಣುವುದಿಲ್ಲ. ಹಾಗಾಗಿಯೇ ದೇಶದೇಶಗಳ ನಡುವೆ ಅಪನಂಬಿಕೆ, ಉದ್ವೇಗ ಬೆಳೆಯುತ್ತಿವೆ; ವಿನಾಶ ಹೆಡೆಯಾಡುತ್ತಿದೆ. ಅವೆಲ್ಲವನ್ನೂ ನಿವಾರಿಸಿಕೊಂಡು ಮಾನವತೆ ಉಳಿಯಬೇಕೆಂಬ ಪ್ರಜ್ಞೆ ಎಲ್ಲರಲ್ಲಿಯೂ ಮೂಡುವಂತಾಗಬೇಕು.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

"The first revolution was tragedy, but the second one was a farce" ಎಂಬ ಕಾರ್ಲ್ ಮಾರ್ಕ್ಸ್ ಮಾತು ಇಂದಿಗೂ ಪ್ರಸ್ತುತವಾಗಿದೆ ಎನ್ನಿಸುತ್ತದೆ. ಜಡ್ಡುಗಟ್ಟಿದ ಸಮಾಜದಲ್ಲಿ ಧನಾತ್ಮಕ ಪಲ್ಲಟವನ್ನುಂಟುಮಾಡಲು ಪ್ರಯತ್ನಿಸಿದಾಗ ಮೊದಲನೆಯ ಪ್ರಯತ್ನ ಸಾಮಾನ್ಯವಾಗಿ ಬಹಳ ಕಠಿಣವಾಗಿರುತ್ತದೆ ಮತ್ತು ದುಃಖದಾಯಕವೂ ಆಗಿರುತ್ತದೆ. ಆದರೆ ಅನಂತರದ ಪ್ರಕ್ರಿಯೆ ನೆಮ್ಮದಿಯನ್ನು ತರುತ್ತದೆ. ಈ ಪಲ್ಲಟ ಮತ್ತು ನೆಮ್ಮದಿಗಳ ನಡುವಣ ಸಂಘರ್ಷ ಮಾತ್ರ ಯಾತನಾಮಯವಾಗಿರುತ್ತದೆ. ಇಂಥದ್ದೊಂದು ಸ್ಥಿತಿಗೆ ಸಮಾಜ–ಜನತೆ ತನ್ನನ್ನು ಒಡ್ಡಿಕೊಳ್ಳದ ಹೊರತು ಉದ್ದೇಶಿತ ಪಲ್ಲಟವನ್ನು ತರುವುದು ಸಾಧ್ಯವಿಲ್ಲ. ಇಲ್ಲವಾದರೆ ಇಡೀ ವ್ಯವಸ್ಥೆ ನಿಂತ ನೀರಾಗಿ ಜಡಗಟ್ಟಿ ಕೊಳೆತು ಹೋಗುತ್ತದೆ. ಕೊಳೆಯುವುದರಲ್ಲಿಯೇ ಕೆಲವರಿಗೆ ಸುಖವಿದೆ, ಕೊಳೆತ ವಾಸನೆಯನ್ನೇ ಸುವಾಸನೆಯೆಂದು ಭಾವಿಸುವವರೂ ಇದ್ದಾರೆ. ಇದನ್ನು ಹೋಗಲಾಡಿಸಲು ಜನತೆಯನ್ನು ಚಲನಶೀಲವಾಗಿಸಬೇಕಾಗುತ್ತದೆ. ಚಲನಶೀಲತೆ ಯೊಂದೇ ಜನತೆಯನ್ನು ಚೈತನ್ಯಶೀಲರನ್ನಾಗಿಸಬಲ್ಲುದು. ಈ ಚಲನಶೀಲತೆಗೆ ಸದಾ ಒಂದು ಸಂಘರ್ಷದ ಅಗತ್ಯವಿದ್ದೇ ಇರುತ್ತದೆ.

ಕ್ರಾಂತಿ–ಪ್ರತಿಕ್ರಾಂತಿ ಎನ್ನುವ ಲೋಹಿಯಾ ಅವರ ಮಾತನ್ನು ಬಹಳ ಜನರು ತಪ್ಪಾಗಿ ಅರ್ಥೈಸಿಕೊಳ್ಳುವ ಅವಕಾಶವೂ ಇದೆ. ಲೋಹಿಯಾ ಅವರು ಈ ಕ್ರಾಂತಿ–ಪ್ರತಿಕ್ರಾಂತಿಯನ್ನು ಹೇಳಿದ್ದು, ಕ್ರಾಂತಿಯಿಂದ ಹುಟ್ಟಿದ ಹೊಸ ವ್ಯವಸ್ಥೆಯೂ ಕೂಡ ಜಡ್ಡುಗಟ್ಟಿದಾಗ ಆ ಕ್ರಾಂತಿಯ ವಿರುದ್ಧ ಮತ್ತೊಂದು ಕ್ರಾಂತಿಯಾಗಬೇಕು ಎಂಬ ಅರ್ಥದಲ್ಲಿ. ನಾವೇ ಕಟ್ಟಿದ ವ್ಯವಸ್ಥೆ ಜಡವಾದಾಗ ಅದನ್ನೂ ಪಲ್ಲಟಗೊಳಿಸಬೇಕು. ಯಾವುದರ ಮೇಲೂ ಅನಗತ್ಯ ಮೋಹವಿರಬಾರದು. ನಮ್ಮದು ಕಾಳಿಂಗಸರ್ಪದ ಜಾಯಮಾನ ವಾಗಬಾರದು. ಕಾಳಿಂಗಸರ್ಪವು ಮೊಟ್ಟೆಗಳನ್ನಿಟ್ಟು 10–15 ದಿನಗಳವರೆಗೆ ಕಾವು ಕೊಟ್ಟು, ತಾನು ಏನೂ ಆಹಾರವನ್ನು ಸೇವಿಸದೆ ಇರುತ್ತದೆ; ಮರಿ ಈಚೆಗೆ ಬರುವ ಗಳಿಗೆಯಲ್ಲಿ ತಾನೆಲ್ಲಿ ನನ್ನ ಮರಿಗಳನ್ನು ತಿಂದುಬಿಡುತ್ತೇನೆಯೋ ಎಂಬ ಆತಂಕದಿಂದ ಆ ಜಾಗದಿಂದ ಓಡಿಹೋಗುತ್ತದೆ. ಯಾವುದೇ ಎಗ್ಗಿಲ್ಲದೆ, ಲಜ್ಜೆ–ಸಂವೇದನೆಗಳಿಲ್ಲದೆ ನಮ್ಮ ಸಮಾಜದಲ್ಲಿಯೂ ಕಾಳಿಂಗಸರ್ಪದ ಸಂತತಿ ಹೀಗೆ ಅಧಿಕವಾಗಿದೆ.

ನಮ್ಮ ಸುತ್ತಲಿನ ಸಮಾಜ ಮತ್ತು ಸರ್ಕಾರ ಎರಡೂ ಭ್ರಷ್ಟಗೊಂಡಿವೆ. ಜನರ ಶೋಷಣೆಯನ್ನು ಮಾಡುತ್ತಿವೆ. ಸಾಮೂಹಿಕವಾಗಿ ಭ್ರಷ್ಟತೆಯನ್ನು ವಿರೋಧಿಸುವ ಪ್ರತಿಯೊಬ್ಬ ವ್ಯಕ್ತಿಯೂ ವೈಯಕ್ತಿಕವಾಗಿ ಭ್ರಷ್ಟನೇ ಆಗಿದ್ದಾನೆ. ಸರ್ಕಾರವೂ ಪ್ರತಿಪಕ್ಷಗಳೂ ಇದರಿಂದ ಹೊರತಲ್ಲ. ಕೇವಲ ಹಣದ ಭ್ರಷ್ಟತೆ ಮಾತ್ರವಾಗಿದ್ದರೆ ಅದನ್ನು ಸುಧಾರಿಸಲು ದಾರಿಗಳು ಸಿಗಬಹುದಿತ್ತೇನೋ. ಆದರೆ ಸಾಮಾಜಿಕ ಮೌಲ್ಯಗಳೇ ಇಡಿಯಾಗಿ ಹದಗೆಟ್ಟಿವೆ. ತೋರಿಕೆಗೆ ಒಂದು ಮಾತನಾಡುವವನು ಆಂತರ್ಯದಲ್ಲಿ ಬೇರೇನನ್ನೋ ಇಟ್ಟುಕೊಂಡಿರುತ್ತಾನೆ. ಇತ್ತೀಚೆಗೆ ಹಿಂದುಳಿದವರ, ಹಿಂದುಗಳ, ದೀನದಲಿತರ ಉದ್ಧಾರವೆಂದು ಮಾತನಾಡುತ್ತಿರುವುದು ಕೇವಲ ತೋರಿಕೆಯಾಗಿದೆ. ರಾಜಕೀಯ ಪಕ್ಷಗಳು ಹಾಕಿಕೊಂಡಿರುವ ಕ್ರೂರ ಹಾಗೂ ಮತಬ್ಯಾಂಕಿನ ನಿರ್ಲಜ್ಜ ಮುಖವಾಡವಾಗಿದೆ. ನೋವಿನ ಸಂಗತಿಯೆಂದರೆ ಆಧುನಿಕ ಶಿಕ್ಷಣ ಪಡೆದವರು ಕೂಡ ಈ ಹುಚ್ಚಾಟವನ್ನು ಅರಿಯಲಾರದೆ ಈ ಭ್ರಷ್ಟ ವ್ಯವಸ್ಥೆಯ ಒಂದು ಭಾಗವೇ ಆಗುತ್ತಿದ್ದಾರೆ. ಸುಶಿಕ್ಷಿತ ಜನರ ಈ ಬಗೆಯ ಭ್ರಷ್ಟತೆ ತೀರಾ ಅಪಾಯಕಾರಿ.

ಈ ಭ್ರಷ್ಟತೆಯ ಮುಖವಾಡ ಈಗ ಹೊಸ ಹೊಸ ರೂಪಗಳನ್ನು ತಳೆಯುತ್ತಿದೆ. ಇದೊಂದು ಸರಣಿ, ಮಾನವ ಸರಪಳಿಯ ಹಾಗೆ. ಉದಾಹರಣೆಗೆ, ನಮ್ಮನ್ನು ಆಳುವ ಸರ್ಕಾರವನ್ನು ಆರಿಸುವ ಜನರು ಹಣ, ಹೆಂಡವಿಲ್ಲದೆ ತಮ್ಮ ಮತ ನೀಡಲು ಸಿದ್ಧರಿಲ್ಲ. ಪ್ರಜಾಪ್ರತಿನಿಧಿಗಳು ಹಣವಿಲ್ಲದೆ ಚುನಾಯಿತರಾಗುವುದು ಸಾಧ್ಯವೇ ಇಲ್ಲ. ಹಾಗೆ ಹಣ ನೀಡಿ ಗೆದ್ದವರು ತಮ್ಮ ಹಣದ ವಸೂಲಿಗಾಗಿ ಮತ್ತು ಮುಂದಿನ ಚುನಾವಣೆಯ ಬಂಡವಾಳಕ್ಕಾಗಿ ಹೇಗಾದರೂ ಹಣವನ್ನು ಸಂಪಾದಿಸಲೇಬೇಕು. ನ್ಯಾಯಮಾರ್ಗದಲ್ಲಿ ಹಣ ಸಂಪಾದನೆ ಮಾಡುವುದು ಸಾಧ್ಯವೇ ಇಲ್ಲವೆಂದು ಶಾಸಕರು ಭ್ರಷ್ಟ ಮಾರ್ಗದಲ್ಲಿ ಹಣ ಗಳಿಸುತ್ತಾರೆ. ಮತ್ತೇ, ಅದೇ ಹಣವನ್ನು ತಂದು ಚುನಾವಣೆಯಲ್ಲಿ ಸುರಿದು ಜಯಶೀಲನಾಗುತ್ತಾನೆ.

ಅಂದರೆ, ಈ ಭ್ರಷ್ಟವ್ಯವಸ್ಥೆಯ ವಿಷವರ್ತುಲದಲ್ಲಿ ಆರಂಭ ಮತ್ತು ಅಂತ್ಯಗಳು ಗುರುತಿಗೇ ಸಿಗದಷ್ಟು ಸಂಕೀರ್ಣವಾಗಿದೆ. ಆದರೆ ಕೊನೆಗೂ ಇದರ ಸುಧಾರಣೆ ಆಗಬೇಕಾಗಿರುವುದು ಜನರಿಂದಲೇ. ಈ ಕ್ರಾಂತಿ, ಪ್ರತಿರೋಧ ಯಾವಾಗಲೂ ಬೃಹತ್ತಾಗಿಯೇ ಇರಬೇಕೆಂದಿಲ್ಲ ; ಅಥವಾ ಶಿಕ್ಷಿತರಿಂದಲೋ, ಕ್ರಾಂತಿಕಾರಿಗಳಿಂದಲೋ, ಸುಧಾರಣಾವಾದಿಗಳಿಂದಲೋ ಆಗಬೇಕಾಗಿಲ್ಲ. ನಿಜವಾದ ಕ್ರಾಂತಿಯಾಗಬೇಕಾಗಿರುವುದು ಶ್ರೀಸಾಮಾನ್ಯನಿಂದ ಮಾತ್ರ ಎಂದು ಎಲ್ಲರೂ ಉಪದೇಶ ನೀಡುತ್ತಿದ್ದಾರೆ. ಇಲ್ಲೊಂದು ಸಣ್ಣ ಕಥೆ. ಸ್ವಾತಂತ್ರ್ಯಪೂರ್ವದಲ್ಲಿ ಮಹಾರಾಷ್ಟ್ರದ ಬುಧಗಾಂವ ಎಂಬ ಒಂದು ಚಿಕ್ಕ ಸಂಸ್ಥಾನ. ಆ ಸಂಸ್ಥಾನದ ಆದಾಯ ಅಷ್ಟೇನೂ ಹೇಳಿಕೊಳ್ಳುವಂಥದಾಗಿರಲಿಲ್ಲ. ರಾಜ್ಯದ

ಖರ್ಚನ್ನು ಸರಿದೂಗಿಸಲು ಅಲ್ಲಿನ ರಾಜ ಒಂದು ವಿಚಿತ್ರ ರೀತಿಯ ತೆರಿಗೆ ಹಾಕಿದ. ಸಾಯುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಸ್ಮಶಾನದಲ್ಲಿಯೇ ಹೂಳಬೇಕು. ಹಾಗೆ ಹೂಳಬೇಕಾದರೆ ಹೂಳುವುದಕ್ಕೆ ಒಂದು ರೂಪಾಯಿ ತೆರಿಗೆ ನೀಡಬೇಕು ಎಂದು ಆದೇಶಿಸಿದ.

ಪ್ರತಿದಿನವೂ ಸ್ಮಶಾನಕ್ಕೆ ಹೆಣಗಳು ಬರುತ್ತಲೇ ಇದ್ದವು. ಪ್ಲೇಗ್, ಕಾಲರಾಗಳಂಥ ಸಂದರ್ಭದಲ್ಲಿ ಹೇಳುವಂತೆಯೇ ಇಲ್ಲ. ರಾಜ್ಯದ ಬೊಕ್ಕಸಕ್ಕೆ ಬೇಕಾದಷ್ಟು ಆದಾಯ ಹರಿದು ಬರುತ್ತಿತ್ತು. ರಾಜ ಸ್ಮಶಾನದ ಕಾವಲುಗಾರರೆಲ್ಲರೂ ಶಿಸ್ತಿನಿಂದ ಇರುವಂತೆ ನೋಡಿಕೊಳ್ಳಲಾಯಿತು. ಒಮ್ಮೆ ಒಬ್ಬ ಅನಾಥ ಮುದುಕ ಸತ್ತುಹೋದನು. ಅವನ ಹೆಣವನ್ನು ಸ್ಮಶಾನಕ್ಕೆ ತಂದರು. ಕಾವಲಿನವನು ತೆರಿಗೆ ಕೇಳಿದ. ಆ ಶವವನ್ನು ತಂದಿದ್ದವರೂ ಬಡವರೇ ಆಗಿದ್ದರು. ಅವರಿಗೆ ತೆರಿಗೆ ಕೊಡಲು ದುಡ್ಡಿರಲಿಲ್ಲ. ಹೆಣ ಹೊತ್ತು ತಂದವರು ಕಾವಲಿನವನಿಗೆ ಪರಿಪರಿಯಾಗಿ ಬೇಡಿ, ಸಂಸ್ಕಾರಕ್ಕೆ ಅವಕಾಶ ನೀಡುವಂತೆ ಕೋರಿದರು. ಅನುಮತಿ ದೊರೆಯಲಿಲ್ಲ. ಹೊತ್ತು ತಂದವರಿಗೆ ಕಾದು ಕಾದು ಬೇಜಾರಾಯಿತು. ಕೊನೆಗೆ ಆ ಗುಂಪಿನಲ್ಲಿದ್ದ ಒಬ್ಬ ಧೈರ್ಯಶಾಲಿ ಹೇಳಿದ : “ಆಯಿತು, ನೀವು ಅನುಮತಿ ನೀಡದಿದ್ದರೆ ನಾವು ಹೆಣವನ್ನು ಇಲ್ಲಿಯೇ ಬಿಟ್ಟು ಹೋಗುತ್ತೇವೆ. ಏನಾದರೂ ಮಾಡಿಕೊಳ್ಳಿ” ಎಂದು ಹೊರಟುಬಿಟ್ಟನು. ಕಾವಲಿನವನಿಗೆ ಏನು ಮಾಡಬೇಕೆಂದು ತೋಚದೆ, ದಿಕ್ಕುಗೆಟ್ಟ. ಸ್ಮಶಾನದ ಜೊತೆಗೆ ಹೆಣವನ್ನೂ ಕಾಯಬೇಕಾಗುತ್ತದೆ ಎಂದು ಚಿಂತಿಸಿ, ರಾಜನ ಗಮನಕ್ಕೆ ತಾರದೆ ಆ ಹೆಣವನ್ನು ಸುಡಲು ಅವಕಾಶ ಮಾಡಿಕೊಟ್ಟ. ಮುಂದೆ ಇದೇ ಪ್ರಕ್ರಿಯೆಯು ಕ್ರಾಂತಿಯ ರೂಪ ಪಡೆಯಿತು. ಕೊನೆಗೆ ಹಣವಿಲ್ಲದೆ ಇದ್ದರೂ ಹೆಣ ಸುಡಲು ಅವಕಾಶ ಮಾಡಿಕೊಡಬೇಕಾಗಿ ಬಂದಿತು.

ಈ ಕತೆ ಮೇಲುನೋಟಕ್ಕೆ ತಮಾಷೆಯೆಂದು ತೋರಬಹುದು. ಈಗಲೂ ಸಹ ಒಂದು ಸಣ್ಣ ಕ್ರಾಂತಿಯ ಕಿಡಿಯೂ ಕೂಡ ದೊಡ್ಡದೊಂದು ಕ್ರಾಂತಿಗೆ ಮುನ್ನುಡಿ ಬರೆಯಬಹುದು. ಇಂಥ ಪ್ರತಿಕ್ರಾಂತಿಗೆ ಸಿದ್ಧರಾಗಲು ಇದೇ ಸುಸಮಯ.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ಕಾಯಕಯೋಗ-ಪ್ರಸನ್ನತಾ ಪ್ರಸಾದ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಸತ್ಯವಸ್ತುವಿನ ಜ್ಞಾನಸಾಧನೆಯಿಂದ, ಏಕಾಗ್ರತಾರೂಪ ಧ್ಯಾನಸಾಧನೆಯಿಂದ, ಹೃದಯದ ಮಾಧುರ್ಯರೂಪ ಭಕ್ತಿಸಾಧನೆಯಿಂದ ಭಗವಚ್ಚಿಂತನ ಮಾಡುವುದನ್ನು ನಾವೀಗಾಗಲೆ ನೋಡಿದ್ದೇವೆ. ಭಗವಂತನನ್ನು ನಿರ್ಮಲ ಮತಿಯಲ್ಲಿ, ನಿಶ್ಚಲ ಮನಸ್ಸಿನಲ್ಲಿ ಹಾಗೂ ಮಧುರ ಹೃದಯದಲ್ಲಿ ಆವಿಷ್ಕರಿಸಿಕೊಳ್ಳುವುದು ಚಿಂತನ.

ಜ್ಞಾನ ಧ್ಯಾನ ಹಾಗೂ ಭಕ್ತಿಗೆ ಹೊರತಾಗಿ ಇನ್ನೊಂದು ಅತ್ಯಮೂಲ್ಯ ಸಾಧನೆಯಿದೆ. ಅದುವೇ 'ಕರ್ಮ!' ಮನ-ಬುದ್ಧಿಗಳ ಬಲವಿಡಿದು ಮಾಡಲಾಗುವ ದೈಹಿಕ ಕಾರ್ಯ ಕರ್ಮವಿದು ಬದುಕಿನ ಪ್ರಧಾನಾಂಶ. ಯೋಗಿಯೇ ಇರಲಿ ರಾಗಿಯೇ ಇರಲಿ, ಕರ್ಮವಿರದೆ ಇರಲಾಗದು. "ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್"—ಹೀಗೆ ಹೇಳಿದೆ ಗೀತೆ. ಯಾರು ಯಾವುದೂ ಕರ್ಮವಿಲ್ಲದೆ ಒಂದು ಕ್ಷಣ ಕೂಡ ಬಾಳರು. ಮನುಷ್ಯ ಪಶು ಪಕ್ಷಿಯಷ್ಟೇ ಅಲ್ಲ ದೇವನು ಕೂಡ ಕರ್ಮರತ.

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ |
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ||

"ಅರ್ಜುನ, ನನಗೇನಿದೆ ಹೇಳು ಕರ್ತವ್ಯ? ಮೂರು ಲೋಕಗಳಲ್ಲಿ ನಾನು ಪಡೆಯಬೇಕಾದ ಅಥವಾ ಪಡೆಯದಿರುವ ವಸ್ತುವಿಲ್ಲ. ನಾನು ಏನನ್ನೂ ಬಯಸುವುದಿಲ್ಲ. ಎಲ್ಲವೂ ನಾನಾಗಿರುವಾಗ, ನನ್ನದಾಗಿರುವಾಗ ಬಯಸುವುದಾದರೂ ಏನನ್ನು! ನಾನು ನಿತ್ಯಪೂರ್ಣ! ತುಂಬಿದ ಸಾಗರ ! ಹೀಗಿದ್ದೂ ನಾನು ಕರ್ಮ ಮಾಡುತ್ತೇನೆ !" ಇದು ಗೀತೆಯ ಅಮರ ನುಡಿ.

ನಿಜವಾಗಿ ದೇವನಲ್ಲಿ ಆಸೆಗಳಿರವು, ಎಂದಿಗೂ. ಆದರೆ, ಅಚ್ಚರಿ ಎಂದರೆ ದೇವನಲ್ಲೂ ಇಚ್ಛೆಗಳನ್ನು ಆರೋಪಿಸುತ್ತೇವೆ.

ದೇವನು ನಮ್ಮ ಅನ್ನ, ವಸ್ತ್ರ, ಒಡವೆ, ವೈಭವ ಏನೆಲ್ಲಾ ಕೇಳುತ್ತಾನೆ; ಕೊಟ್ಟರೆ ಸಂತುಷ್ಟ. ಕೊಡದಿದ್ದರೆ ಸಂಕಷ್ಟಗಳ ತರುತ್ತಾನೆ. ಹೀಗೆಲ್ಲ ಭಾವಿಸುತ್ತೇವೆ. ಪಂಚಗವ್ಯಗಳ ಸ್ನಾನವಿಕ್ಕಿ ವಸ್ತ್ರ ಉಡಿಸಿ ಹೂ ಮುಡಿಸಿ ದೀಪ ಎತ್ತುತ್ತೇವೆ. ಅದು ನಮ್ಮ ಆನಂದಕ್ಕಾಗಿ ಮಾತ್ರ. ಅವನಿಗೆ ಆ ದೀಪ ಏನು? ಸೂರ್ಯ ಚಂದ್ರ ನಕ್ಷತ್ರಗಳು ಆತ ಹಚ್ಚಿದ ನಂದಾ

ದೀವಿಗೆಗಳು! ನಮ್ಮ ಎಣ್ಣೆಯ ಮಿಣುಕುದೀಪ ಅವನಿಗೆ ಏನು ಅವಶ್ಯ? 'ಅವನಿರುವಲ್ಲಿ ಕತ್ತಲೆ ಇದ್ದರೆ ದೀಪದ ಅಗತ್ಯ. ಆದರೆ ಆತ ಸೂರ್ಯಕೋಟಿ ಸಮಪ್ರಭ! ಇನ್ನು ಆಹಾರ, ನೈವೇದ್ಯ. ಹಸಿದವರಿಗೆ ಅನ್ನ. ದೇವನು ಹಸಿ ಯುತ್ತಾನೆಯೆ? ಪೂರ್ಣಕಾಮನಾದ ಆತನೇ ಹಸಿದರೆ ತೃಪ್ತಿಪಡಿಸುವವರಾರು! ವೃಕ್ಷದ ಮಡಿ ಹಸಿದರೆ ನೀರುಣಿಸಬಹುದು. ಸಾಗರವೇ ನೀರಡಿಸಿದರೆ? ಇಲ್ಲ. ದೇವನಿಗೆ ಏನೂ ಬೇಕಿಲ್ಲ. ಅಂದ ಬಳಿಕ 'ಕರ್ತವ್ಯ'ವೆಂಬ ಕರ್ಮ ಹೇಗಿರಲು ಸಾಧ್ಯ ? ಹಾಗಾದರೆ ದೇವನು ಅದೇಕೆ ಕರ್ಮಗಳಲ್ಲಿ ನಿರತ? "ಉತ್ಸೀದೇಯುಃ ಇಮೇ ಲೋಕಾಃ ನ ಕುರ್ಯಾಂ ಕರ್ಮಚೇದಹಮ್". ಆತ ಕರ್ಮ ಮಾಡದಿದ್ದರೆ ಲೋಕಗಳೆಲ್ಲ ವಿನಷ್ಟವಾಗುವುವು. ಭೂಮ್ಯಾದಿ ಪಂಚಭೂತಾತ್ಮಕ ಸಮಸ್ತ ವಿಶ್ವವೇ ಮರೆಯಾಗುವುದು.

ತೆರೆಗಳ ಬಾಳು ಸಾಗರದ ಮೇಲೆ. ಸಾಗರವೇ ಇಲ್ಲದಿರೆ ! ವಿಶ್ವದ ಅಸ್ತಿತ್ವ, ತೋರಿಕೆ ದೇವನ ಸಂಕಲ್ಪಕರ್ಮದ ಮೇಲೆ ! ಅವನ ಜ್ಞಾನ ತಪಸ್ಸಿನ ಮೇಲೆ ! ಅದು ಪ್ರತಿ ಕ್ಷಣ ಸಾಗುತ್ತಲಿದೆ. ಹೀಗಿರುವಾಗ 'ಅಕರ್ಮಕೃತ್' ಇರಲು ಆಗದು ಯಾರಿಗೂ. ನಾವು ಕರ್ಮವನ್ನು ತಿರಸ್ಕರಿಸಿ ಜ್ಞಾನವನ್ನು ಅದೆಷ್ಟೇ ಪುರಸ್ಕರಿಸಿದರೂ ಕರ್ಮವಿಲ್ಲದೆ ಬದುಕು ಸಾಗದು. ಇಷ್ಟೇ, ಕೆಲವರ ಕರ್ಮ ಸೂಕ್ಷ್ಮವಿರಬಹುದು; ಕೆಲವರ ಕರ್ಮ ಸ್ಥೂಲವಿರಬಹುದು. ಉದಾಹರಣೆಗಾಗಿ, ಧ್ಯಾನ ಮಾಡುವುದು ಸೂಕ್ಷ್ಮಕರ್ಮ. ವ್ಯವಸಾಯ ಮಾಡುವುದು ಸ್ಥೂಲಕರ್ಮ. ಏನೇ ಆದರೂ ಕರ್ಮ ಮಾತ್ರ ಬೇಕು, ದೇಹ ಇರುವವರೆಗೆ. ದೇಹ ಅಳಿದು, ಮನಸ್ಸು ಬಯಲಾದ ಬಳಿಕ ನಾನು ನನ್ನಲ್ಲಿ ಅಂದರೆ ಆತ್ಮನಲ್ಲಿ ನೆಲೆಸುತ್ತೇನೆ. ಅದು ಕೈವಲ್ಯ. ಆಗ ಮಾತ್ರ ಕರ್ಮವಿಲ್ಲ. ಕೇವಲ ಚೇತನಾಸ್ತಿತ್ವ.

ಅಂಥ ಕೈವಲ್ಯ ಸಮನಿಸುವವರೆಗೆ ಕರ್ಮ ಅತ್ಯಾಜ್ಯ. ಅ-ತ್ಯಜನೀಯ! ಇನ್ನು ಎಲ್ಲ ಕರ್ಮಗಳೂ ಒಂದೇ ಅಲ್ಲ. ಅವುಗಳಲ್ಲಿ ಎರಡು ವಿಧ: ಕೆಟ್ಟ ಕರ್ಮಗಳು (ಅಕರ್ಮ), ಒಳ್ಳೆಯ ಕರ್ಮಗಳು (ಕರ್ಮ) ಎಂದು. "ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ' ಯಾವುದು ಕರ್ಮ? ಯಾವುದು ಅಕರ್ಮ? ಎಂಬುದನ್ನು ನಿರ್ಧರಿಸುವುದು ಬಲ್ಲವರಿಗೂ ಕಷ್ಟ! ಆದರೂ ಒಂದು ಸಾಮಾನ್ಯ ಲಕ್ಷಣ ಹೇಳಬಹುದು. ಪರಿಣಾಮದಲ್ಲಿ ಸಮಾಧಾನ ನೀಡುವುದು ಕರ್ಮ; ಅಸಮಾಧಾನ ನೀಡುವುದು ಅಕರ್ಮ. ಸತ್ಯ-ಶುದ್ಧವಾದುದು ಕರ್ಮ; ಹಾಗಿಲ್ಲದುದು ಅಕರ್ಮ. ಸ್ವಪರಹಿತ ಮಾಡುವುದು ಕರ್ಮ; ಮಾಡದಿರುವುದು ಅಕರ್ಮ.

ಕರ್ಮದ ಪರಿಣಾಮ ಎಷ್ಟು ಮಹತ್ವದ್ದೋ ಉದ್ದೇಶವೂ ಅಷ್ಟೇ ಮಹತ್ವದ್ದು. ಉದ್ದೇಶ ಒಳ್ಳೆಯದಿದ್ದು ಪರಿಣಾಮ ಕೆಟ್ಟದಾಗಿರುವ ಸಾಧ್ಯತೆಯಿದೆ ; ಉದ್ದೇಶ ಕೆಟ್ಟದಾಗಿದ್ದು ಪರಿಣಾಮ ಒಳ್ಳೆಯದಾಗಿರುವ ಸಾಧ್ಯತೆಯೂ ಇದೆ. ಉದಾ: ಸಂಪಾದನೆ. ಧನಸಂಪಾದನೆಗಾಗಿ ದುಡಿಯುತ್ತೇವೆ, ಪ್ರಾಮಾಣಿಕವಾಗಿ. ಆದರೆ ಆ ಸಂಪಾದನೆಯೇ ಪರಮಾರ್ಥವಾಗಿಬಿಟ್ಟರೆ ನಮ್ಮ ಸಂಪೂರ್ಣ ಬದುಕೇ ಹಾಳಾಗುತ್ತದೆ.

ಇನ್ನು ಭಿಕ್ಷುಕನ ತಲೆಗೆ ಗುರಿಯಿಟ್ಟು ಬೀಸಿದ ರೂಪಾಯಿ ನಾಣ್ಯವನ್ನು ಭಿಕ್ಷುಕ ಜಾಣ್ಮೆಯಿಂದ ಹಿಡಿದುಕೊಳ್ಳುತ್ತಾನೆ. ಒಂದು ರೂಪಾಯಿ ಇತ್ತುದಕ್ಕೆ ಧನ್ಯವಾದ ಹೇಳಿ, ಸಂತೋಷದಿಂದ ಹೊರಟುಹೋಗುತ್ತಾನೆ. ಮೊದಲನೆಯ ದೃಷ್ಟಾಂತದಲ್ಲಿ ಉದ್ದೇಶ ಒಳ್ಳೆಯದು, ಪರಿಣಾಮ ಕೆಟ್ಟದ್ದು. ಎರಡನೆಯ ದೃಷ್ಟಾಂತದಲ್ಲಿ ಉದ್ದೇಶ ಕೆಟ್ಟದ್ದು, ಪರಿಣಾಮ ಒಳ್ಳೆಯದು!

ಕರ್ಮದ ಉದ್ದೇಶವೂ ಒಳ್ಳೆಯದಿರಬೇಕು; ಅಷ್ಟೇ ಅಲ್ಲ ಕರ್ಮ ಕೂಡ ಸತ್ಯವೂ ಶುದ್ಧವೂ ಆಗಿರಬೇಕು. ಹಾಗಿಲ್ಲದುದು 'ಅಕರ್ಮ'; ಹಾಗಿದ್ದುದು 'ಕರ್ಮ'. ಅಕರ್ಮ ವರ್ಜ್ಯ; ಕರ್ಮ ಕರಣೀಯ. 'ಅಕರ್ಮ'ವನ್ನು ಜೀವನಾದ್ಯಂತ ಮಾಡಿದರೂ ಅದು ಕರ್ಮಯೋಗವೆನಿಸದು.

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ!
ಮಾಡುವ ನೀಡುವ ನಿಜಗುಣವುಳ್ಳರೆ
ಕೂಡಿಕೊಂಬ ನಮ್ಮ ಕೂಡಲಸಂಗಮದೇವ.

ನಾವು ಹಗಲು ರಾತ್ರಿ ಜೀವನಾದ್ಯಂತ ದುಡಿಯುತ್ತೇವೆ. ಆದರೂ ಬಾಳ ಬಂಧನ ತಪ್ಪಿಲ್ಲ. ನೀಡುತ್ತೇವೆ, ಆದರೆ ನೀಡಿದ ಧರ್ಮ ನಮ್ಮನ್ನು ಪ್ರಾಪಂಚಿಕ ಮೋಹಬಂಧನದಿಂದ ಮೇಲೆತ್ತಿಲ್ಲ. ಏಕೆ ? ನಮ್ಮದು ಕರ್ಮ ಜೀವನ ; ಕರ್ಮಯೋಗ ಜೀವನವಲ್ಲ. 'ಮಾಡುವ ನೀಡುವ ನಿಜಗುಣ' ನಮ್ಮಲ್ಲಿಲ್ಲ. ಬಸವಣ್ಣನವರು, ಸಿದ್ಧರಾಮಣ್ಣನವರು ಸತ್ಯ-ಶುದ್ಧ ಕಾಯಕ ನಿಷ್ಠರು. ಲೋಕದ ಹಿತಕ್ಕಾಗಿ, ಧರ್ಮಸಾಧನೆಗಾಗಿ ಸಾವಿರಾರು ಕರ್ಮ ಗಳನ್ನಾಚರಿಸಿದರು; ಎಲ್ಲ ರೀತಿಯಿಂದ. ಬಾವಿ ಕೆರೆ ಕಟ್ಟಿಸಿದರು; ಮಹಾದಾಸೋಹ ನಡೆಸಿದರು ; ಧಾರ್ಮಿಕ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸಿದರು; ತಾತ್ವಿಕ ದೃಷ್ಟಿಯನ್ನಿತ್ತರು. ಅನುಭಾವಗೋಷ್ಠಿಗಳನ್ನು ನಡೆಸಿದರು; ನಾಡಿನಲ್ಲಿ ಆತ್ಮಜ್ಞಾನದ ದೀವಟಿಗೆ ಉರಿಸಿದರು ಸತತವಾಗಿ. ಆದರೆ ಒಂದು ಅಚ್ಚರಿಯೆಂದರೆ ಆ ಕರ್ಮಗಳಲ್ಲಿ ಅವರು ಕ್ಷಣಮಾತ್ರವೂ ಬಂಧಿತರಾಗಲಿಲ್ಲ. ನಿರ್ಲಿಪ್ತ ಮನೋಭಾವ ; ಫಲಾಕಾಂಕ್ಷಾರಾಹಿತ್ಯ ; ದೇವನಲ್ಲಿ ಸಮರ್ಪಿತ ಮನೋಭಾವ ; ಇವೆಲ್ಲ ಅವರಲ್ಲಿ ವಿಕಸಿತ.

ಶಂಕರರು ನಾಡಿನ ನಾಲ್ಕೂ ನಿಟ್ಟಿನಲ್ಲಿ ಸಂಚರಿಸಿದರು; ಕಷ್ಟಗಳ ಸಹಿಸಿದರು; ಅದ್ವೈತ ಜ್ಞಾನವನ್ನು ಹರಡಿದರು. ಜ್ಞಾನೇಶ್ವರರು ಎಳೆಯ ವಯಸ್ಸಿನಲ್ಲಿಯೇ 'ಜ್ಞಾನೇಶ್ವರಿ' ಎಂಬ ಅಮರ ಕಾವ್ಯ ರಚಿಸಿದರು. ಸಾವಿರಾರು ಜನರ ಬದುಕಿನಲ್ಲಿ ಅಧ್ಯಾತ್ಮದ ರಸ ಸುರಿದರು. ಅವರ ಕರ್ಮಗಳು ಅಬಾಧಕ ; ವಿಮೋಚಕ ; ತಾರಕ. ಅವರದು ಕರ್ಮಯೋಗ ಜೀವನ!

ನಾವೂ ದುಡಿಯುತ್ತೇವೆ ಸಾಕಷ್ಟು. ಆದರೆ ಅದೆಲ್ಲಾ ಸಾಂಸಾರಿಕ ವಿಷಯಗಳಿಗಾಗಿ, ಧನ ಕನಕಗಳಿಗಾಗಿ. ಆದ್ದರಿಂದ ಆ ದುಡಿಮೆಯೇ ನಮಗೆ ಬಂಧನವಾಗುತ್ತಲಿದೆ.

ದುಡಿಯಬೇಕು; ದುಡಿಮೆಯ ತ್ಯಜಿಸಲಾಗದು. ಆದರೆ ಆ ದುಡಿಮೆಯೆಲ್ಲ ದೇವನಿಗಾಗಿ, ಜ್ಞಾನಕ್ಕಾಗಿ ಹಾಗೂ ಜಗತ್ತಿನಲ್ಲಿ, ಜೀವನದಲ್ಲಿ 'ಸತ್ಯಂ ಶಿವಂ ಸುಂದರಂ' ಅಭಿವ್ಯಕ್ತಿಗಾಗಿ. ಮಾಡುವ ನೀಡುವ ನಿಜಗುಣವುಳ್ಳರೆ ಪರಮಾತ್ಮನ ಅನುಗ್ರಹ ಸಮನಿಸುತ್ತದೆ.

ದುಡಿಮೆಯಿಂದ ಪ್ರಸನ್ನತಾ-ಪ್ರಸಾದ ಉಂಟಾದರೆ ಅದೇ ಕರ್ಮ ಯೋಗ. ದುಃಖ-ಬಂಧನ ಉಂಟಾದರೆ ಆ ದುಡಿಮೆಯೇ 'ಅ-ಕರ್ಮ', ಸಲ್ಲದ ಕರ್ಮ; ಬಾಧಕ ಕರ್ಮ. ಮನುಷ್ಯ ಪ್ರಾಮಾಣಿಕವಾಗಿ, ಸದ್ಭಾವದಿಂದ ದುಡಿಯಬೇಕು; ಅದು ಕಾಯಕ. ಕಾಯಕದ ಪ್ರತಿಫಲವನ್ನು ದೇವನಿಗೆ, ದೇವನಂಥ ವ್ಯಕ್ತಿಗಳಿಗೆ ಹಾಗೂ ಜೀವಜಂತುಗಳಿಗೆ ಅರ್ಪಿಸಬೇಕು. ಅದು ಅರ್ಪಣ. ಬಳಿಕ ಹಾಗೆ ದೇವಾರ್ಪಿತವಾದುದನ್ನು ತಾನು ಸ್ವೀಕರಿಸಬೇಕು; ಅದು ಪ್ರಸಾದ. ನಮ್ಮ ಕರ್ಮದ ಕೇಂದ್ರಬಿಂದು ದೇವನಾಗಬೇಕು. ಅವನ ನೆನಹಿನೊಂದಿಗೆ ದುಡಿಮೆ; ಅವನಿಗಾಗಿ ಅರ್ಪಣೆ; ಅವನದೆಂದೇ ಸ್ವೀಕಾರ! ಇಂಥ ಪ್ರಸಾದ ನಮ್ಮ ಬಾಹ್ಯಾಂತರಂಗವನ್ನೆಲ್ಲ ಹಸನಾಗಿಸುತ್ತದೆ ! ಪ್ರಸನ್ನತೆಯದರಿಂದ ಅಳವಡುತ್ತದೆ ! ಅದು ದೇವಕೃಪೆ. ಅದು ಭಗವತ್ಸಿದ್ಧಿ! ಸತ್ಯಾನುಭವದ ಬದುಕು!

ಈ ಪ್ರಸಾದೀಕರಣದ ಸಾಧನೆಯ ಕ್ರಮ ಹೀಗಿದೆ ; ಇದೊಂದು ಹೂ. ಇದರಲ್ಲಿ ರೂಪಿದೆ ; ಸೌಂದರ್ಯವಿದೆ. ನಮ್ಮ ಇಷ್ಟಲಿಂಗಕ್ಕೆ, ಇಷ್ಟದೇವತೆಗೆ ಈ ಹೂವನ್ನು ಅರ್ಪಿಸುತ್ತೇವೆ. ರೂಪವನ್ನು ನಿವೇದಿಸುತ್ತೇವೆ. ಈಗ ಈ ರೂಪು ದೇವನದು. ಹೂ ದೇವನದು. ನಮ್ಮದಲ್ಲ. ಈ ಭಾವದಿಂದಲೇ ಅದೇ ಹೂವಿನ ಸೌಂದರ್ಯವನ್ನು ನೋಡುತ್ತೇವೆ; ಕಣ್ಣು ತುಂಬಿಕೊಳ್ಳುತ್ತೇವೆ ಆ ಸೊಬಗಿನಿಂದ. ಅದನ್ನು ಅನುಭವಿಸುತ್ತೇವೆ. ಆನಂದಿಸುತ್ತೇವೆ. ಅದು ಪ್ರಸಾದ! ಅದು ಪ್ರಸನ್ನತೆ!

ವಿಷಯವು ರೂಪು. ಆ ರೂಪು ಲಿಂಗಾರ್ಪಿತವಾದ ಬಳಿಕ ನಾನು ಸ್ವೀಕರಿಸುತ್ತೇನೆ; ಆಸ್ವಾದಿಸುತ್ತೇನೆ. ಅದು ರುಚಿ. ನಂತರ ಪವಿತ್ರವಾದ ಆನಂದ ಉಂಟಾಗುವುದು. ಅದರ ಅನುಭವವೇ 'ಅನುಭಾವ' ಪ್ರಸಾದ. ತೃಪ್ತಿಪ್ರಸಾದ! ಅರ್ಪಿತ ಹಾಲು ರೂಪಪ್ರಸಾದ. ಸ್ವೀಕೃತ ಹಾಲು ರುಚಿ ಪ್ರಸಾದ. ಉಂಟಾಗುವ ತುಷ್ಟಿ ತೃಪ್ತಿಪ್ರಸಾದ ! ರೂಪಪ್ರಸಾದವು ಶುದ್ಧ ಪ್ರಸಾದ; ರುಚಿಪ್ರಸಾದವು ಸಿದ್ಧಪ್ರಸಾದ; ತೃಪ್ತಿಪ್ರಸಾದವೇ ಪ್ರಸಿದ್ಧ ಪ್ರಸಾದ. ಅದೇ ರೀತಿ, ನಾವು ಗೈದ ಎಲ್ಲ ಕರ್ಮ ಹಾಗೂ ಕರ್ಮಫಲಗಳನ್ನು ದೇವನಿಗೆ ಅರ್ಪಿಸುವುದು ಶುದ್ಧಪ್ರಸಾದ; ಆ ಅರ್ಪಿತ ಫಲಗಳನ್ನು ದೇವನ ಕರುಣೆ ಎಂಬ ಭಾವದಿಂದ ಅನುಭವಿಸುವುದು ಸಿದ್ಧಪ್ರಸಾದ; ಅದರಿಂದ ಉಂಟಾದ ತೃಪ್ತಿಯನ್ನು ಭಗವತ್ಕೃಪೆ ಎಂದು ಅನುಭವಿಸುವುದು ಪ್ರಸಿದ್ಧ ಪ್ರಸಾದ! 'ರೂಪ'ಪ್ರಸಾದದಿಂದ ದೇಹೇಂದ್ರಿಯಗಳ ಶುದ್ಧಿ. ರುಚಿಪ್ರಸಾದದಿಂದ ಭಾವಸಿದ್ಧಿ. ತೃಪ್ತಿಪ್ರಸಾದದಿಂದ ಅನುಭಾವ!

ಶುದ್ಧಪ್ರಸಾದದಿಂದ ದೇಹೇಂದ್ರಿಯ ಪ್ರಸನ್ನತೆ. ಸಿದ್ಧಪ್ರಸಾದದಿಂದ ಮನಸ್ಸಿನ ಪ್ರಸನ್ನತೆ. ಪ್ರಸಿದ್ಧ ಪ್ರಸಾದದಿಂದ ಭಾವಪ್ರಸನ್ನತೆ. ದೇಹದ ದುಡಿಮೆಯಿಂದ ದೇಹಕ್ಕೆ ಪ್ರಸನ್ನತೆ. ಮನಸ್ಸಿನ ದುಡಿಮೆಯಿಂದ ಮನಸ್ಸಿಗೆ ಪ್ರಸನ್ನತೆ. ಬುದ್ಧಿಯ ದುಡಿಮೆಯಿಂದ ಮತಿಗೆ ಪ್ರಸನ್ನತೆ.

ಇದು ಸರ್ವಾಂಗ ಪ್ರಸನ್ನತೆ. ಇನ್ನು ಈ ಸರ್ವಾಂಗಪ್ರಸನ್ನನಾದ ಜೀವ(ಅಂಗ)ನು ತನ್ನನ್ನೇ ದೇವನಲ್ಲಿ ಸಮರ್ಪಿಸಿಕೊಂಡು ಸಮಾಲೀನನಾದರೆ ಆತ ಸ್ವತಃ ಪ್ರಸಾದಗೊಳ್ಳುತ್ತಾನೆ. ದೇವಾಭಿನ್ನ ಅನುಭೂತಿಯದು! ಅದೇ ಅನುಭಾವ! ಅದು 'ಏಕಪ್ರಸಾದ.' ನಾನು ಪ್ರಸಾದ ಸ್ವೀಕರಿಸುವವ ಎಂಬ ಭಾವ ಇಲ್ಲ. ಪ್ರಸಾದವೂ ಇಲ್ಲ. ಪ್ರಸಾದಕ್ಕೆ ಕಾರಣವಾದ ಅರ್ಪಣವೂ ಇಲ್ಲ. ಪ್ರಸಾದ ಸ್ವೀಕರಿಸುವ ಕ್ರಿಯೆಯೂ ಇಲ್ಲ. ಎಲ್ಲಾ ನಿಂತುಹೋಗಿ ಬರಿ ಪ್ರಸಾದ ಉಳಿದರದು ಏಕಪ್ರಸಾದ! ಈ ಸ್ಥಿತಿಗೆ ತಲುಪಿಸುವ ಕ್ರಿಯೆಗೆ ಕರ್ಮಯೋಗ, ಕಾಯಕಯೋಗ ಎಂಬ ನಾಮ!

ನಾವು ಯಾವುದಾದರೂ ಕ್ಷೇತ್ರದಲ್ಲಿ ಇರಲಿ, ಅಲ್ಲಿ ಮನಮುಟ್ಟಿ ದುಡಿಯುವುದು. ಕಳವು ಹಿಂಸೆ ಹುಸಿ ಆತ್ಮಬಣ್ಣನೆ ನಿಂದೆ, ದ್ವೇಷ, ಮೋಹಾದಿಗಳಿಲ್ಲದ ಬಾಹ್ಯಾಂತರ ಶುದ್ಧ ಭಾವದಿಂದ ಶ್ರಮಿಸುವುದು. ಬಂದ ಕರ್ಮಫಲವ ದೇವಭಾವದಿಂದ ಅರ್ಪಿಸಿ ಅನುಭವಿಸುವುದು. ಇದರಿಂದ ಬದುಕೆಲ್ಲ ಪ್ರಸಾದಮಯವಾಗುತ್ತದೆ. ಒಟ್ಟಿನಲ್ಲಿ, ದುಡಿಮೆ ಅತ್ಯಂತ ಮಹತ್ವದ್ದು. ಮನುಷ್ಯ ನೂರು ವರುಷ ಬದುಕಿದರೂ ಸರಿ, ದುಡಿಮೆ ನಿಲ್ಲಬಾರದು, ಒಂದಲ್ಲ ಒಂದು ಕಾಯಕ ಮಾಡಬೇಕು. ಅದೂ ಅತ್ಯಂತ ಪ್ರೇಮದಿಂದ; ದೇವಶ್ರದ್ಧೆಯಿಂದ.

ನಾವು ಬಯಸಿದರೂ ಸರಿ, ಬಯಸದಿದ್ದರೂ ಸರಿ, ದುಡಿಮೆಗೆ ಪ್ರತಿಫಲ ಬಂದೇ ಬರುತ್ತದೆ. ಅದನ್ನು ಭಗವದ್ವಸ್ತುವೆಂದು ಭಾವಿಸಬೇಕು. ಅದರ ಒಂದಂಶ ದೇವಾನುಗ್ರಹವೆಂದು ಸ್ವೀಕರಿಸಬೇಕು. ಅದು ಪ್ರಸಾದ. ಶಬ್ದ ಸ್ಪರ್ಶ ರೂಪ ರಸ ಗಂಧ ಸುಖ ದುಃಖ ಇವೆಲ್ಲವೂ ಅರ್ಪಿತ ಪ್ರಸಾದವಾಗಬೇಕು! ಅರ್ಪಣೆಗಾಗಿಯೇ ಕರ್ಮ ಹಾಗೂ ಕರ್ಮಫಲ! ಪ್ರಸಾದಭಾವವೇ ಜೀವನ! ಹೀಗಾದರೆ ನಮ್ಮ ಬದುಕು ಸಾರ್ಥಕ, ದಿವ್ಯ, ಪವಿತ್ರ !

❑

ಅಗ್ನಿಯ ಸಂಗದಿಂದೆ ಕಾನನ ಕೆಟ್ಟಂತೆ
ಜ್ಯೋತಿಯ ಸಂಗದಿಂದ ಕತ್ತಲೆ ಕೆಟ್ಟಂತೆ
ಪರುಷದ ಸಂಗದಿಂದ ಕಬ್ಬಿಣ ಕೆಟ್ಟಂತೆ
ಲಿಂಗಾನುಭಾವಿಗಳ ಸಂಗದಿಂದೆ
ಎನ್ನ ಹುಟ್ಟು ಹೊಂದುಗಳು ನಷ್ಟವಾಗಿ
ಕೆಟ್ಟುಹೋದುವು ನೋಡಾ ಅಖಂಡೇಶ್ವರಾ

**ಷಣ್ಮುಖಸ್ವಾಮಿ**

# ಮೌನಧ್ವನಿ

**ಪ್ರೊ. ಮ.ಗಂ. ರೇಣುಕ ಪ್ರಸನ್ನ**

ಆಗಸ್ಟ್ 29 ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮಿಗಳವರ ಜನ್ಮದಿನ. ಈ ಬಾರಿ ಈ ದಿನ ಸಮೀಪಿಸಿದಂತೆ ಮನದ ಮಿಡಿತ, ಹೃದಯದ ಬಡಿತಗಳು ಅರಿವಿಗೆ ಮೀರಿ ತಮಗೆ ತಾವೇ ತೀವ್ರಗೊಳ್ಳುತ್ತವೆ. ಮಾತಿಗೆ ಮೀರಿದ ಮೌನಧ್ವನಿಯಲ್ಲಿಯೇ ಪ್ರೀತಿಯ ಬುದ್ಧಿಯವರಿಗೆ ಹುಟ್ಟುಹಬ್ಬದ ಶುಭಾಶಯ, ದೀರ್ಘಾಯುಷ್ಯ ಕೋರಿ, ಅವರ ದರ್ಶನಾಶೀರ್ವಾದ ಪಡೆಯುತ್ತಿದ್ದ ದೃಶ್ಯ ಕಣ್ಣಮುಂದೆ ಸುಳಿಯುತ್ತದೆ. ಇಂಥ ದೃಶ್ಯಾವಳಿಗಳ ಸುರುಳಿಯೇ ಬಿಚ್ಚಿಕೊಳ್ಳ ಲಾರಂಭಿಸಿದಂತೆ ನೆನಪು ಹಿಂದೆ ಸರಿಯಲಾರಂಭಿಸುತ್ತದೆ.

ಕಳೆದ ಡಿಸೆಂಬರ್ 6ನೆಯ ದಿನಾಂಕ; ಸಮಯ ಅಪರಾಹ್ನ 3 ಗಂಟೆಯ ಹೊತ್ತು; ಸ್ಥಳ ಬೆಂಗಳೂರಿನ ಎನ್‌ಸಿಇಆರ್‌ಟಿ ಸಭಾಂಗಣ; ಪಿಯುಸಿ ಪಠ್ಯಪುಸ್ತಕ ನಿರ್ಮಾಣ ಕಮ್ಮಟದಲ್ಲಿ ಪಾಲ್ಗೊಂಡಿದ್ದೆ; ಅಲ್ಲಿ ನನಗೆ ತಲುಪಿದ "ಶ್ರೀಗಳು ಇಂದು ಬೆಳಗ್ಗೆ ಲಿಂಗೈಕ್ಯರಾದರು" ಎಂಬ ಸುದ್ದಿ; ಆ ಸುದ್ದಿಯನ್ನು ಕೇಳಿದ ಕ್ಷಣದಿಂದ ಈವರೆಗೆ ನನ್ನ ಮನದಲ್ಲಾಗುತ್ತಿರುವ ಭಾವತುಮುಲಕ್ಕೆ ಮೂರ್ತರೂಪ ಕೊಡುವ ಒಂದು ಯತ್ನ ಈ ಅಭಿವ್ಯಕ್ತಿ. (ಇಲ್ಲಿಯ ನೆನಪುಗಳು ಆಂದೋಲನ ಪತ್ರಿಕೆಯ ದಿನಾಂಕ 30.8.1987ರ ಸಂಚಿಕೆಯಲ್ಲಿ ಪ್ರಕಟಗೊಂಡಿವೆ).

ಹಿಂದಿನ ದಿನವಷ್ಟೇ ಮಿತ್ರ ಎಸ್.ಎಂ. ಗುರುನಂಜಯ್ಯನವ ರೊಂದಿಗೆ ಅವರ ಸೆನೆಟ್ ಚುನಾವಣೆಯ ಗೆಲುವಿಗೆ ಆಶೀರ್ವಾದ ಪಡೆಯಲು ಶ್ರೀಗಳವರನ್ನು ಕಂಡಾಗ, ಕಣ್ತೆರೆಯಲಾರದಷ್ಟು ತೀವ್ರ ಅಸ್ವಸ್ಥರಾಗಿದ್ದ ಸ್ವಾಮೀಜಿಯವರು ಒಮ್ಮೆ ಅತಿ ಪ್ರಯಾಸದಿಂದ ಗುರುನಂಜಯ್ಯನವರತ್ತ ನೋಟ ಬೀರಿದರು. ಅದೇ ಅನುಗ್ರಹ ವಾಯಿತು. ಮರುದಿನವೇ ಗಿಳಿ ಪಂಜರವನ್ನು ಬಿಟ್ಟು ಹಾರಿತ್ತು. ಬರಿದಾದ ಪಂಜರವನ್ನು ನೋಡಿ ವಿಹ್ವಲಗೊಂಡ ಮನಸ್ಸುಗಳೆಷ್ಟೋ!

ಎರಡು ದಶಕಗಳ ಹಿಂದೆ; 1967ರ ಜೂನ್ ಎರಡನೆಯ ವಾರದಲ್ಲೊಂದು ದಿನ. ಆಗಷ್ಟೇ ಎಂ.ಎ. ಫಲಿತಾಂಶ ಹೊರಬಿದ್ದಿತ್ತು. ಉದ್ಯೋಗಾರ್ಥಿಯಾಗಿದ್ದ ನಾನು, ಸ್ನಾತಕೋತ್ತರ ಅಧ್ಯಯನಕ್ಕೆ ಬಂದಿದ್ದ ನನ್ನ ಪ್ರೌಢಶಾಲಾ ಗುರುಗಳೊಬ್ಬರ ಜೊತೆ, ಮೈಸೂರಿನ ಸುತ್ತೂರು ಮಠದಲ್ಲಿ ಸ್ವಾಮೀಜಿಯವರನ್ನು ಮೊದಲ ಬಾರಿಗೆ ದರ್ಶಿಸಿದೆ. ನನ್ನೊಡನಿದ್ದ ಗುರುಗಳು ಮಾತಿಗಾರಂಭಿಸಿದರು: "ಈತ ಒಳ್ಳೆಯ ಚರ್ಚಾಪಟು. ಇವನಿಗೆ ನೀವು ಕೆಲಸ ಕೊಟ್ಟರೆ ಒಳ್ಳೆಯ ಅಧ್ಯಾಪಕನಾಗುತ್ತಾನೆ..." ಮಧ್ಯದಲ್ಲಿ ಸ್ವಾಮೀಜಿಯವರು

ಶಿಫಾರಸು ಮಾಡುತ್ತಿದ್ದ ನನ್ನ ಗುರುಗಳನ್ನು ನಗುತ್ತ ಕೇಳಿದರು: "ಅದು ಸರಿ. ನೀವು ಯಾರು?" ನನ್ನನ್ನು ಪರಿಚಯಿಸಿ 'ಇನ್‌ಫ್ಲೂಯೆನ್ಸ್' ಮಾಡುತ್ತಿರುವವರ ಪ್ರಭಾವ ಎಷ್ಟೆಂದು ಅರಿವಾಗಿ ನನಗೂ ನಗು ಬಂತು. ತಡೆದುಕೊಂಡೆ. ನನ್ನನ್ನು ಪರಿಚಯಿಸಿದವರು ಅನಂತರ ತಮ್ಮ ಪರಿಚಯವನ್ನೂ ಮಾಡಿಕೊಳ್ಳಬೇಕಾಯಿತು!

ಸ್ವಾಮೀಜಿಯವರು ಕೇಳಿದ ಪ್ರಶ್ನೆಯಿಂದ ಕೆಲಸ ಸಿಕ್ಕಿತೆಂಬ ಆಸೆಯನ್ನು ತೊರೆದು ಮಠದಿಂದ ಹೊರಬಂದೆವು. ಆದರೆ ಮುಂದೆ 8-10 ದಿನಗಳೊಳಗೆ ಆಶ್ಚರ್ಯ ಸಂತೋಷವನ್ನುಂಟುಮಾಡುವಂತೆ ಅಧ್ಯಾಪಕನಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠ ನೇಮಿಸಿಕೊಂಡ ಆಜ್ಞೆ ನನ್ನ ಕೈಸೇರಿತ್ತು!

1967ನೇ ಜುಲೈ ಒಂದರಿಂದ ಮಹಾವಿದ್ಯಾಪೀಠದ ನೌಕರರ ಲ್ಲೊಬ್ಬನಾಗಿ ಅಧ್ಯಾಪಕನಾದ ಮೇಲೆ, ಶ್ರೀಗಳವರನ್ನು ವರ್ಷಕ್ಕೆ ಎರಡು ಮೂರು ಬಾರಿ ದರ್ಶಿಸಿರಬಹುದು. ಈ ಭೇಟಿಗಳಲ್ಲಿಯೂ, ಶಿಕ್ಷಕರ ಪ್ರತಿನಿಧಿಯಾಗಿ, ಒಂದಿಲ್ಲೊಂದು ಸಮಸ್ಯೆಯ ಪರಿಹಾರಕ್ಕಾಗಿ ಮಾಡಿರುವ ಭೇಟಿಗಳೇ ಹೆಚ್ಚೆನ್ನಬೇಕು. 1972ನೇ ಇಸವಿ ಇರಬೇಕು. ನಮ್ಮ ವಿದ್ಯಾರ್ಥಿಯೂ ಆಗಿದ್ದು, ಅನಂತರ ಸಹೋದ್ಯೋಗಿಯೂ ಆಗಿದ್ದ ಸ್ಥಳೀಯ ಅಧ್ಯಾಪಕರೊಬ್ಬರನ್ನು ಖಾಯಂಗೊಳಿಸುವಂತೆ ಕೋರಲು 8-10 ಜನ ಅಧ್ಯಾಪಕರು ಸ್ವಾಮೀಜಿಯವರನ್ನು ಭೇಟಿ ಮಾಡಿದ ಒಂದು ಸಂದರ್ಭ. ಈ ತಂಡದಲ್ಲಿ ಅತಿ 'ನಿಷ್ಠಾವಂತ'ರೆಂದು ಭಾವಿಸಿಕೊಂಡಿದ್ದ ಒಬ್ಬರು "ಬುದ್ಧೀ, ನನ್ನನ್ನ ಬೇಕಾದರೆ ಕೆಲಸದಿಂದ ತೆಗೆಯಿರಿ; ನನ್ನ ಹೆಂಡತಿಯೂ ಅಧ್ಯಾಪಕಿಯಾಗಿರುವುದರಿಂದ ಚಿಂತೆಯಿಲ್ಲ; ಆದರೆ ಈ ನಮ್ಮ ಸಹೋದ್ಯೋಗಿಯನ್ನು ಮಾತ್ರ ಖಾಯಂಗೊಳಿಸಿ" ಎಂದು ಪ್ರಾರ್ಥಿಸಿದರು. ಈ ದೇಶಾವರಿ ಪ್ರಾರ್ಥನೆಯ ಮರ್ಮವನ್ನರಿತ ಸ್ವಾಮಿಗಳು, ಮುಗುಳ್ನಗುತ್ತ ಅವರಿಗೆ "ನೀವು ನಾಟಕ ಚೆನ್ನಾಗಿ ಆಡ್ತೀರಿ, ಪರವಾಯಿಲ್ಲ!" ಎಂದರು. ನಮ್ಮ ಸಹೋದ್ಯೋಗಿಯ ಕೆಲಸ ಖಾಯಂ ಆಯಿತು. ಆದರೆ ಖಾಯಂ ಆದದ್ದು ಸ್ವಾಮೀಜಿಯವರ ಮಾನವೀಯತೆಯಿಂದ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ. ಸ್ವಾಮೀಜಿಯವರು ಆಗಾಗ್ಗೆ ಅನೌಪಚಾರಿಕವಾಗಿ ಹಾಗೂ ಔಪಚಾರಿಕ ವಾಗಿಯೂ ಹೇಳುತ್ತಿದ್ದುದು: "ನಮ್ಮ ಅಧ್ಯಾಪಕರು, ಸಿಬ್ಬಂದಿವರ್ಗ ನಮ್ಮನ್ನು ಹೊಗಳಬೇಕಾಗಿಲ್ಲ; ಬದಲಾಗಿ ಅವರವರ ಕಾಯಕವನ್ನು ಅವರು ನಿಷ್ಠೆಯಿಂದ ನಿರ್ವಹಿಸಿದರೆ ನಮಗದೇ ಸಂತೋಷ" ಎನ್ನುತ್ತಿದ್ದರು.

ಸಾಮಾನ್ಯವಾಗಿ ಯಾವುದೇ ಒಂದು ಆಡಳಿತ ವರ್ಗ ತನ್ನ ನೌಕರರ ಸಂಘಟನೆಯನ್ನು ಮನಃಪೂರ್ವಕವಾಗಿ ಸಹಿಸಿಕೊಳ್ಳುವುದಿಲ್ಲ. ಈ ಮಾತಿಗೆ ಅಪವಾದವಾಗಿದ್ದವರು ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು. ಖಾಸಗಿ ಕಾಲೇಜು ನೌಕರರ ಕನಿಷ್ಠ ಹಾಗೂ ಮೂಲಭೂತ ಬೇಡಿಕೆ ಗಳಾಗಿದ್ದ, ಸರ್ಕಾರವೇ ನೇರವಾಗಿ ವೇತನ ಪಾವತಿ ಮಾಡಬೇಕು; ತ್ರಿವಿಧ ಸೌಲಭ್ಯ ಜಾರಿಗೆ ಬರಬೇಕು; ಸೇವಾಭದ್ರತೆಗೆ ಶಾಸನದತ್ತ ನಿಯಮಗಳ ರಚನೆಯಾಗಬೇಕೆಂಬ ಬೇಡಿಕೆಗಳು ಇನ್ನೂ ಬೇಡಿಕೆ ಗಳಾಗಿಯೇ ಇದ್ದ 1970 ದಶಕದ ಆರಂಭದ ವರ್ಷಗಳಲ್ಲಿ ಜೆಎಸ್‌ಎಸ್ ಕಾಲೇಜುಗಳಲ್ಲಿಯೂ

ಅಧ್ಯಾಪಕರ ಸಂಘಗಳು ಅಸ್ತಿತ್ವಕ್ಕೆ ಬಂದವು. ಶ್ರೀಗಳ ಶ್ರೀರಕ್ಷೆಯಲ್ಲಿ ಬೆಳೆಯುತ್ತ ಬಂದ ಈ ಸಂಘಗಳು "ಮೈಸೂರು ವಿಶ್ವವಿದ್ಯಾನಿಲಯ ಖಾಸಗಿ ಕಾಲೇಜು ಅಧ್ಯಾಪಕರ ಸಂಘಟನೆಯಲ್ಲಿ ಜೆಎಸ್‌ಎಸ್ ಕಾಲೇಜುಗಳು ಒಂದು ವಿಶಿಷ್ಟ ಸ್ಥಾನ ಪಡೆದುಕೊಂಡಿವೆ" ಎಂದು ಇತರ ಕಾಲೇಜುಗಳ ಅಧ್ಯಾಪಕ ಬಂಧುಗಳು ಮೆಚ್ಚುಗೆ ವ್ಯಕ್ತಪಡಿಸುವಷ್ಟರಮಟ್ಟಿಗೆ ಬೆಳೆದುವೆಂದರೆ ಉತ್ಪ್ರೇಕ್ಷೆಯಾಗಲಾರದು.

1973ರ ಏಪ್ರಿಲ್; ಕೆಳಹಂತದ ಆಡಳಿತದ ಅಕಾಲಿಕ ನಿರ್ಧಾರ ದಿಂದಲೋ ಏನೋ ಆ ಶೈಕ್ಷಣಿಕ ವರ್ಷದ ಆರಂಭದಲ್ಲಿ ನೇಮಿಸಿ ಕೊಂಡಿದ್ದ ಇಬ್ಬರು ಅಧ್ಯಾಪಕರನ್ನು ವರ್ಷದ ಕೊನೆಯಲ್ಲಿ ರಿಲೀವ್ ಮಾಡಲಾಗಿತ್ತು. ಆಗಷ್ಟೇ ಅಸ್ತಿತ್ವಕ್ಕೆ ಬಂದಿದ್ದ ಮೈಸೂರಿನ ಜೆಎಸ್‌ಎಸ್ ಕಾಲೇಜು ಅಧ್ಯಾಪಕರ ಸಂಘ ತನ್ನ ಈ ಇಬ್ಬರು ಸದಸ್ಯರನ್ನುಳಿಸಿಕೊಳ್ಳಲು ಕಾಲೇಜು ಮಟ್ಟದಲ್ಲಿ ಪರೀಕ್ಷೆಗಳನ್ನು ಬಹಿಷ್ಕರಿಸಲು ನಿರ್ಧರಿಸಿತು. ಆದರೆ ನಿರ್ಧಾರ ಕಾರ್ಯಗತವಾಗುವ ಪ್ರಮೇಯ ಒದಗಲಿಲ್ಲ. ಶ್ರೀಗಳ ಅಭಯಹಸ್ತ ಆ ಇಬ್ಬರು ಅಧ್ಯಾಪಕರನ್ನು ರಕ್ಷಿಸಿತು.

ಇದೇ ಸುಮಾರಿನಲ್ಲಿ ನಡೆದ ಮತ್ತೊಂದು ಘಟನೆ ನೆನಪಾಗು ತ್ತದೆ. ಮೈಸೂರು ಜೆಎಸ್‌ಎಸ್ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರದ ರೀಡರ್ ಆಗಿದ್ದ ಪ್ರಸಿದ್ಧ ಕಥೆಗಾರ ದಿವಂಗತ ಕೆ. ಸದಾಶಿವ ಅವರು, ಸಮಾರಂಭ ವೊಂದರಲ್ಲಿ ತಮ್ಮ ಕಾಲೇಜಿನ ವಿದ್ಯಾರ್ಥಿಗಳ ಬಗ್ಗೆ ಅವಹೇಳನಕಾರಿ ಯಾಗಿ ಆಡಿದ್ದರೆನ್ನಲಾದ ಮಾತೊಂದರ ವಿರುದ್ಧ ವಿದ್ಯಾರ್ಥಿಗಳು ಸಿಡಿದೆದ್ದರು. ಸದಾಶಿವ ಅವರನ್ನು ಡಿಸ್‌ಮಿಸ್ ಮಾಡಲು ಒತ್ತಾಯಿಸಿ ದರು; ಮುಷ್ಕರ ಆರಂಭಿಸಿದರು; ಪರಿಸ್ಥಿತಿ ಗಂಭೀರವಾಗಲಾರಂಭಿಸಿತು. ಈ ಹಿನ್ನೆಲೆಯಲ್ಲಿ ಸುತ್ತೂರಿನಲ್ಲಿದ್ದ ಸ್ವಾಮೀಜಿಯವರನ್ನು, ಅಧ್ಯಾಪಕರ ಸಂಘದ ಪ್ರತಿನಿಧಿಗಳೇ 'ಸದ್ಯಕ್ಕೆ ತಾತ್ಕಾಲಿಕವಾಗಿಯಾದರೂ ಸದಾಶಿವ ಅವರನ್ನು ಚಾಮರಾಜನಗರಕ್ಕೆ ವರ್ಗ ಮಾಡಿ' ಎಂದು ಕೋರಿದಾಗ, ಸ್ವಾಮಿಗಳು ಥಟ್ಟನೆ ಪ್ರಶ್ನಿಸಿದ್ದರು: "ಸತ್ಯಾಸತ್ಯತೆ ಯನ್ನು ಪರಿಶೀಲಿಸದೆ ವಿದ್ಯಾರ್ಥಿಗಳ ಒತ್ತಡಕ್ಕೆ ಮಣಿಯುವುದು ಉಚಿತವೆ?"

ಸ್ವಾಮೀಜಿಯವರು ತಾವಾಗಿ ಎಂದೂ ಪತ್ರಿಕಾ ಹೇಳಿಕೆ ಕೊಟ್ಟವರಲ್ಲ; ಒಮ್ಮೆ ಮಾತ್ರ ಹೇಳಿಕೆ ಕೊಟ್ಟರು. 1977ರ ಆಗಸ್ಟ್ ಕೊನೆ ಅಥವಾ ಸೆಪ್ಟೆಂಬರ್ ಮೊದಲ ವಾರವಿರಬೇಕು. ಖಾಸಗಿ ಕಾಲೇಜುಗಳ ನೌಕರರಿಗೆ ಸರ್ಕಾರವೇ ನೇರವಾಗಿ ವೇತನ ಪಾವತಿ ಮಾಡಬೇಕೆಂಬ 'ಚೆಕ್ ಪದ್ಧತಿ'ಯ ಬೇಡಿಕೆಯನ್ನು ಸರ್ಕಾರ ಒಪ್ಪುವ ಹಂತವನ್ನು ಮುಟ್ಟಿತ್ತು. ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲು ಬೆಂಗಳೂರಿನಲ್ಲಿ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ, ರಾಜ್ಯಮಟ್ಟದಲ್ಲಿ, ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ಸಭೆಯ ವ್ಯವಸ್ಥೆಯೂ ಆಗಿತ್ತು. ಆದಾಗ್ಯೂ ಬಹುಶಃ ಚೆಕ್ ಪದ್ಧತಿಯ ಮೂಲಕ ಸರ್ಕಾರದ ಹಸ್ತಕ್ಷೇಪ ಹೆಚ್ಚಾಗಿ, ಅಧ್ಯಾಪಕ ಹಾಗೂ ಸಿಬ್ಬಂದಿ ವರ್ಗದ ಮೇಲಿನ ಹತೋಟಿ ಸಡಿಲಗೊಳ್ಳಬಹುದೆಂಬ ಶಂಕೆಯಿಂದಲೋ ಮತ್ತು ಆ ಮೂಲಕ ಕಾಲೇಜುಗಳ ಶೈಕ್ಷಣಿಕ ಗುಣಮಟ್ಟ ಇಳಿಮುಖವಾಗಬಹು ದೆಂಬ ಕಳಕಳಿಯಿಂದಲೋ, ಕೆಲವೊಂದು ಪ್ರಭಾವೀ ಆಡಳಿತ

ಮಂಡಳಿಗಳು ಚೆಕ್ ಪದ್ಧತಿಗೆ ವಿರೋಧವಾಗಿದ್ದವು. ಈ ವಿರೋಧವನ್ನು ವಿಶ್ವಾಸವಾಗಿ ಪರಿವರ್ತಿಸಿ ನಿರ್ಧಾರ ಕೈಗೊಳ್ಳಬೇಕೆಂಬುದು ಸರ್ಕಾರದ ಇಂಗಿತವಾಗಿತ್ತು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯ ಖಾಸಗಿ ಕಾಲೇಜು ಅಧ್ಯಾಪಕರ ಸಂಘವು ಸುತ್ತೂರು ಶ್ರೀಗಳವರನ್ನು, ಚೆಕ್ ಪದ್ಧತಿಯನ್ನು ಸ್ವಾಗತಿಸಿ ಹೇಳಿಕೆ ಕೊಡಲು ಪ್ರಾರ್ಥಿಸಿತು. ಸ್ವಾಮೀಜಿಯವರು ಸಂಘದ ಮನವಿಯನ್ನು ಕೂಡಲೇ ಪುರಸ್ಕರಿಸಿ ಹೇಳಿಕೆ ಕೊಟ್ಟರು. ಶ್ರೀಗಳ ಹೇಳಿಕೆಗೆ ಇತರ ಆಡಳಿತ ಮಂಡಳಿಗಳ ವಿರೋಧವನ್ನು ನಿವಾರಿಸಲು ತುಂಬ ನೆರವಾಯಿತು. ರಾಜ್ಯದ ಖಾಸಗಿ ಕಾಲೇಜುಗಳ ಸಹಸ್ರಾರು ನೌಕರರು ಪ್ರತಿ ತಿಂಗಳ ಒಂದನೆಯ ದಿನಾಂಕದಂದೇ ಪೂರ್ಣವೇತನವನ್ನು ಪಡೆಯಲು ಅನುವಾಗುವ ಚೆಕ್ ಪದ್ಧತಿ ಜಾರಿಯಲ್ಲಿ ಶ್ರೀಗಳ ಹೇಳಿಕೆ ಒಂದು ಐತಿಹಾಸಿಕ ದಾಖಲೆಯಾಯಿತು.

ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಯೊಂದರ ಅಧ್ಯಕ್ಷರು ಮಾತ್ರವಾಗಿದ್ದರೆ ಸ್ವಾಮೀಜಿಯವರು ಮೇಲ್ಕಂಡ ಹೇಳಿಕೆ ಕೊಡುತ್ತಿರ ಲಿಲ್ಲ. ಅದನ್ನು ಮೀರಿದ ವ್ಯಕ್ತಿತ್ವ ಅವರದು. ಶಿಕ್ಷಣ ಸಂಸ್ಥೆಗಳ ಬೆಳವಣಿಗೆಯಲ್ಲಿ ಶಿಕ್ಷಕ ಮತ್ತು ಸಿಬ್ಬಂದಿವರ್ಗ ತೃಪ್ತರಾಗಿರ ಬೇಕಾದದ್ದೂ ಒಂದು ಮುಖ್ಯ ಅಂಶವೆಂಬುದು ಅವರಿಗೆ ತಿಳಿದಿತ್ತು. ಎಂತಲೇ ಶಿಕ್ಷಕರ ಸಂಘಗಳ ಚಟುವಟಿಕೆಗಳನ್ನು ಅವರು ಪ್ರೋತ್ಸಾಹಿಸಿ ದರು. 1985ನೇ ಜೂನ್‌ನಲ್ಲಿ ಬೆಂಗಳೂರಿನಲ್ಲಿ ಮೊದಲ ಬಾರಿಗೆ ಜರುಗಿದ ಅಖಿಲ ಭಾರತ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಗಳ ಫೆಡರೇಷನ್‌ನ ದ್ವೈವಾರ್ಷಿಕ ಅಧಿವೇಶನಕ್ಕೆ ಹಾಗೂ ಅದೇ ವರ್ಷ ನವೆಂಬರ್‌ನಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಖಾಸಗಿ ಕಾಲೇಜು ಅಧ್ಯಾಪಕರ ಸಂಘ ಏರ್ಪಡಿಸಿದ್ದ, ಭಾರತ ಸರ್ಕಾರದ ಹೊಸ ಶಿಕ್ಷಣ ನೀತಿಯನ್ನು ಕುರಿತ ವಿಚಾರಸಂಕಿರಣಕ್ಕೆ ಅವರು ನೀಡಿದ ಉದಾರ ಆರ್ಥಿಕ ನೆರವು ಸ್ಮರಣೀಯ. ಅಂತೆಯೇ, ಈ ಸಂಕಿರಣದಲ್ಲಿ ಭಾಗವಹಿಸಬೇಕಾಗಿದ್ದ ಸ್ವಾಮೀಜಿಯವರು ಅನಿವಾರ್ಯವಾಗಿ ಅಂದು ಮಂಗಳೂರಿನಲ್ಲಿ ಉಳಿಯಬೇಕಾಗಿ ಬಂದಾಗ ಅಲ್ಲಿಂದ ಕಳುಹಿಸಿದ್ದ ಸಂದೇಶದ ಈ ಸಾಲುಗಳು ಮನನೀಯ: "ರಾಷ್ಟ್ರದ ಶಿಕ್ಷಣ ನೀತಿಯನ್ನು ಕುರಿತು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ತಮ್ಮ ಸಂಘವು ಏರ್ಪಡಿಸಿರುವ ಈ ಕಾರ್ಯಕ್ರಮದಲ್ಲಿ ಭಾಗವಹಿಸ ಬೇಕೆಂಬ ನಿಮ್ಮ ಆಹ್ವಾನವನ್ನು ಸಂತೋಷದಿಂದಲೇ ಒಪ್ಪಿಕೊಂಡಿದ್ದೆವು. ನೂರಾರು ಕಾಲೇಜುಗಳಿಂದ ಬಂದು ಸಂಕಿರಣದಲ್ಲಿ ಪಾಲ್ಗೊಳ್ಳುವ ಅಧ್ಯಾಪಕರನ್ನು ನೋಡಿ ಆನಂದಿಸಿ, ಅವರ ವಿಚಾರಧಾರೆಯ ಚಿಂತನ-ಮಂಥನವನ್ನು ಕಿವಿಯಾರೆ ಕೇಳಬೇಕೆಂಬ ಉತ್ಕಟೇಚ್ಛೆ ನಮಗಿತ್ತು; ಈಗಲೂ ಇದೆ".

ಶಿಕ್ಷಕರ ಬಗ್ಗೆ ಇಷ್ಟೊಂದು ಪ್ರೀತಿ ವ್ಯಕ್ತಪಡಿಸಿದ ಸ್ವಾಮೀಜಿ ಯವರು ಶಿಕ್ಷಕರ ಸಂಘಗಳು ಮಾಡಬೇಕಾದ ಕೆಲಸಕಾರ್ಯಗಳ ಬಗ್ಗೆ ತಮ್ಮ ಸಂದೇಶದಲ್ಲಿ ಖಾಸಗಿ ಕಾಲೇಜುಗಳ ಅಧ್ಯಾಪಕರ ಸಂಬಳ ಸಾರಿಗೆಗಳ ಮೂಲಭೂತ ಸಮಸ್ಯೆಗಳು ನಿವಾರಣೆಯಾದ ಇತ್ತೀಚಿನ ವರ್ಷಗಳಲ್ಲಿ, ನಿಮ್ಮ ಸಂಘಗಳು ಶೈಕ್ಷಣಿಕ ವಿಚಾರಗಳಿಗೆ ಆದ್ಯತೆ ನೀಡಬೇಕೆಂಬ ನಿರೀಕ್ಷೆಯನ್ನು ಈ ವಿಚಾರ ಸಂಕಿರಣ ತಕ್ಕಮಟ್ಟಿಗೆ ಪೂರೈಸುತ್ತದೆಯೆಂದು ಭಾವಿಸುತ್ತೇವೆ.

ಅಂತೆಯೇ ಮುಂದಿನ ದಿನಗಳಲ್ಲಿ ನಿಮ್ಮ ಸಂಘವು ಇಂತಹ ಕಾರ್ಯಕ್ರಮಗಳನ್ನು ಹೆಚ್ಚುಹೆಚ್ಚಾಗಿ ಏರ್ಪಡಿಸಲಿ" ಎಂದೂ ಹಾರೈಸಿದ್ದರು.

ನೂರಾರು ಸಂಸ್ಥೆಗಳುಳ್ಳ, ಸಹಸ್ರಾರು ನೌಕರರನ್ನುಳ್ಳ ಒಂದು ಮಹಾಸಂಸ್ಥೆಯ ಅಧ್ಯಕ್ಷರಾಗಿದ್ದೂ, ನೌಕರವರ್ಗದ ಅಭಿಪ್ರಾಯಭೇದ ವನ್ನು, ಭಿನ್ನಮತವನ್ನು ಗೌರವಿಸುವ ದೊಡ್ಡ ಗುಣ ಸ್ವಾಮೀಜಿಯವರ ದಾಗಿತ್ತು. ಈ ಸಾಲುಗಳನ್ನು ಬರೆಯುವಾಗ, ಇದರ ಅನುಭವ ನನಗಾದ, ನನ್ನ ಪ್ರಚಲಿತ ಶಿಕ್ಷಣ: ಒಂದು ಚಿಂತನೆ ಗ್ರಂಥದ ಬಿಡುಗಡೆಯ ಸಮಾರಂಭದಲ್ಲಿ ಡಾ. ಯು.ಆರ್. ಅನಂತಮೂರ್ತಿಯವರು ಆಡಿದ ಮಾತಿಗೆ ಪ್ರತಿಕ್ರಿಯೆಯಾಗಿ ಸ್ವಾಮೀಜಿಯವರು ಆಡಿದ ಮಾತುಗಳು ನೆನಪಾಗುತ್ತವೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಕ್ಯಾಪಿಟೇಷನ್ ಶುಲ್ಕವನ್ನು ಕುರಿತು, ಜಾತಿಯನ್ನು ಕುರಿತು ನನ್ನ ಗ್ರಂಥದಿಂದ ಅನಂತಮೂರ್ತಿಯವರು ಕೆಳಕಂಡ ವಾಕ್ಯಗಳನ್ನು ಉಲ್ಲೇಖಿಸಿದರು:

"ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಸೀಟಿಗಾಗಿ 5,10 ಸಾವಿರದಿಂದ 50 ಸಾವಿರದಷ್ಟು ಕ್ಯಾಪಿಟೇಷನ್ ಫೀ ತೆರಲು ಶಕ್ತನಾದವನು ಶ್ರಮಪಟ್ಟು ಅಭ್ಯಸಿಸಿ ಶೇ.80, 90ಕ್ಕಿಂತಲೂ ಹೆಚ್ಚು ಅಂಕ ಗಳಿಸಿದವನನ್ನು ಹಿಂದೆ ತಳ್ಳಿ ಸೀಟು ಗಿಟ್ಟಿಸಿಕೊಳ್ಳಲು ಕಾನೂನು ಬದ್ಧವಾಗಿಯೇ ಅವಕಾಶವಿದೆ. ಹಣ 'ಗುಣ'ವನ್ನೂ ತಂದುಕೊಡಬಲ್ಲ ಶಿಕ್ಷಣನೀತಿ ಶಿಕ್ಷಣ ಕ್ಷೇತ್ರಕ್ಕೆ ಮಾರಕವಲ್ಲವೆ?"

ಜಾತೀಯತೆಯನ್ನು ಕುರಿತು "ಕ್ರೈಸ್ತರು ನಡೆಸುವ ಕಾಲೇಜಿನಲ್ಲಿ ಕ್ರೈಸ್ತರು ಮಾತ್ರ ಪ್ರಿನ್ಸಿಪಾಲರಾಗಲು ಸಾಧ್ಯ; ವೀರಶೈವರ ಆಡಳಿತಕ್ಕೊಳ ಪಟ್ಟ ಕಾಲೇಜಿನಲ್ಲಿ ವೀರಶೈವರೇ ಪ್ರಿನ್ಸಿಪಾಲರಾಗಬೇಕು; ಬ್ರಾಹ್ಮಣರ ಕಾಲೇಜಿನಲ್ಲಿ ಅಬ್ರಾಹ್ಮಣರಿಗೆ ಪ್ರಿನ್ಸಿಪಾಲರ ಹುದ್ದೆ ಲಭಿಸುವುದಾದರೂ ಹೇಗೆ?" ಎಂಬ ವಾಕ್ಯಗಳನ್ನು ಅವರು ಉಲ್ಲೇಖಿಸಿ, "ರೇಣುಕಪ್ರಸನ್ನ ಹೀಗೆ ಬರೆಯುತ್ತಾರೆ; ಹೀಗೆ ಬರೆದ ಮೇಲೂ ಅವರನ್ನು ಜೆಎಸ್‌ಎಸ್ ಕಾಲೇಜಿನಲ್ಲಿ ಇಟ್ಟುಕೊಂಡಿರುವುದನ್ನು ನೋಡಿದರೆ ಆ ಕಾಲೇಜಿನ ಬಗ್ಗೆ, ಅದನ್ನು ನಡೆಸುವವರ ಬಗ್ಗೆ ಗೌರವ ಬರುತ್ತದೆ" ಎಂದರು.

ತಮ್ಮ ಆಶೀರ್ವಚನದಲ್ಲಿ, "ಕ್ಯಾಪಿಟೇಷನ್ ಫೀ, ಡೊನೇಷನ್ ಗಳ ಬಗ್ಗೆ ಸೂಕ್ತ ವಿಶ್ಲೇಷಣೆಯೊಂದಿಗೆ ಉತ್ತರಿಸುತ್ತ, ಬಿಚ್ಚು ಮನಸ್ಸಿನಿಂದ ಮಾತನಾಡುವುದು ರೇಣುಕಪ್ರಸನ್ನ ಅವರ ಸ್ವಭಾವ; ನಮ್ಮ ಸಂಸ್ಥೆಯವರೇ ಆದರೂ ಸಂಸ್ಥೆಯಲ್ಲಿ ಏನಾದರೂ ಲೋಪದೋಷ ಗಳು ಕಂಡರೆ, ನಮ್ಮ ಬಗ್ಗೆ ಯಾವಾಗಲೂ ಅವರಿಗೆ ವಿಶ್ವಾಸವಿದ್ದರೂ ನೇರವಾಗಿ ಪ್ರತಿಭಟಿಸುವುದು ಅವರ ಸ್ವಭಾವ; ನಾವೂ ಕೂಡ ವಿಶ್ವಾಸವಾಗಿ ನಡೆಯುತ್ತೇವೆ" ಎಂದ ಸ್ವಾಮೀಜಿಯವರ ಮಾತುಗಳು ಇಂದಿಗೂ ನನ್ನ ಕಿವಿಯಲ್ಲಿ ಅನುರಣನಗೊಳ್ಳುತ್ತವೆ. ಕೆಲವು ಸಹೋದ್ಯೋಗಿ ಮಿತ್ರರು ನನ್ನನ್ನು 'ಆಂಟಿಮ್ಯಾನೇಜ್‌ಮೆಂಟ್' ಎಂದು ಕಟಕಿಯಾಡಿದ ನೋವನ್ನು ಸಾಂತ್ವನಗೊಳಿಸುತ್ತವೆ. ಅಂತೆಯೇ, ಅಲ್ಲಮನ ನೇತೃತ್ವದ ಅನುಭವ ಮಂಟಪವನ್ನು ಭಾರತದ ಮೊದಲನೆಯ ಪಾರ್ಲಿಮೆಂಟ್ ಎಂದು ಬಣ್ಣಿಸಿದ ಆಧುನಿಕ

ಕವಿಯೊಬ್ಬರ ಮಾತುಗಳೂ ನೆನಪಾಗುತ್ತವೆ. ಪ್ರಜಾಪ್ರಭುತ್ವ ತತ್ವಗಳುಳ್ಳ ಶರಣತತ್ವದ ಆ ಪಾರ್ಲಿಮೆಂಟಿನ ತಿರುಳಿಗೆ ಶ್ರೀಗಳವರು ಮೂರ್ತರೂಪರಾಗಿದ್ದರೆ ನಿಸುತ್ತದೆ.

ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಬೆಳೆಸಿದ ಸುತ್ತೂರು ಶ್ರೀಗಳವರ ಅನನ್ಯ ಸೇವೆಯ ಬಗ್ಗೆ ಕಳೆದ ವರ್ಷ ಶ್ರೀಗಳವರಿಗೆ ಅವರ 70ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಅರ್ಪಿಸಿದ 'ಅರ್ಚನ' ಅಭಿನಂದನ ಗ್ರಂಥದ ಮುನ್ನುಡಿಯಲ್ಲಿ ಮಹಾಕವಿ ಕುವೆಂಪು ಅವರು ಬರೆದಿರುವ ಮಾತುಗಳ ಉಲ್ಲೇಖವೊಂದೇ ಸಾಕು:

"ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ನಡೆಸುತ್ತಿರುವ ಚಟುವಟಿಕೆಗಳನ್ನು ಸುಮಾರು ನಲವತ್ತು ವರ್ಷಗಳಿಗೂ ಹೆಚ್ಚು ಕಾಲದಿಂದ ಗಮನಿಸುತ್ತ ಬಂದಿದ್ದೇನೆ. ಸಾವಿರ ಸಾವಿರ ಸಂಖ್ಯೆಯ ಬಡ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳನ್ನು ತೆರೆದು ಉಚಿತವಾಗಿ ಊಟವಸತಿಗಳನ್ನು ಕಲ್ಪಿಸಿ ಅನಕ್ಷರಸ್ಥರೋ, ಅಲ್ಪವಿದ್ಯಾವಂತರೋ ಆಗಿಯೇ ಉಳಿಯುತ್ತಿದ್ದ ಅನೇಕಾನೇಕ ಮಂದಿಗೆ ಪೂರ್ಣ ವಿದ್ಯಾವಂತರಾಗುವ ಅವಕಾಶವನ್ನು ಕಲ್ಪಿಸಿದ ಮಠಾಧೀಶರ ಅಗ್ರಪಂಕ್ತಿಯಲ್ಲಿದ್ದಾರೆ ಶ್ರೀ ಸುತ್ತೂರು ಸ್ವಾಮೀಜಿಗಳವರು. ಅಷ್ಟಕ್ಕೆ ನಿಲ್ಲದೆ ನೂರಾರು ಸಂಖ್ಯೆಯಲ್ಲಿ ಶಾಲೆ, ಕಾಲೇಜುಗಳನ್ನೂ ತಾಂತ್ರಿಕ ಶಿಕ್ಷಣಾಲಯಗಳನ್ನೂ ತೆರೆದು ವಿದ್ಯಾಭ್ಯಾಸದ ದಿಗಂತಗಳನ್ನು ಅವರು ವಿಸ್ತರಿಸಿದ್ದಾರೆ.

ಬದುಕಿನ ಬಗ್ಗೆ ಅಚಲವಾದ ವಿಶ್ವಾಸವನ್ನು ತಳೆದಿರುವ ನಮ್ಮಂತಹವರ ಆಸೆ ಇಷ್ಟೆ. ನಮ್ಮ ಜನದ ಬದುಕು ಹಸನಾಗಬೇಕು. 'ಪುರಾತನರು ಕಟ್ಟಿರುವ ಶಬ್ದಸೋಪಾನವನ್ನೇರಿ' ಬೆಳಕಿನ ಲೋಕವನ್ನು ಸೇರಿ ಅಲ್ಲಿ ಬಾಳಬೇಕು. ಶ್ರೀ ಸುತ್ತೂರು ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ನೂರು ವರ್ಷ ಬಾಳಿ ನಮ್ಮ ಈ ಆಸೆ ಪೂರ್ಣವಾಗಲು ಶ್ರಮಿಸುತ್ತಾರೆ ಎಂದು ಹಾರೈಸುತ್ತೇನೆ. ಜಗತ್ತಿನ ಎಲ್ಲ ಪ್ರಾಚೀನ ಮತ್ತು ಅರ್ವಾಚೀನ ಮಹಾಚೇತನಗಳೂ ಈ ಮಹತ್ಕಾರ್ಯಕ್ಕೆ ಬೇಕಾದ ಶಕ್ತಿಯನ್ನು ಅವರಿಗೆ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ."

ಶ್ರೀಗಳವರ 70ನೆಯ ಹುಟ್ಟುಹಬ್ಬದ ಮಂಗಳ ಸಮಾರಂಭದಲ್ಲಿ ಮಹಾಕವಿಯು ಸಲ್ಲಿಸಿದ ಪ್ರಾರ್ಥನೆ ಎಲ್ಲ ಶಕ್ತಿಗಳಿಗೂ ಮೀರಿದ ಶಕ್ತಿಗೆ ಕೇಳಿಸಿತೋ ಇಲ್ಲವೊ? ಮುಂದಿನ ನಾಲ್ಕು ತಿಂಗಳೊಳಗೇ ಶ್ರೀಗಳವರು ಕೀರ್ತಿಶೇಷರಾದರು! ಬಸವಣ್ಣನವರ ವಚನ ನೆನಪಾಗುತ್ತದೆ:

ಕಣ್ಗಳು ತುಂಬಿದ ಬಳಿಕ ನೋಡಲಿಲ್ಲ
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ
ಮನ ತುಂಬಿದ ಬಳಿಕ ನೆನೆಯಲಿಲ್ಲ
ಮಹಂತ ಕೂಡಲ ಸಂಗಮದೇವನ

"ಅನಂತ ಸಾಗರದ ಸಮತಲ ಕಂಡುಕೊಳ್ಳುವ ತನಕ ಹೊಳೆಯ ಹರಿತ. ಅರಿವು ಬರುವ ತನಕ ಕುರುಹಿನ ಉಪಾಸನೆ. ಅದಕ್ಕಾಗಿ ತಳಮಳ ಧಾವಂತ ಯಾತನೆ. ಸಾಗರ ಸಂಗಮವಾದ ಮೇಲೆ ನದಿಗೆ ಹರಿತವಿಲ್ಲ. ಆಗ ಕಣ್ಣು ಕಿವಿ ನಾಲಗೆ ಮೂಗು ಎಲ್ಲ ತುಂಬಿರುತ್ತವೆ. ಪೂರ್ಣವಾಗಿರುತ್ತವೆ. ತುಂಬಿದ ಮೇಲೆ ತುಂಬಿಕೊಳ್ಳಬೇಕಾದುದೇನೂ ಇಲ್ಲ. ಆಗ ಶಿವ ಬೇರೆಯಲ್ಲ! ತಾ ಬೇರೆಯಲ್ಲ."

ಲೌಕಿಕದ ಹರಿತ, ತಳಮಳ, ಧಾವಂತ, ಯಾತನೆಗಳನ್ನು ಮೆಟ್ಟಿ ನಿಲ್ಲುವ ಪೂರ್ಣ ದೃಷ್ಟಿ, ಸ್ಥೈರ್ಯವೇ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಹುಟ್ಟುಹಬ್ಬದ ಸಂದೇಶವೆನಿಸುತ್ತದೆ. ಆ ಸ್ಥೈರ್ಯವೇ ಸಾಕಾರಗೊಂಡಂತಿದ್ದ ಜಗವೆಲ್ಲ ನಗುತಿರಲಿ ಜಗದಳಲು ನಮಗಿರಲಿ ಎಂಬ ಧ್ಯೇಯ ವಾಕ್ಯವನ್ನು ಸದಾ ನುಡಿಯುತ್ತ ಅದಕ್ಕಾಗಿ ತಮ್ಮನ್ನೇ ಅರ್ಪಿಸಿಕೊಂಡ ಅವರಿಗೆ ಇಗೋ ಮತ್ತೊಮ್ಮೆ ನಮನ.

**ಕೃಪೆ : 'ಘನ–ಮನ' (ಜೆಎಸ್ಎಸ್ ಗ್ರಂಥಮಾಲೆ ಪ್ರಕಟಣೆ)**

ಆದಿ ಅನಾದಿ ತತ್ವವ ಭೇದಿಸಿಕೊಟ್ಟ ಗುರುವೆ
ಅಪ್ರಮಾಣದ ಬೆಳಗ ಭೇದಿಸಿಕೊಟ್ಟ ಗುರುವೆ
ಅಕಾರ ಉಕಾರ ಮಕಾರ ಕಳೆಯನರುಹಿಸಿಕೊಟ್ಟ ಗುರುವೆ
ಇಷ್ಟ ಪ್ರಾಣ ಭಾವವಿದೆಂದು ತೋರಿದ ಗುರುವೆ
ನಿಜದರಿವನರುಹಿಸಿಕೊಟ್ಟ ಗುರುವೆ
ನಿರ್ಮಳಪ್ರಭೆಯ ತೋರಿದ ಗುರುವೆ
ನಿಜವನನುಭವಕ್ಕೆ ತಂದ ಗುರುವೆ
ನಿಮ್ಮ ಘನವ ಕಾಬ ಕಣ್ಣು ಕ್ರಮಗೆಟ್ಟಿತ್ತು ಸಂಗಯ್ಯಾ
ಬಸವನ ಪ್ರಭೆ ಎಲ್ಲಿ ಅಡಗಿತ್ತೊ?

**ನೀಲಮ್ಮ**

ವೀರಶೈವ ಟೀಕು ಸಾಹಿತ್ಯ ಸರಣಿ

# ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

ಪಾಡೆ – ಝೇಂಕರಿಸಿ ಹಾಡಲು, ಕಲಕಂಠ – ಕೋಗಿಲೆಗಳ, ಕಾಹಳಿಕಾರವಂ – ಕೊಂಬಿನ ಕೂಗೂ, ವಿಜೃಂಭಿಸೆ – ಹೆಚ್ಚುತ್ತಿರಲು, ಶುಕ – ಗಿಳಿಗಳೆಂಬ, ವಂದಿವೃಂದ – ಹೊಗಳುಭಟರ ಗುಂಪು, ಪೊಗಳೆ – ಹೊಗಳುತ್ತಿರಲು, ಗಂಧವಹಂ – ಗಾಳಿಯು, ಸುಗಂಧಸಾರಮಂ – ಪರಿಮಳದ ತನಿಯನ್ನು, ಉಪಾನಂಗೈಯ್ಯೆ – ಕಾಣಿಕೆ ಮಾಡುತ್ತಿರಲು, ಮಧುಸಚಿವಂ – ಚೈತ್ರನೆಂಬ ಮಂತ್ರಿಯು, ಮೈವೆರ್ಚೆ – ಉಬ್ಬಿ, ಬೆಸನಂ ಸಾರ್ದು – ಅಪ್ಪಣೆಯ ಪಡೆದು, ಸಮ್ಮುಖದೋಳ್ – ಎದುರಿನಲಿ, ಸಂಭ್ರಮಿಸಿ – ತಿರುಗಿ, ನೆಲಸೆ – ಕುಳ್ಳಿರಲು, ಮಾಕಂದಾದಿ – ಸಿಹಿಮಾವು ಮೊದಲಾದ, ಸುಭಟರ್ – ವೀರರಾದ ಆಳುಗಳು, ನಿಜಾಸ್ತ್ರಂಗಳಂ – ತಮ್ಮ ಆಯುಧಗಳನ್ನು, ಪಿಡಿದು – ಹಿಡಿದು, ಬಳಿಸಂದು – ಹತ್ತಿರ ಸೇರಿ, ಬಳಸಿ ನಿಂದು – ಸುತ್ತಿ ನಿಂತು, ಓಲಗಿಸೆ – ಸೇವಿಸುತ್ತಿರಲು, ಸುರಗಿಯ – ಸುರಗಿಹೂವಿನ, ಪರಾಗ – ಪುಪ್ಪುಡಿಯ, ಪುಂಜದ – ಗುಡ್ಡೆಯ, ಪೊಂಜಗುಲಿಯೋಳ್ – ಚಿನ್ನದ ಜಗುಲಿಯಲ್ಲಿ, ಪವಡಿಸಿ – ಮಲಗಿ, ಕುಸುಮವಿಸರದ – ಪುಷ್ಪಪುಂಜದ, ಎಸಳ – ರೇಕುಗಳ, ಪೊಸವಸೆಯೋಳ್ – ಹೊಸ ಹಾಸಿಗೆಯಲ್ಲಿ, ಒಸಗೆ ಮಿಗೆ – ಸಂತೋಷ ಹೆಚ್ಚಲು, ರತಿಯುವವೆರಸಿ – ರತೀದೇವಿಯೆಂಬ ಪ್ರಾಯದ ಹುಡುಗಿ ಕೂಡಿ, ಗಾಡಿಯಿಂ – ಸೊಗಸಿನಿಂದ, ಕುಳ್ಳಿರ್ದ – ಕುಳಿತಿರುವ, ಮದನಮಹೀರಮಣನ – ಕಾಮರಾಯನ, ನಯನೋತ್ಸವಕ್ಕೆ – ನೇತ್ರಾನಂದಕ್ಕೋಸುಗ, ಕಟ್ಟಿದಿರೋಳ್ – ಸರಿಯಾಗಿ ಮುಂಭಾಗದೊಳು, ಸರಿಯೂಡಿನ – ಸರಿಯಾಗಿ ಹೂಡಿದ, ಬಿರುಸುಗಟ್ಟಿ – ಬಿರುಸು ಬಾಣಗಳನ್ನು ಕಟ್ಟಿ, ರಚಿಸಿದ – ಮಾಡಿದ, ಕುರುಜೆಂಬಂತೆ – ಸಣ್ಣ ತೇರೋ ಎಂಬ ಹಾಗೆ, ಇರಲು – ಇರುವಂತೆ, ಅಲರ್ಪುಡಿಯಂ – ಪುಪ್ಪುಡಿಯನ್ನು, ಸೂಸುವ – ಉದುರಿಸುವ, ಕನಕರುಚಿರ – ಬಂಗಾರದಂತೆ ಬೆಳಗುವ, ನಿಚಿತ – ಸಾಂದ್ರಮಾದ, ಸುಮನೋಗಣದಿಂ – ಹೂವುಗಳ ಗುಂಪಿನಿಂದ, ಅಲಂಕೃತಿವೆತ್ತು – ಅಲಂಕಾರವಂ ಪಡೆದು, ಸೊಂಪುಗರೆವ – ಸುಖವನ್ನು ವರ್ಷಿಸುವ, ಚಂಪಕಪ್ರತಾನಮುಂ – ಸಂಪಿಗೆಯ ಮರಗಳ ತೋಪೂ, ತನ್ನನ್ನು

ಪೊತ್ತು – ಹೊತ್ತುಕೊಂಡು, ಮನ್ನಣೆಯಿಂ – ಮೆಚ್ಚಿಗೆಯಿಂದ, ಮುನ್ನಂ – ಪೂರ್ವಕಾಲದೊಳು, ಪೊರೆಯೇರಿಸಿ – ಬೆಳೆಯಿಸಿ, ಪೊರೆದ – ಸಲಹಿದ, ಮಣಿಗರ್ಭೆಗೆ – ಭೂದೇವಿಗೆ, ಅಣಿಯರಂ – ಅತಿಶಯಮಾಗಿ, ಬಾಗಿ – ತಗ್ಗಿ, ಬಳ್ಕಿ – ನಡುಗಿ, ಮಣಿವ – ನಮಸ್ಕರಿಸುವ, ಮಾಳ್ಕೆಯಿಂ – ಬಗೆಯಿಂದ, ಪಣ್ತು – ಫಲಿತ, ಬಿಣ್ಪೊಗ್ನೆಯಿಂ – ಬಿಗಿಯಾದ ಗೊನೆಗಳಿಂದ, ಎರಗಿ – ಬಗ್ಗಿ, ನಿಂದ – ನಿಂತಿರುವ, ರಾಜಕದಳಿಗಳುಂ – ಅರಸುಬಾಳೇಗಿಡಗಳು, ನಿಜ – ತನ್ನ, ಏಕಫಲದಿಂ – ಒಂದು ಹಣ್ಣಿನಿಂದಲೇ, ಪಲಂಬರಂ – ಅನೇಕರನ್ನು, ತಣಿಸಲ್ – ತೃಪ್ತಿಗೊಳಿಸುವದಕ್ಕೆ, ಸಮರ್ಥಮಾಗಿ – ಶಕ್ತಿಯಾಗಿ, ಬಹುಫಲಗಳಿಂ – ಹಲವು ಹಣ್ಣುಗಳಿಂದ, ಓರ್ವನಂ – ಒಬ್ಬನನ್ನು, ತಣಿಪುವ – ತೃಪ್ತಿಗೊಳಿಸುವ, ವಶ್ಯತರುಗಳಿಂ – ವಶವಾಗಿರುವ ಮರಗಳು, ನಿಜಸುರಭಿಗೆ – ತನ್ನ ಪರಿಮಳಕ್ಕೆ, ಎರಗುವ – ವಾಲಿಬೀಳುವ, ಪರಮೆವರಿಯ – ತುಂಬಿಯ ಮರಿಯ, ತುರುಗೆಲ – ಗುಂಪಿನ, ವರರವದ –ಶ್ರೇಷ್ಠ ಧ್ವನಿಯೆಂಬ, ವ್ಯಾಜದಿಂ – ನೆವದಿಂದ, ನಕ್ಕಪುದು – ನಗುವುದು ಎನಿಸಿ, ಸುಜನನಂತೆ – ಸತ್ಪುರುಷನ ಹಾಗೆ, ಬಹುಕಂಟಕಂಬಡೆದು – ಬಹಳಮುಳ್ಳುಗಳನ್ನು ಪಡೆದು, ಇರ್ದುಂ – ಇದ್ದು ಕೂಡ, ಅನ್ಯರ್ಗೆ – ಹೆರವರಿಗೆ, ಹಿತಮಂ – ಉಪಕಾರವನ್ನು, ಸಾರ್ಚಲ್ – ಮಾಡುವುದಕ್ಕೆ, ಎಳಸುವ – ಅಪೇಕ್ಷಿಸುವ, ಫಲಂಗಳಿಂ ತಳ್ತ – ಹಣ್ಣುಗಳಿಂದ ತುಂಬಿದ, ಬಕ್ಕೆವಲಸುಗಳಂ – ಬಕ್ಕೆಹಲಸಿನ ಮರಗಳಂ, ನಂದನದೊಳು – ವನದಲ್ಲಿ, ಅಂದಂಬಡೆದು – ಸೊಗಸನ್ನು ಹೊಂದಿ, ನಲಿದಾಡುವ – ಸಂತಸದಿಂ ಕುಣಿವ, ಕಲಾಪಿಗಳ – ನವಿಲುಗಳ, ಕೆಳತನಕ್ಕೆ – ಸ್ನೇಹಕ್ಕೆ, ಒಳ್ತಂದು – ಬಂದು, ನಿಂದು – ನಿಂತ, ಕಾರ್ಮುಗಿಲಂತೆ – ಕಪ್ಪು ಮೋಡದ ಹಾಗೆ, ಪೆರ್ಮೆವಡೆದ – ಘನತೆಯಂ ಪಡೆದ, ತರುಣ – ಎಳಸಾದ, ತಮಾಲತರುಗಳುಂ – ಹೊಂಗೆಯ ಮರಗಳು, ವನವನಧಿಯ – ಕಾದಂಬಕಡಲಿನ, ಬಡಬಶಿಖವಹಂ – ಬಡಬಾಗ್ನಿಯು, ಎನೆ – ಎಂಬಂತೆ, ಮನೋಜ್ಞಮಾಗಿ – ಸೊಗಸಾಗಿ, ಪೂತು – ಪುಷ್ಪಿಸಿ, ಒರಗುವ – ಬಗ್ಗಿದ, ಕಿಂಶುಕ – ಮುತ್ತುಗದ ಗಿಡಗಳ, ಸಮುದಯಮುಂ – ಗುಂಪು, ತಂಬೆಲರೆಂಬ – ತಂಗಾಳಿಯೆಂಬ, ಪೊಂಬರದನ್ – ಹೊನ್ನಿನ ಹರದನು (ಸರಾಪು), ಅಲರ್ವೊನ್ನಂ – ಪುಷ್ಪವೆಂಬ ಚಿನ್ನವನ್ನು, ಪರ್ಣಕಷೋ೯ಪಲದೊಳು – ಎಲೆ ಎಂಬ ಒರೆಗಲ್ಲಿನೊಳಗೆ, ಒರೆಯಲ್ – ಉಜ್ಜಲು, ಸುರಿದು – ಸೋರಿ, ಪರಿದ – ಚೆಲ್ಲಿದ, ಪೊಂಬುಡಿಯಂತೆ – ಬಂಗಾರದ ರಜದ ಹಾಗೆ, ಪಿಂಜರ – ಹಳದಿಯೆಂಬಣ್ಣವಾದ, ರಜೋಗುಣದಿಂ – ಪುಡಿಯ ಗುಂಪಿನಿಂದ, ಸುರುಚಿರಮಾದ – ಬಹಳ ಮನೋಹರವಾಗಿರುವ, ಸುರಯಿಯುಂ – ಸುರಾಯಿ ಮರಗಳು, ಪೊಂದಳಿಗೆ – ಹೊಂನಿನ ತಳಿಗೆ – ಚಿನ್ನದ ಬಟ್ಟಲುಗಳ, ತೋರಣಮಂ – ಅಡ್ಡಪಟ್ಟಿಕೆಯನ್ನು, ಓರಣದಿಂ – ಓರಸೆಯಿಂದ

ಕಟ್ಟಿದಂತೆ, ಅರಲ್ದ – ಅರಳಿದ, ಕುಸುಮಂಗಳಿಂ – ಹೂವುಗಳಿಂದ, ಕಂಗೊಳಿಪ – ಹೊಳೆಯುತ್ತಿರುವ, ಕರ್ಣಿಕಾರಂಗಳುಂ – ಬೆಟ್ಟದಾವರೆ ಗಿಡಗಳು, ಕುಮುದಾಮೋದದೋಳ್ – ಬಿಳುದಾವರೆಯ ಪರಿಮಳದಿಂದ, ಪೊರೆದ – ಸಲಹಿದ, ಹಿಮಕರ–ಚಂದ್ರನ, ಸುಧಾಕಿರಣದ – ತಂಗದಿರಿನ, ತಿರುಳಂತೆ – ಸಾರಾಂಶದ ಹಾಗೆ, ರಮಣೀಯಮಾದ – ಚೆಲುವಾದ, ಪರಿಮಳವ – ಸುವಾಸನೆಯನ್ನು, ಕಂದರ್ಪಸಹಚರಂ – ಮನ್ಮಥನ ಸಂಗಾತಿಯು, ವರಪುವ – ಹರಡಿಸುತ್ತಿರುವ, ಕರ್ಪೂರದಳಿಗಳುಂ – ಪಚ್ಚಕರ್ಪೂರದ ಎಳೆಯ ಬಾಳೆಯ ಗಿಡಗಳು, ಗಿಳಿ – ಗಿಣಿಯು, ಕರ್ದುಂಕೆ – ಕಚ್ಚುತಲೂ, ಸುರಿವ – ಸೋರುವ, ಪರಿಪಕ್ವಫಲ – ಮಾಗಿದ ಹಣ್ಣಿನ, ರಸದಿಂ – ದ್ರವದಿಂದ, ನೆಲನೆಲ್ಲಮಂ – ಬುಡದ ನೆಲನೆಲ್ಲವನ್ನು, ಪರ್ಬಿ – ಹಬ್ಬಿಕೊಂಡು, ಪಸರಿಸಿದ – ಹರಡಿದ, ಅಂದಂಗೊಳಿಪ – ಸೊಗಸನ್ನುಂಟುಮಾಡುವ, ಸರಸತರ ಅಭ್ಯಂತರಸದಿಂ ಕೂಡಿದ, ದ್ರಾಕ್ಷಾಲತೆಗಳುಂ – ಚಪ್ಪರದ ದ್ರಾಕ್ಷಾಬಳ್ಳಿಗಳೂ, ಭ್ರಮರನಿವಹ – ತುಂಬಿವಿಂಡಿನ, ಪುರಾಕೃತಪುಣ್ಯ – ಪೂರ್ವಜನ್ಮದಲ್ಲಿ ಮಾಡಲ್ಪಟ್ಟ ಸುಕೃತದ, ಉರುಳಿಗಳಂತೆ – ಉಂಡೆಗಳ ಹಾಗೆ, ಎಸೆವ – ಪೊಳೆವ, ಬಿರಿಮುಗುಳ್ಗಳಿಂ – ಅರಳಿದ ಮೊಗ್ಗೆಗಳಿಂದ ಅಥವಾ ಬಿರುಸಾದ ಮೊಗ್ಗೆಗಳಿಂದ, ಸಲ್ಲಲಿತಮಾದ – ಸಮೀಚೀನವು ಕೋಮಲವು ಆದ, ಮಲ್ಲಿಗೆಗಳುಂ – ದುಂಡುಮಲ್ಲಿಗೆಯ ಬಳ್ಳಿಗಳು, ಮಧುರಸ – ಜೇನಿನಲ್ಲಿ, ಆಸಕ್ತ – ಅನುರಕ್ತವಾದ, ಮಧುಕರವ್ರಜ – ಭೃಂಗ ಸಮೂಹದ, ಮಧುರರವ – ಇಂಚರದ, ವ್ಯಾಜದಿಂ – ನೆವದಿಂದ, ಮಧುವಂ – ವಸಂತನನ್ನು ಕರದು, ಬನಸಿರಿಯೋಳ್ – ವನಲಕ್ಷ್ಮಿಯೊಡನೆ, ನೆರಪಿ – ಸೇರಿಸಿ, ಮಧುದೂತಿನಾಮಮಂ – ಮಧುದೂತಿಯೆಂಬ ಹೆಸರನ್ನು (ಮಧುವೆಂಬನಿಗೆ ಕುಂಟಣಿಗಿತ್ತಿ), ಸಾರ್ಥಕಮಂ – ಅರ್ಥದಿಂದ ಕೂಡಿದ್ದನಾಗಿ, ಮಾಳ್ಪ – ಮಾಡುವ, ಮಾಧವಿಯುಂ – ಬೇಸಗೆಯೊಳಾಗುವ ಗುಲಗುಂಜಿಯ ಬಳ್ಳಿಗಳು, ಗಸಗಳ್ತಲೆಯ – ವನದೊಳಗಿನ ಕತ್ತಲೆಯ, ಬಂದಿಗೆ – ಕಳ್ಳರ ಕಾಟಕ್ಕೆ, ಒಳಗಾದ – ಸಿಕ್ಕಿದ, ಕಮಲಾಕರ – ಕೊಳವೆಂಬ, ಹಿಮಕರನಂ – ಚಂದ್ರನನ್ನು, ಆರಯ್ಯಲು – ಆದರಿಸಲೊಸುಗ, ಇಳಿತಂದ – ಇಳಿದುಬಂದ, ತಾರೆಗಳಂ – ನಕ್ಷತ್ರಗಳನ್ನು, ಪೋಲ್ದ – ಹೋಲುವ, ಪೊಗಳಿಂತಳ್ತ – ಹೂವುಗಳುಂ ತುಂಬಿದ, ಯೂಧಿಕೆಗಳುಂ – ಕಾಡುಮಲ್ಲಿಗೆ ಗಿಡಗಳು, ಬಿರಯಿಗಳ – ವಿರಹಿಗಳ, ಉರಮಂ – ಎದೆಯನ್ನು, ನಟ್ಟು – ನಾಂಟಿ, ಉರ್ಚಿ – ಹೊರಹೊಮ್ಮಿ, ರುಧಿರಂ – ರಕ್ತವನ್ನು, ಪೊರೆದ – ಪೋಷಿಸಿದ, ಮದನಶರ – ಕಾಮನ ಸರಳಿನ, ವಿಷರದಂತೆ – ಗುಂಪಿನ ಹಾಗೆ, ಎಸೆವ – ಶೋಭಿಸುವ, ಕುಸುಮ ಸಂದೋಹದಿಂ – ಪುಷ್ಪಪುಂಜದಿಂದ, ಬಂಧುರಮಾದ – ಚಲುವಾದ, ಬಂದುಗೆಯಿಂ – ಬಂದೂಕ ವೃಕ್ಷಗಳು (ಚಂಬೊನ್ನೆ – ಬಂಧುಜೀವನವೃಕ್ಷ),

ಭೃಂಗಬುಜಂಗನು – ತುಂಬಿಯೆಂಬ ವಿಟನು, ಅಪ್ಪಿ, ಆಲಿಂಗಿಸಿ, ಚುಂಬಿಸಿ ಮುತ್ತಿಡಲು, ತೊಟ್ಟನೆ – ಬೇಗನೆ, ತೊರದ – ಹೊರಟು, ಬಾಯ್ದೆರೆಯಂತೆ – ಜೊಲ್ಲಿನ ಹಾಗೆ, ಬಗೆಗೊಳ್ವ – ಮನೋಹರವಾಗುವ, ಮಧುರಮರಂದಮಂ – ಸವಿಯಾದ ಜೇನನ್ನು, ತುಳ್ಕುವ – ಚಲ್ಲುವ, ಅಲರ್ಗಳಿಂ – ಪುಷ್ಪಗಳಿಂದ, ಲಲಿತಮಾದ – ಕೋಮಲವಾದ, ಮಾಲತಿಯುಂ – ಜಾಜಿಯ ಗಿಡಗಳು, ಹರವಿರೋಧಿಯೆಂದು – ಶಿವದ್ವೇಷಿಯೆಂದು, ಎನ್ನಂ – ನನ್ನನ್ನು, ಬನಸಿರಿ – ವನಲಕ್ಷ್ಮಿಯು, ಬಹಿಷ್ಕರಿಸಿ – ಹೊರಗೆ ಹಾಕಿ, ಮಗುಳ್ದು – ಮತ್ತು, ಎನ್ನ – ನನ್ನ, ಅನ್ನನಪ್ಪ – ಪ್ರಿಯನಾದ ಒಡೆಯನಾದ, ಕಂತುವನ್ – ಮನ್ಮಥನನ್ನು, ಎಂತೊಳಕೊಂಡಳ್ – ಹೇಗೆ ತನ್ನೊಳಗಿರಿಸಿಕೊಂಡಳು ಎಂದು, ಕನಲ್ದು – ಸಿಟ್ಟುಗೊಂಡು, ಪಲ್ಮೊರವಂತೆ – ಹಲ್ಲು ಕಡಿಯುತ್ತಿರುವ ಹಾಗೆ, ನಿಜ – ತನ್ನ, ಸುಮನಃಪರಿಮಳ – ಪುಷ್ಪಗಂಧಕ್ಕೆ, ಮಿಳಿತ – ಸೇರಿದ, ಭ್ರಮರಕುಲ– ತುಂಬಿವಿಂಡಿನ, ಕಲಕಲರವದಿಂ, ಝೇಂಕಾರ ಕೋಲಾಹಲ ಧ್ವನಿಯಿಂದ, ಕಲಿತಮಾದ – ಕೂಡಿದ್ದಾದ, ಕೇತಕಿಯುಂ – ಕೇತಕಿಯ ಗಿಡಗಳು, ಪಿಂಗದೆ – ಹಿಂಗದೆ, ಕಂಗೊಳಿಪ – ಪ್ರಕಾಶಿಸುವ, ಪೆಂಪಂ – ಅತಿಶಯವನ್ನು, ಆಳ್ದು – ಪೋಷಿಸಿ, ತನ್ನೊಳಿರೆ – ಆನಂದದಲ್ಲಿರಲು, ತಂಪಿನ ತವರ್ಮನೆಯು – ಶೈತ್ಯಕ್ಕೆ ಜನ್ಮಗೃಹವಾಗಿಯು, ಕಂಪಿನ ಕಾರಾಗಾರಮುಂ – ಪರಿಮಳಕ್ಕೆ ಸೆರೆಮನೆಯಾಗಿಯೂ, ಭ್ರಮರಗಣ ಪ್ರಭಾಮಂಟಪಮುಂ – ತುಂಬಿವಿಂಡಿಗೆ ಅರವಟ್ಟಿಗೆಯ ಚಪ್ಪರವಾಗಿಯೂ, ಮದನ ಬಾಣಶಾಲೆಯುಂ – ಮನ್ಮಥನ ಸರಳ ಮನೆಯಾಗಿಯೂ, ಕಲಾಪಿಗಳ – ನವಿಲುಗಳ, ಲಾಸ್ಯರಂಗಸ್ಥಳ – ನಾಟ್ಯದ ಗರಡಿಯಾಗಿಯೂ, ಕೆಂಗಣ್ಣಕ್ಕಿಗಳ – ಕೋಗಿಲೆಗಳ, ಸಂಗೀತಸದನಮಂ – ಹಾಡಿನ ಮನೆಯಾಗಿಯೂ, ಮಲಯಾನಿಲನ – ಮಲಯಪರ್ವತದ ಗಾಳಿಗೆ, ವಿಹಾರವೀಧಿಯುಂ – ವಿನೋದದ ಬೀದಿಯಾಗಿಯೂ, ಶುಕದ್ವಿಜಂಗಳ – ಗಿಳಿಹಕ್ಕಿಗಳಿಗೆ (ಶುಕಾದಿ ಬ್ರಾಹ್ಮಣರಿಗೆ), ಅಧ್ಯಯನಪದ್ಮಮುಂ – ಪಾಠಶಾಲೆಯಾಗಿ, ಚೈತ್ರರಾಜನ – ವಸಂತರಾಯನ, ರಾಜಧಾನಿಯುಂ – ಪ್ರಧಾನ ನಗರವಾಗಿಯೂ, ಮದನಮಹೀಪತಿಯ – ಕಾಮಭೂಪಾಲನ, ಮಹಾಶಿಬಿರಮುಂ – ದೊಡ್ಡ ದಂಡುಪಾಳ್ಯವಾಗಿಯು, ವನಲಕ್ಷ್ಮಿಯ – ಬನಸಿರಿಯ, ವಿನೋದಮಂದಿರಮುಂ – ವಿಹಾರಗೃಹವಾಗಿಯು ಇರುವುದು, ಎನಿಸಿ – ಎನ್ನಿಸಿಕೊಂಡು, ಸುಮನೋಜ – ಒಳ್ಳೆ ಮನಸ್ಸುಳ್ಳ ಜನಗಳಿಗೆ, ಮನೋಜ್ಞತರಂ – ಅತ್ಯಂತ ಮನೋಹರವಾಗಿರುವುದು, ಎನಿಸಿ, ಗಿರಿಕಟಕನಂದನ – ಬೆಟ್ಟದ ತಪ್ಪಲಿನ ವನವು, ಮುದಂಬೆತ್ತು – ಸಂತಸಮಂ ಪಡೆದು, ಕಂಗೊಳಿಸಿರ್ದುದು – ಕಾಣಿಸುತಿತ್ತು, ಅಂತುಮಲ್ಲದೆ – ಹಾಗೂ ಅಲ್ಲದೆ;

**ತಾತ್ಪರ್ಯವು** ॥ ಆ ಬೆಟ್ಟದೊಳಗಿನ ವನದಲ್ಲಿ ಜಂಬುನೇರಳೆಯ ಮರಗಳಿಗೆ ತುಂಬಿಗಳು

ಮುಸುಕಿರಲು, ಮೇಲಣ ಎಲೆಗಳು ಬಿಸಲಿನಂಶಪ್ಪೇರಿ ಹೊಳೆಯುತ್ತಿರಲು, ಆ ತೋಪು ವಸಂತಮಾಧವನ ಹಾಗಿತ್ತು. ಅದರ ಚಿಗುರುಗಳು ಪೀತಾಂಬರದ ಹಾಗೆ, ಕೋಗಿಲೆಯ ಸ್ವರವು ಶಂಖಧ್ವನಿಯಂತೆಯೂ, ಸುಳಿಗಾಳಿಯು ಚಕ್ರಾಯುಧದಂತೆಯೂ, ಇದ್ದದ್ದರಿಂದ ನೇರಳೆಯ ಮರವು ನೀಲಮೇಘಶ್ಯಾಮನಾಗಿ, ಪೀತಾಂಬರಧಾರಿಯಾಗಿ, ಶಂಖಚಕ್ರಗಳಂ ಧರಿಸಿದ ವಸಂತಮಾಧವನೋ ಎಂಬಂತೆ, ಭಾವಧ್ವನಿ ತೋರುತ್ತೆ. ಪಸುರ್ಗ್ಗಾಯಿಗಳು ಪಚ್ಚೆಗಳಂತೆಯೂ, ದೋರೆಹಂಣುಗಳು ಕೆಂಪುಗಳಂತೆಯೂ, ಕಳಿತ ಹಣ್ಣುಗಳು ಇಂದ್ರನೀಲದ ಹಾಗೂ ತೋರುವದರಿಂದ ನೇರಳೆಯ ಮರವು ರತ್ನಗಳನ್ನು ಫಲಿಸಿರುವ ಕಲ್ಪವೃಕ್ಷವೋ ಎಂಬ ಹಾಗಿತ್ತು. ಉಪಮೋತ್ಪ್ರೇಕ್ಷಾಲಂಕಾರಗಳ ಸಂಸೃಷ್ಟಿ. ತೆಂಗಿನಮರವು ಭೂಮಿಯ ತೋಳಂತೆಯೂ, ಎಳನೀರು ಕಾಯಿ ಮರಕತಕಲಶದಂತೆಯೂ, ಒಳಗಣ ನೀರು ಅಮೃತದಂತೆಯೂ ಇತ್ತೆಂಬ ಉಪಮಾಲಂಕಾರವು ಗಮ್ಯವಾಗಿದೆ. ಅಡಿಕೆಯ ಮರಗಳ ಸಾಲಿನೊಳು ಮೇಲ್ಗಡಿಯಲ್ಲಿ ಪಸುರ್ಕಾಯಿಗಳ ಗೊಂಚಲ್ಗಳು ಕಾಣುತ್ತಿರಲು ಭೂದೇವಿಯು ತನ್ನ ಭಾಗ್ಯವನ್ನು ದೇವತೆಗಳಿಗೆ ತಿಳುಹಿಸಲೋಸುಗ ಮರಕತಮಣಿಗಳಿಂದ ತೋರಣವಂ ಕಟ್ಟಿರ್ಪಳೋ ಎಂಬಂತೆ ತೋರಿತು. ಕಂಕೆಲ್ಲಿಯ ಮರಂಗಳು ಕೆಂಚಿಗುರ್ಗಳಿಂ ತುಂಬಿರಲು ಮನ್ಮಥನ ವಿಜಯಯಾತ್ರೆಗೆ ಮಧುಮಾಸವೆಂಬ ಸಚಿವನು ಇಂದ್ರಗೋಪ ಬಣ್ಣದ ಚಿತ್ರವಸ್ತ್ರಗಳಿಂದ ಗುಡಾರಗಳನ್ನು ಹೊಯ್ಸಿರುವನೊ ಎಂಬಂತೆ ತೋರುವದು. ದಾಳಿಂಬೆ ಮರಗಳಲ್ಲಿ ಅದರ ಹಣ್ಣುಗಳು ಪಕ್ವವಾಗಿ ಬಂದಿರಲು ವಿರಹಿ ವಿರಹೋಷ್ಮದಿಂದ ಸೀಳಿದ ಮನ್ಮಥ ನರನರನ್ನ ದನರನ್ನದ ಬುರುಡಿಗಳೋ ಎಂಬ ಹಾಗಿದ್ದವು. ಶೃಂಗಾರವನದಲ್ಲಿ ಮದನ ಮಹಾರಾಜನು ರತೀಸಹಿತನಾಗಿ ಉತ್ಸವಕ್ಕೆ ಕುಳಿತಿರುವಾಗ ಬಳ್ಳಿಗಳೆಂಬ ನಟಿಯರು ಕುಣಿಯುತ್ತಿದ್ದರು. ತುಂಬಿಗಳು ಹಾಡಿದವು. ಕೋಗಿಲೆಗಳು ಕಾಳೆಯನೂದಿದವು. ಗಿಳಿಗಳು ಪೊಗಳಿದವು. ತಂಗಾಳಿಯು ಪರಿಮಳದ ಕಾಣಿಕೆ ಇತ್ತುದು. ಸೀಮಾವು ಮೊದಲಾದವುಗಳು ಮನ್ಮಥಾಯುಧಂಗಳಂ ಪಿಡಿದು ಸೇವಿಸಿದವು. ಸಂಪಿಗೆಯ ಮರವು ಉತ್ಸವದ ಕುರಂಜನ ಹಾಗಿತ್ತು. ಅರಸುಬಾಳೆಗಳು ಪಣ್ಗೊನೆಗಳಿಂದ ಬಗ್ಗಿರಲು, ತಮ್ಮನ್ನ ಪೊರೆದ ಭೂದೇವಿಗೆ ತಾವು ಕೃತಜ್ಞತೆಯಿಂದ ಫಲಸಮರ್ಪಣಂಗೈಯ್ವವೋ ಎಂಬ ಹಾಗಿದ್ದವು. ಅಂಥ ವನಗಳ ನಡುವೆ ಕೆಲವು ಕಡೆಗಳೋಳ್ ಗುತ್ತಿಗೆದಾರರ ಕಾವಲುಳ್ಳ ಹಲಸಿನ ಮರಂಗಳಲ್ಲಿ ಒಂದೊಂದು ಹಣ್ಣಿನಿಂದಲೇ ಅನೇಕ ಪ್ರಾಣಿಗಳು ತೃಪ್ತಿಗೊಳ್ಳಬಹುದಾಗಿದ್ದವು. ಅನೇಕ ವೃಕ್ಷಗಳವರ ಸ್ಸಹಸ್ರಫಲಂಗಳಿಂದಲೂ ಓರೋರ್ವನೇ ತೃಪ್ತಿಗೊಳ್ಳುತಿದ್ದವು. ಬಕ್ಕೆವಲಸಿನ ಮರಗಳು ಹಣ್ಣುಗಳ ಮೇಲಣ ಸಿಪ್ಪೆಯ ಸಣ್ಣ ಮುಳ್ಳುಗಳಿಂದ ಕಂಟಿಕ ವೃಕ್ಷಗಳೆನಿಸಿದರೂ ಸತ್ಪುರುಷರಂತೆ ಪರಹಿತಪ್ರಯೋಜಕಂಗಳಾಗಿ ಭೃಂಗರವದ ನೆವದಿಲಂದ ನಗುತ್ತಿರುವ ಹಾಗಿದ್ದವು. ಹೊಂಗೆಮರಗಳ ತೋಪು ನವಿಲುಗಳ ಕೆಳೆತನಕ್ಕೆ ಬಂದ ಕಪ್ಪುಮೋಡದಂತೆ

ತೋರಿತು. ಪುಷ್ಪಿಸಿದ ಮುತ್ತುಗದ ತೋಪು ವನವೆಂಬ ಕಡಲಿನ ಬಡಬಾಗ್ನಿಯ ಹಾಗೆ ಕೆಂಪಾಗಿ ರಂಜಿಸಿತು. ಸುರಾಯಿ ಗಿಡಗಳ ಹಳದಿಯ ಪುಪ್ಪುಡಿಯ ತಂಗಾಳಿಯೆಂಬ ಸರಾಪನು ಬಂಗಾರನನ್ನು ಒರೆಗಲ್ಲಿನಲ್ಲಿ ಉಜ್ಜಿ ಸೂಚಿಸಿದ ಚಿನ್ನದ ಪುಡಿಯೋ ಎಂಬ ಹಾಗಿತ್ತು. ಕರ್ಣಿಕಾರ ವೃಕ್ಷಗಳ ಹೂವುಗಳು ಚಿನ್ನದ ಹರಿವಾಣಗಳ ತೋರಣದ ಕಟ್ಟಿನಂತೆ ರಾಜಿಸಿತು. ಕರ್ಪೂರಬಾಳೆಗಳ ಪಚ್ಚಕರ್ಪೂರವು ಚಂದ್ರಕಿರಣಗಳಂತೆ ಬಿಳುಪಾಗಿ ತಣ್ಪುಗೊಳಿಸಿದವು. ದ್ರಾಕ್ಷಿಯ ಬಳ್ಳಿಗಳು ಗೊಂಚಲ್ಗಳಿಂದ ಗಿಳಿಗಳು ಕುಚ್ಚಿ ಚಲ್ಲಿದ ವಸವು ಅದರ ಪಾತಕಗಳಲ್ಲಿ ವರ್ಬಿ ತೋರಿದವು. ಮಲ್ಲಿಗೆಯ ಬಳ್ಳಿಗಳಲ್ಲಿ ದುಂಡುಮೊಗ್ಗುಗಳು ತುಂಬಿಗಳ ಪುಣ್ಯಪುಂಜದ ಹಾಗಿದ್ದವು. ಗುಲಗಂಜಿಯ ಬಳ್ಳಿಗಳು ಭೃಂಗರವ ಝೇಂಕಾರದ ನೆವದಿಂದ ಮಧುಮಾಸವಂ ಕರೆದು ವನಲಕ್ಷ್ಮಿಯೋಳ್ ನೆರಪುವ ಹಾಗಿದ್ದುದರಿಂದ ಅದಕುಂಭಾಗಿರ್ದ ಮಧುದೂತಿಯೆಂಬ ಹೆಸರು ಸಾರ್ಥಕವಾದಂತೆ ಇತ್ತು. ಬಿಳಿಶಾವಂತಿಗೆಯ ಕಿರುಮೊಗ್ಗುಗಳು ವನದೊಳಗಿನ ಕತ್ತಲೆಯಲ್ಲಿ ಸಿಲುಕಿದ ಚಂದ್ರನಂ ಹಾಯಲ್ಬಂದ ನಕ್ಷತ್ರಗಳೋ ಎಂಬಂತೆ ಇರ್ದವೆಂಬುದರಿಂದ ವನದ ವೃಕ್ಷಗಳು ಚಂದ್ರಮಂಡಲಕ್ಕಿಂತಲೂ ಮೇಲಕ್ಕೆ ಅತ್ಯುನ್ನತವಾಗಿ ಬೆಳಗಿದ್ದವೆಂಬತಿಶಯೋಕ್ತ್ಯಲಂಕಾರವು. ಬಂದೂಕವೃಕ್ಷಗಳ ಕುಸುಮಗಳು ಕಂದರ್ಪ ಬಾಣಗಳ ಹಾಗೆ ಕಮನೀಯಗಳಾಗಿರ್ದವು. ಜಾಜಿ ಹೂವುಗಳಿಂದ ಜಗುಳುವ ಮಕರಂದವು ತುಂಬಿಗಳು ಚುಂಬಿಸಿದಾಗ ತೆರದ ಬೇಯಿದೊರೆಯ ಹಾಗಿತ್ತು. ತೋಟದ ಹೊರಬೇಲಿಯಲ್ಲಿರುವ ಕೇದಗೆಯು ಹರವಿರೋಧಿಯೆಂದು ತನ್ನ ಹೊರಚ್ಚು ಮಾಡಿದ ವನವು ಹರಿವಿರೋಧಿಯಾದ ಕಾಮನಂ ಹೊರಚ್ಚು ಮಾಡದೆ ಒಡನಿರಿಸಿ ಕೊಂಡಿರುವದನ್ನು ಆಕ್ಷೇಪಿಸಿ ಭೃಂಗಕೋಲಾಹಲದ ನೆವದಿಂದ ಪಲ್ಮೊರೆಯುತ್ತಿರುವ ಹಾಗಿತ್ತು. ಇಂತಿಹ ವನವು ತಂಪಾಗಿ ಪರಿಮಳಿಸಿ, ತುಂಬಿಗಳಂ ತಣಿಸಿ, ಕಾಮಬಾಣಗಳಂ ಪೆರ್ಚಿಸಿ, ನವಿಲುಗಳಂ ಕುಣಿಯಿಸಿ, ಕೋಗಿಲೆಗಳಿಂ ಪಾಡಿಸಿ, ಪರಿಮಳದ ಗಾಳಿಯ ವಿನೋದಕ್ಕೆಡೆಯಾಗಿ, ಶುಕಾದಿ ದ್ವಿಜರಿಗೆ ಆಶ್ರಮವಾಗಿ, ಚೈತ್ರರಾಜನ ರಾಜಧಾನಿಯ ಹಾಗಿತ್ತು. ಕಾಮನ ದಂಡುಪಾಳ್ಯವೆನಿಸಿ ವನಶ್ರೀವಿಹಾರಸದ್ಮವೆನಿಸಿತೆಂದು ಸ್ವರೂಪೋತ್ಪ್ರೇಕ್ಷೆಯಿಂದ ಕೆಲವೆಡೆಯೊಳು ರೂಪಕಾಲಂಕಾರವು ರಮಣೀಯಮಾಗಿರ್ಪುದು.

(ಮುಂದುವರಿಯುವುದು)

# ಮಹಾನ್ ದಾರ್ಶನಿಕ ಬಸವಣ್ಣನವರು

**ಡಾ. ಆರ್.ಬಿ. ಚಿಲುಮಿ**

ಕಾರ್ತಿಕದ ಕಗ್ಗತ್ತಲಲ್ಲಿ ಆಕಾಶದೀಪವಾಗಿ ನೀ ಬಂದೆ
ಬಟ್ಟೆಗೆಟ್ಟವರಿಗೊಂದು ದೊಂದಿದಿಕ್ಕಾಗಿ ಎಂಟು ಶತಮಾನಗಳ ಹಿಂದೆ
ಅಗ್ನಿಡ್ಗವನಾಂತ ಓ ಆಧ್ಯಾತ್ಮ ಕ್ರಾಂತಿವೀರ
ದೇವದಯೆಯೊಂದೇ ಹೇ ಧೀರಾವತಾರ ಶ್ರೀ ಬಸವೇಶ್ವರ

ಎಂದು ಹೇಳಿದ ರಾಷ್ಟ್ರಕವಿ ಕುವೆಂಪುರವರ ಕವನದ ಈ ಸಾಲುಗಳು ನಾಡಿನ ಬದುಕಿಗೆ ವಿಶ್ವಗುರು ಬಸವಣ್ಣನವರ ಕೊಡುಗೆಯನ್ನು ಸ್ಮರಿಸುತ್ತವೆ. 2024ರ ಜನವರಿಯಲ್ಲಿ ಕರ್ನಾಟಕ ಸರಕಾರವು ಬಸವಣ್ಣನವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ಘೋಷಿಸುವ ಐತಿಹಾಸಿಕ ನಿರ್ಣಯವನ್ನು ಕೈಗೊಂಡಿತು. ಇದು ಎಲ್ಲ ಕನ್ನಡಿಗರಿಗೂ ಅತೀವವಾದ ಹಿಗ್ಗು ತಂದಿತು. ಬಸವಣ್ಣನವರು ಭವ್ಯ ಸಾಂಸ್ಕೃತಿಕ ಪರಂಪರೆಯಲ್ಲಿ ಬೆಳೆದು ಬಂದವರು. ಜಗತ್ತು ಈವರೆಗೂ ಕಂಡು ಕೇಳರಿಯದ ಅಪೂರ್ವ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ, ಸಾಹಿತ್ಯಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗೆ ಅಡಿಪಾಯವನ್ನು ಹಾಕಿ ಅದನ್ನು ಪ್ರಾಯೋಗಿಕವಾಗಿ ಸಾಧ್ಯವಾಗಿಸಿದ್ದು 12ನೆಯ ಶತಮಾನದ ಶರಣ ಪರಂಪರೆಯ ಸಾಧನೆ. ಇದರ ಧೀಮಂತ ನಾಯಕತ್ವವನ್ನು ವಹಿಸಿದವರು ಮಹಾಮಾನವತಾವಾದಿ ಜಗಜ್ಯೋತಿ ಬಸವಣ್ಣನವರು. ಮಾನವನ ಬೌದ್ಧಿಕ ಸಾಧನೆಯ ಒಟ್ಟಾರೆ ಅಭಿವ್ಯಕ್ತಿಗೆ 'ಸಂಸ್ಕೃತಿ' ಎನ್ನಬಹುದು. ಪ್ರತಿಯೊಂದು ಪ್ರದೇಶಕ್ಕೂ ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಇರುವುದನ್ನು ಗಮನಿಸಬಹುದು.

ಭಾರತವು ಬಹುಸಂಸ್ಕೃತಿಯ, ಬಹುಭಾಷೆಗಳ ದೇಶವಾಗಿ ಇಡೀ ವಿಶ್ವದಲ್ಲಿಯೇ ವಿಶಿಷ್ಟ ಸ್ಥಾನಮಾನವನ್ನು ಪಡೆದಿದೆ. ಭಾರತೀಯ ಸಂಸ್ಕೃತಿಯಲ್ಲಿ ಒಂದೊಂದು ರಾಜ್ಯವೂ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ. ಕರ್ನಾಟಕವೂ ಇಂತಹದೊಂದು ಭವ್ಯ ಸಂಸ್ಕೃತಿಯನ್ನು ಹೊಂದಿದೆ. ಇಲ್ಲಿ ಶರಣರು, ಸಂತರು, ದಾಸರು, ದಾರ್ಶನಿಕರು, ದ್ರಷ್ಟಾರರು, ವಿದ್ವಾಂಸರು ತಮ್ಮ ಕಾರ್ಯವೈಖರಿಯಿಂದ ಸಂಸ್ಕೃತಿಯನ್ನು ಸಮೃದ್ಧಗೊಳಿಸಿದ್ದಾರೆಂಬುದು ಸರ್ವವಿದಿತ. ಕನ್ನಡ ಸಂಸ್ಕೃತಿಗೆ ಸುಮಾರು 2,000 ವರ್ಷಗಳ ಇತಿಹಾಸವಿದೆ. ಕನ್ನಡದ ದೇಶಿ ಸಂಸ್ಕೃತಿ ಮೂಲತಃ ಶ್ರಮಸಂಸ್ಕೃತಿಯಾಗಿದೆ.

ಇದಕ್ಕೊಂದು ಸುವ್ಯವಸ್ಥಿತವಾದ ರೂಪವನ್ನು ಕೊಟ್ಟವರು ಬಸವಾದಿ ಶಿವಶರಣರು. ಶ್ರಮಸಂಸ್ಕೃತಿಯೇ ಅನಂತರದಲ್ಲಿ ಕಾಯಕಸಂಸ್ಕೃತಿ ಎಂಬ ಹೆಸರು ಪಡೆಯಿತು.

ಕಾಯಕದಲ್ಲಿಯೇ ಕೈಲಾಸವನ್ನು ಕಂಡವರು ಶರಣರು. ಬಸವಣ್ಣನವರು ಕೇವಲ ಸಮಾಜ ಸುಧಾರಕರಷ್ಟೇ ಅಲ್ಲ, ಒಂದು ನೂತನ ಸಂಸ್ಕೃತಿಯ ನಿರ್ಮಾಪಕರಾದರು. ವ್ಯಕ್ತಿಯ ಜೀವನಮಟ್ಟವನ್ನು ಸುಧಾರಿಸುವ ಕುಟುಂಬ ವ್ಯವಸ್ಥೆಯನ್ನು ಬಲಗೊಳಿಸುವ ರಾಷ್ಟ್ರದಲ್ಲಿ ಭಾವೈಕ್ಯತೆಯನ್ನು ಕಂಡುಕೊಳ್ಳುವ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಅವಲಂಬನೆ ಅವಶ್ಯಕ.

ಸಾಹಿತ್ಯಕವಾಗಿ ನೋಡುವುದಾದರೆ ಬಸವಪೂರ್ವ ಕಾಲದಲ್ಲಿ ಕನ್ನಡ ಸಾಹಿತ್ಯವು ಪ್ರೌಢರೀತಿಯ ಚಂಪೂಕಾವ್ಯ ಪ್ರಧಾನವಾಗಿ ಅವುಗಳನ್ನು ವಿದ್ವಾಂಸರೇ ರಚಿಸುತ್ತಿದ್ದರು ಮತ್ತು ಓದುತ್ತಿದ್ದರು. ಜನಸಾಮಾನ್ಯರಿಗೆ ಅದು ನಿಲುಕುತ್ತಿರಲಿಲ್ಲ. ಅಂಥದೊಂದು ಸಂದರ್ಭದಲ್ಲಿ ಉದಯಿಸಿದ್ದು ವಚನಸಾಹಿತ್ಯ. ಬಸವಣ್ಣನವರ ವ್ಯಕ್ತಿತ್ವದ ಆಳ ವಿಸ್ತಾರಗಳಿಂದ ಈ ಚಳುವಳಿ ಒಂದು ಹೆಜ್ಜೆ ಮುಂದೆ ಇರುವುದನ್ನು ಗಮನಿಸಬಹುದು. ಈ ಎಲ್ಲ ಗುಣಗಳಿಗೆ ಜೀವಂತ ಭಾಷ್ಯದಂತೆ ಬದುಕಿದ ಬಸವಣ್ಣನವರನ್ನು ಅರಸುತ್ತಾ ಬಂದವರು ಅಸಂಖ್ಯಾತ ಶರಣರು. ಅನಂತರ ಬಂದ ಕವಿಗಳು, ವಚನಕಾರರು ಈ ಶರಣಪರಂಪರೆಯ ಅದ್ವಿತೀಯ ನಾಯಕ ಬಸವಣ್ಣನೆಂದು ಒಪ್ಪಿಕೊಂಡಿರುವುದು ಐತಿಹಾಸಿಕ ಸಂಗತಿ. ಆ ಕಾರಣದಿಂದಲೇ ಅನುಭವಮಂಟಪದ ಅಧ್ಯಕ್ಷರಾಗಿದ್ದ ಅಲ್ಲಮಪ್ರಭುದೇವರು ಬಸವಣ್ಣನವರನ್ನು 'ಯುಗದ ಉತ್ಸಾಹ' ಎಂದು ಕರೆದರು. ಬಸವಣ್ಣನವರಲ್ಲಿ ಒಂದು ವಿನೂತನ ಶಕ್ತಿ ಇತ್ತು. ಅವರೊಬ್ಬ ಆದರ್ಶ ಮಹಾಪುರುಷ. 'ಎನಗಿಂತ ಕಿರಿಯರಿಲ್ಲ, ಶಿವಶರಣರಿಗಿಂತ ಹಿರಿಯರಿಲ್ಲ' ಎಂದ ಅವರ ನುಡಿ ಪರುಷ ಬಾಗಿದ ತಲೆಯ ಮುಗಿದ ಕೈಯಾಗಿ ಬಚ್ಚಬರಿಯ ಬಸವನಾಗಿ ಕೊನೆಯವರೆಗೂ ಇದ್ದುದು ಅಪ್ರತಿಮ ಸಂಗತಿ. ಅವರ ಪ್ರಮುಖ ಗುಣವೆಂದರೆ ನಿರಂತರ ಆತ್ಮಶೋಧ. ಇಂತಹ ಆತ್ಮನಿರೀಕ್ಷಣೆಯಿಂದ ನಿತ್ಯವೂ ಬದಲಾವಣೆಗೆ ತೆರೆದುಕೊಂಡಿದ್ದರಿಂದಲೇ ಅವರು ಶರಣಪರಂಪರೆಯ ಸಮರ್ಥ ನಾಯಕರಾಗಿ ಹೊರಹೊಮ್ಮುತ್ತಾರೆ. ಅವರ ಪ್ರತಿಭೆ ಮತ್ತು ಪ್ರೇರಣೆಯಿಂದಲೇ ವಚನಸಾಹಿತ್ಯ ರಚಿತವಾಗಿ ವಿಶ್ವಕ್ಕೆ ಹೊಸ ಬೆಳಕನ್ನು ನೀಡಿತು. ವಚನಗಳು ಸಮಸ್ತ ಜನಾಂಗಕ್ಕೂ ಪ್ರಿಯವಾಗಲು ಕಾರಣ ಅವುಗಳ ಸರಳತೆ, ಸುಭಗತೆ, ಮನಬಿಚ್ಚಿ ನುಡಿದಿರುವ ಮಾತುಗಳಿಂದಾಗಿ. ಬಿಜ್ಜಳನ ರಾಜ್ಯದಲ್ಲಿದ್ದ ದಮನಕಾರಿ ನೀತಿಯನ್ನು ಟೀಕಿಸಿದ ವಚನಗಳು ಲಭ್ಯವಿದೆ. ವಚನಗಳು ಎಂದೆಂದಿಗೂ ಚಲನಶೀಲ ಆಕಾಶದೀಪವಾಗಿ ಜನಮನವನ್ನು ಸೂರೆಗೊಂಡಿವೆ. ಶರಣರ ವಚನಗಳು ಭಾವಗೀತಾತ್ಮಕವಾಗಿವೆಯಲ್ಲದೆ ಸಂಗೀತದ ಲಯವನ್ನು ಹೊಂದಿದೆ. ವಚನಗಳು

ಬಹುತೇಕ ಕನ್ನಡಿಗರ ಮನೆಮಾತಾಗಿವೆ. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಕ, ಸಾಂಸ್ಕೃತಿಕ ಶಕ್ತಿಯನ್ನು ಎತ್ತಿಹಿಡಿದಿವೆ. 'ಆಡು ಮುಟ್ಟದ ಸೊಪ್ಪಿಲ್ಲ, ಶರಣರು ಬರೆಯದ ವಿಷಯಗಳು ಇಲ್ಲ' ಎಂಬಂತಿದ್ದು ಅವು ಎಲ್ಲರ ಬಾಳಿಗೆ ದಾರಿದೀಪವಾಗಿವೆ. ವಚನಗಳು ಶಾಶ್ವತ ಸತ್ಯದ ಬಿತ್ತುಗಳು, ಜೀವನಮೌಲ್ಯವನ್ನು ಸಾರುವ ಉಪದೇಶಾಮೃತಗಳು.

ಧಾರ್ಮಿಕವಾಗಿ ನೋಡುವುದಾದರೆ ವೀರಶೈವ–ಲಿಂಗಾಯತ ಪರಂಪರೆಯ ಮಠಗಳಲ್ಲಿ ಕಳೆದ 800 ವರ್ಷಗಳಿಂದ ನಡೆದುಬರುತ್ತಿರುವ ಅನ್ನದಾಸೋಹ, ಜ್ಞಾನದಾಸೋಹ ಇವುಗಳ ಮೂಲ ಬೇರುಗಳು ವಚನಸಾಹಿತ್ಯದಲ್ಲಿ ನಿಹಿತವಾಗಿವೆ. ದಾಸೋಹ ಮತ್ತು ಕಾಯಕ ತತ್ವಗಳ ಮಹಾನ್ ರೂವಾರಿ ಜಗಜ್ಯೋತಿ ಬಸವಣ್ಣ.

ಬಸವಣ್ಣನವರು ದುಡಿದುಣ್ಣುವ ಪದ್ಧತಿಯನ್ನು ಹುಟ್ಟುಹಾಕಿದವರು. ಕಾಯಕ ಮಾಡಿ ಫಲ ಪಡೆಯಬೇಕು. ದುಡಿತದಿಂದ ಬಂದ ದ್ರವ್ಯದಿಂದಲೇ ದಾನ–ದಾಸೋಹಗಳನ್ನು ನಡೆಸಬೇಕು. 'ದುಡಿಮೆಯೇ ದುಡ್ಡಿನ ತಾಯಿ' ಎಂಬ ಮೌಲ್ಯವನ್ನು ಬಿತ್ತಿ ಬೆಳೆದವರು ಬಸವಣ್ಣ! ಕಾಯಕದಲ್ಲಿ ಕೈಲಾಸವನ್ನು ಕಾಣಬೇಕು ಎಂದು ಪ್ರತಿಪಾದಿಸಿದವರು. ಯಾವ ಕಾಯಕವಾದರೂ ಸರಿಯೆ, ಅದರಲ್ಲಿ ಸ್ವರ್ಗಸುಖವಿದೆ ಎಂದು ಉಪದೇಶಿಸಿದರು. ಕಾಯಕದ ಬೆವರಿನಲ್ಲಿದೆ ಕೈಲಾಸದ ಪರಿಮಳ! ಕಾಯಕವನ್ನು ಒಂದು ಪೂಜೆಯನ್ನಾಗಿ ಮಾಡಿಕೊಳ್ಳಬೇಕು, ಅದರಲ್ಲಿ ಸಾಕ್ಷೀಪ್ರಜ್ಞೆ ಇರಬೇಕು. ಸತ್ಯಶುದ್ಧ ಕಾಯಕದಿಂದ ಸಾಧಕರಿಗೆ ಎಲ್ಲ ರೀತಿಯ ತೃಪ್ತಿ ಸಿಗುತ್ತದೆ. ಕಾಯಕದ ಸಂಪಾದನೆಯನ್ನು ದಾಸೋಹಕ್ಕೆ ಬಳಸಿದಾಗಲೇ ಅದು ಪ್ರಸಾದವಾಗುತ್ತದೆ. ಆಯ್ದಕ್ಕಿ ಮಾರಯ್ಯನವರು ತಮ್ಮ ಒಂದು ವಚನದಲ್ಲಿ ಹೇಳಿದಂತೆ –

> ಕಾಯಕದಲ್ಲಿ ನಿರತನಾದಡೆ
> ಗುರುದರ್ಶನವಾದಡೂ ಮರೆಯಬೇಕು
> ಲಿಂಗಪೂಜೆಯಾದಡೂ ಮರೆಯಬೇಕು
> ಜಂಗಮ ಮುಂದೆ ನಿಂದಿದ್ದರೂ ಹಂಗು ಹರಿಯಬೇಕು
> ಕಾಯಕವೇ ಕೈಲಾಸವಾದ ಕಾರಣ
> ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು

ಇದು ಕಾಯಕದ ಮಹತ್ವವನ್ನು ಹೇಳುತ್ತದೆ. ಕಾಯಕ ಮತ್ತು ದಾಸೋಹಂಭಾವಕ್ಕೆ ಶರಣಪಥದಲ್ಲಿ ಹೆಚ್ಚಿನ ಮಹತ್ವವಿದೆ. ನಿಸರ್ಗದತ್ತವಾದ ಕೊಡುಗೆಗಳೆಲ್ಲವೂ ಪರಮಾತ್ಮನ ಕೊಡುಗೆ ಎಂದೇ ಭಾವಿಸಬೇಕು. ಅವೆಲ್ಲವೂ ತಮ್ಮತಮ್ಮ ಪಾಲಿನ ಕಾಯಕವನ್ನು ಮಾಡುತ್ತಲಿವೆ. ಸೂರ್ಯನಿಗೆ ಬೆಳಕು ನೀಡುವ, ಚಂದ್ರನಿಗೆ ಬೆಳದಿಂಗಳನ್ನು ಕೊಡುವ, ಭೂಮಿಗೆ ಸೃಷ್ಟಿಕ್ರಿಯೆಯ, ಪಶುಪಕ್ಷಿಗಳಿಗೆ ಜೀವಜಾಲದ ಕೊಂಡಿಗಳಾಗುವ, ಕೀಟಗಳಿಗೆ ಪರಾಗಸ್ಪರ್ಶ ಮಾಡುವ ವಿವಿಧ ರೀತಿಯ ಕಾಯಕಗಳಲ್ಲಿ ತಲ್ಲಿನವಾಗಿರುವಾಗ ಮನುಷ್ಯನೂ

ಸಹ ಕಾಯಕಜೀವಿಯಾಗಿ ಇರಬೇಕಲ್ಲವೇ! ಕಾಯಕವಿಲ್ಲದ ಜೀವಜಗತ್ತು ನಿಷ್ಕ್ರಿಯವಾಗಿ ಬಿಡುತ್ತದೆ.

ಅದುವರೆಗೂ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ತಳ ಸಮುದಾಯದ ಜನಗಳಿಂದ ಹಿಡಿದು ರಾಜಮಹಾರಾಜರುಗಳೂ ಈ ತತ್ತ್ವಕ್ಕೆ ಮಾರುಹೋಗಿ ಮಹಾನ್ ಪರಿವರ್ತನೆಗೆ ಅಣಿಯಾದರು. ಈ ಎಲ್ಲರೂ ಸೇರಿಕೊಂಡು ಬಹುತೇಕ ಯಾವ ಸಾಹಿತ್ಯವರ್ಗವೂ ಮಾಡಿರದ ಹಸನಾದ ಕೆಲಸವನ್ನು ಮಾಡಿದರು; ವಚನಸಾಹಿತ್ಯವನ್ನು ನಿರ್ಮಿಸಿದರು. ಬಸವಾದಿ ಶರಣರ ದಿವ್ಯ ಮಾರ್ಗದರ್ಶನದಲ್ಲಿ ಮಾನವಕಲ್ಯಾಣಕ್ಕಾಗಿ ನಡೆದ ಸಮಗ್ರ ಕ್ರಾಂತಿ ಅಥವಾ ಆಂದೋಲನ ವಿಶ್ವದ ಯಾವುದೇ ಭಾಗದಲ್ಲಿ ಒಮ್ಮೆಲೇ ನಡೆದಿರುವ ಉದಾಹರಣೆಗಳೇ ಇಲ್ಲ. ಶರಣರು ಮಾಡಿದ ಸಮಗ್ರ ಕ್ರಾಂತಿಯನ್ನು ಮತ್ತಾವ ಕ್ರಾಂತಿಗೂ ಹೋಲಿಸಲಾರದು. ಇದಕ್ಕೆ ಮೂಲ ಕಾರಣ ಮಾನವ ಸಮುದಾಯದ ಎಲ್ಲ ಕ್ಷೇತ್ರಗಳ ಜನರು ಇದಕ್ಕೆ ಸ್ಪಂದಿಸಿ ನಾಂದಿ ಹಾಡಿದವರೆ ಬಸವಾದಿ ಶಿವಶರಣರು. ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಅವರ ಕ್ರಾಂತಿಕಾರಕ ವಿಚಾರಧಾರೆಯು ಮಾನವೀಯ ನೆಲೆಯಲ್ಲಿ ಅತ್ಯಂತ ಪ್ರಖರವಾಗಿ ಪ್ರವಹಿಸಿ ಬಂದುದು ಒಂದು ವಿಸ್ಮಯವೇ! ಇದಕ್ಕೆ ಮೂಲ ಪ್ರೇರಣೆಯಾದದ್ದೇ ಶರಣರ ದಾರ್ಶನಿಕ ಚಿಂತನೆಗಳು. ಅವು ಮಾನವೀಯ ಮೌಲ್ಯದ ಬದುಕನ್ನು ಕಂಡವು; ಸಮಗ್ರ ಜನಕಲ್ಯಾಣವನ್ನು ಬಯಸಿದವು. ಈ ಜೀವಪರ ಕ್ರಾಂತಿಯ ಮೂಲಕ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದುವು.

ಶರಣರ ಚಿಂತನೆಗಳಲ್ಲಿ ಪ್ರಮುಖವಾದವುಗಳೆಂದರೆ ಜಾತ್ಯತೀತ ಸಮಾಜ ನಿರ್ಮಾಣ, ಸರ್ವಸಮಾನತೆ, ಮಹಿಳಾ ಸಮಾನತೆ, ಕಾಯಕ ದಾಸೋಹಗಳ ಪರಿಕಲ್ಪನೆ, ನಡೆನುಡಿಯ ಸಮನ್ವಯ, ಸಹಕಾರತತ್ತ್ವ, ದೇಹವೇ ದೇವಾಲಯವೆಂಬ ಪರಿಕಲ್ಪನೆ, ಅಂತರಂಗ ಮತ್ತು ಬಹಿರಂಗದ ಏಕತೆ, ನಿಸರ್ಗದ ಬಗೆಗಿನ ವೈಚಾರಿಕ ಚಿಂತನೆಗಳಿಗೆ ಪ್ರೋತ್ಸಾಹ, ಡಾಂಭಿಕ ಬದುಕಿನ ಬಗೆಗೆ ಅರಿವು ಮೂಡಿಸುವುದು, ಇವೆಲ್ಲದಕ್ಕೂ ಹಿನ್ನೆಲೆಯಾಗಿ ಭಕ್ತಿಯೇ ಪ್ರಧಾನವೆಂಬ ತತ್ವದ ಪ್ರತಿಪಾದನೆ, ಎಲ್ಲರೂ ನಮ್ಮವರೇ ಎನ್ನುವ ವಿಶ್ವಭ್ರಾತೃತ್ವಭಾವ, ವಿನಮ್ರಭಾವದಿಂದ ಜಗತ್ತನ್ನೇ ಬೆಳಗಿದ ಜಗದ ಜ್ಯೋತಿ ಭಕ್ತಿಭಂಡಾರಿ ಶ್ರೇಷ್ಠ ಮಾನವತಾವಾದಿ ಬಸವಣ್ಣ. ಎಲ್ಲಕ್ಕಿಂತ ಮಿಗಿಲಾಗಿ ಶೋಷಣೆರಹಿತ ಸಮಾನತೆಯ ಸಮಾಜದ ಸೃಷ್ಟಿಗಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡವರು ಬಸವಣ್ಣ.

ಉತ್ತರ ಭಾರತಕ್ಕೆ ಹೋಲಿಸಿದಾಗ ದಕ್ಷಿಣ ಭಾರತವು ಹೆಚ್ಚು ಶಾಂತಿ ನೆಮ್ಮದಿ ಮತ್ತು ಪ್ರಗತಿ ಸಾಧಿಸಲು ಶರಣ ಪರಂಪರೆ ಕಾರಣವೆಂಬುದನ್ನು ಅಲ್ಲಗಳೆಯಲಾಗದು. ಬಸವಣ್ಣನವರ ಬಳಿಕ ಬಂದಂತಹ ಅನೇಕ ದಾರ್ಶನಿಕರು ಬಸವಣ್ಣನವರಿಂದ ಪ್ರೇರಣೆಯನ್ನು ಪಡೆದಿದ್ದಾರೆಂದು ನಿಸ್ಸಂಶಯವಾಗಿ ಹೇಳಬಹುದು. ಭಾರತೀಯ ಪರಂಪರಾಗತ ಮೌಲ್ಯಗಳನ್ನು ಜನಸಾಮಾನ್ಯರ ಅಂಗಳಕ್ಕೆ ಕೊಂಡೊಯ್ದಿರುವುದು ಇದಕ್ಕೆ ನಿದರ್ಶನ.

ಒಟ್ಟಾರೆಯಾಗಿ ವಿಶ್ವಗುರು ಬಸವಣ್ಣನವರು ಜಗತ್ತಿನ ಶ್ರೇಷ್ಠ ದಾರ್ಶನಿಕರಾದ ಬುದ್ಧ, ಮಹಾವೀರ, ಯೇಸು, ಪೈಗಂಬರ, ಗುರುನಾನಕ ಮುಂತಾದ ಮಹನೀಯರ ಸಾಲಿನಲ್ಲಿ ಬೆಳಗುವ ಮಹಾಮಹಿಮರು. ಎಲ್ಲ ದಾರ್ಶನಿಕರ ಗುಣಗಳನ್ನು ಅಳವಡಿಸಿಕೊಂಡು ಸರಳತೆಯ ಸಾಕಾರ ಮೂರ್ತಿಯಾಗಿ ಸದುವಿನಯ-ಸದ್ಗುಣಗಳ ಮೂರ್ತಸ್ವರೂಪರಾಗಿ ಲೋಕವನ್ನೇ ಬದಲಿಸಬಲ್ಲ ಸನ್ಮಾರ್ಗದತ್ತ ನಡೆಸಿದ ಕಾರಣಿಕ ಪುರುಷರಾದ ಬಸವಣ್ಣನವರು ಒಂದು ಜಾಗತಿಕ ವಿಸ್ಮಯವಾಗಿದ್ದಾರೆ. ಇಂಥವರ ಉದಾತ್ತ ವಿಚಾರಧಾರೆಗಳನ್ನು ನಮ್ಮ ನಡೆನುಡಿಯಲ್ಲಿ ಆಚರಿಸಿಕೊಂಡು ಅದನ್ನು ನಮ್ಮ ಜೀವನಕ್ರಮವಾಗಿಸುವ ಪ್ರಯತ್ನವನ್ನು ಮಾಡಬೇಕು.

❑

ಶಿವನೆ ಶಿವಭಕ್ತನಾಗಿ ಬಂದ ಲೋಕಹಿತಾರ್ಥ
ಶಿವನೆ ಶಿವರಹಸ್ಯವ ಬೋಧಿಸಲೆಂದು ಗುರುವಾಗಿ ಬಂದು
ಲಿಂಗದ ಕಳೆಯನರುಹಿದ ಲೋಕಹಿತಾರ್ಥ
ಶಿವನೆ ಚರವೇಷದಲ್ಲಿ ಬಂದು
ಅಂಗ ಮೊದಲು, ಮನವೆ ಕಡೆಯಾದ ಪದಾರ್ಥ
ದಾಸೋಹದಲ್ಲಿ ಸವೆಯಲೆಂದು ಬಂದ ಲೋಕಹಿತಾರ್ಥ
ಶಿವನೆ ಮಂತ್ರತಂತ್ರಯಂತ್ರೋಪಕರಣವಾಗಿ ಬಂದ ಲೋಕಹಿತಾರ್ಥ
ಇದರಂಗಸಂಗವ ಲಿಂಗಸಂಗಿಗಳು ಬಲ್ಲರು
ಅನಂಗಸಂಗಿಗಳೆತ್ತ ಬಲ್ಲರಯ್ಯಾ
ಅಮರೇಶ್ವರಲಿಂಗದನುವನರಿದ ಸಂಗನಬಸವಣ್ಣಾ ?

**ಆಯ್ದಕ್ಕಿ ಮಾರಯ್ಯ**

# ಗುಬ್ಬಿ ಹೊಸಹಳ್ಳಿ ಅರಸು ಮನೆತನದವರಲ್ಲಿ ದೊರೆತ ಮೈಸೂರು ಅರಸರ ಪ್ರಧಾನ ಚನ್ನಪ್ಪಯ್ಯನ ಪತ್ರ

**ಡಾ. ಬಿ. ನಂಜುಂಡಸ್ವಾಮಿ**

ತುಮಕೂರು ಜಿಲ್ಲೆಯಲ್ಲಿ ಹಲವಾರು ಪಾಳೆಯಪಟ್ಟುಗಳು ಯಶಸ್ವಿಯಾಗಿ ರಾಜ್ಯಭಾರ ಮಾಡಿ ನಾಡು ನುಡಿಗೆ ತಮ್ಮದೇ ಆದ ಸೀಮಿತ ವಲಯದಲ್ಲಿ ಕಾಣಿಕೆಯನ್ನು ಕೊಟ್ಟಿವೆ. ನೂರಾರು ವರ್ಷ ಆಂತರಿಕ ಜಗಳ ಯುದ್ಧ ಮುತಾದ ವಿವಿಧ ಕ್ಷೋಭೆಗಳ ನಡುವೆಯೂ ಶಕ್ತಿಮೀರಿ ಶ್ರಮಿಸಿದ ಹತ್ತಾರು ಪಾಳೆಯಪಟ್ಟುಗಳನ್ನು ನಾವು ಗಮನಿಸಬಹುದು.

ಗುಬ್ಬಿ ತಾಲ್ಲೂಕು ಗುಬ್ಬಿಹೊಸಹಳ್ಳಿ ಅರಸು ಮನೆತನದ ಅಧ್ಯಯನವನ್ನು ಪ್ರಾರಂಭ ಮಾಡಿರುವ ನನಗೆ ಒಂದರ ಹಿಂದೆ ಒಂದು ಕೌತುಕದ ವಿಷಯಗಳು ತಿಳಿಯುತ್ತ ಬಂದಿವೆ. ಪ್ರಕಟಿತವಾಗಿರುವ ಒಂದು ತಾಮ್ರಶಾಸನ, ತ್ರುಟಿತವಾಗಿ ದೊರೆತಿರುವ ಕೈಫಿಯತ್ತು, ಹಲವಾರು ಕಾಗದಪತ್ರಗಳು ಬಿಟ್ಟರೆ ಸಾಹಿತ್ಯಕವಾದ ಶಾಸನದ ಆಧಾರವುಳ್ಳ ಇನ್ನು ಯಾವ ಮಾಹಿತಿಗಳು ಲಭ್ಯವಿಲ್ಲ.

.....ಶಾಲಿವಾಹನ ಶಖ ೧೩೨೭ನೇ ಆಂಗಿರ್ಸ ಸಂವತ್ಸರದಲ್ಲಿ ಕೋಟೆಯನ್ನು ನಿರ್ಮಾಣಮಾಡಿ ಪೂರ್ವದಲ್ಲಿಯಿದ್ದ ಸಂಣ ಗ್ರಾಮದ ಹೆಸ್ರು ಯಿ ಗ್ರಾಮಕೆ ಗುಬ್ಬಿಯೆಂಬುದಾಗಿ ಯೆಸ್ರಿಯಿಟ್ಟು ಆ ಸಂಣಗ್ರಾಮಕೆ ಹಳೆಗುಬ್ಬಿ ಯೆಂಬುದಾಗಿ ಹೆಸ್ರಿಟ್ಟು ಶೃಂಗಮುನಿ ಆಶ್ರಮ ಸ್ಥಳದಲ್ಲಿ ಶಿಂಗೋನಹಳ್ಳಿಯೆಂಬದಾಗಿ ವಂದು ಗ್ರಾಮ ನಿರ್ಮಾಣ ಮಾಡ್ಸಿ ಶೀಮೆಯಂನ್ನು ಅನುಭವಿಸಿಕೊಂಡು ಯಿದರ್ರು......

"ಗುಬ್ಬಿ ಹೊಸ್ಸಹಳ್ಳಿ ಪಾಳ್ಯ ಪಟಿನ ಕೈಪೆತಿನ ವಿವರ್ರಾ" ಎಂಬ ತ್ರುಟಿತ ಕಾಗದದಲ್ಲಿ ಗುಬ್ಬಿ ಕೋಟೆ ಬಗ್ಗೆ ಇರುವ ಮಾಹಿತಿ, ಗುಬ್ಬಿಕೋಟೆ ಕಟ್ಟಿಸಿದ್ದು ಕ್ರಿ.ಶ. ೧೪೦೫ರಲ್ಲಿ, ಅದಕ್ಕೇ ಪೂರ್ವದಲ್ಲೇ ಹೊಯ್ಸಳ ಶೈಲಿಯ ಬೇಟೆರಾಯಸ್ವಾಮಿ ದೇವಸ್ಥಾನ ಅಲ್ಲಿ ಇತ್ತು. ಆ ದೇವಸ್ಥಾನ ನಿರಾಭರಣಸುಂದರಿಯಂತೆ ಇದೆ. ಗರ್ಭಗೃಹದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಬಿಲ್ಲು ಹಿಡಿದಿರುವ ಬೇಟೆರಾಯ ವಿಷ್ಣುವಿನ ವಿಗ್ರಹವಿದೆ. ಕೆತ್ತನೆಗಳು ಅಷ್ಟೇನೂ ಇಲ್ಲದ ಸಾಮಾನ್ಯ ವಿಗ್ರಹ. ಪೀಠದಲ್ಲಿ ಗರುಡನ ಕೆತ್ತನೆ ಇದೆ.

ಅರ್ಧ ಮಂಟಪ ನವರಂಗ, ನವರಂಗದ ದ್ವಾರದ ಪಕ್ಕದಲ್ಲಿ ಆಳ್ವಾರುಗಳ ಅಂಜಲಿಬದ್ಧ ವಿಗ್ರಹಗಳು ಇದ್ದು, ನವರಂಗದಲ್ಲಿ ಹೊಯ್ಸಳ ಶೈಲಿಯ ಕಂಬಗಳು ಇವೆ. ನವರಂಗದಲ್ಲಿ ಉತ್ತರಾಭಿಮುಖ ದಕ್ಷಿಣಾಭಿಮುಖವಾದ ಎರಡು ಗರ್ಭಗುಡಿಗಳು ಇದ್ದು, ಉತ್ತರಾಭಿಮುಖವಾಗಿರುವ ಗರ್ಭಗುಡಿಯಲ್ಲಿ ಸುಖಾಸೀನವಾಗಿರುವ ನಾಲ್ಕು ಅಡಿ ಎತ್ತರದ ಸುಂದರವಾದ ಕೆತ್ತನೆಯ ಲಕ್ಷ್ಮಿಯ ವಿಗ್ರಹವಿದೆ. ದಕ್ಷಿಣಾಭಿಮುಖವಾಗಿರುವ ಗರ್ಭಗುಡಿಯಲ್ಲಿ ಕಲ್ಲಿನ ಪೀಠದಲ್ಲಿ ಗರುಡನ ಕೆತ್ತನೆ ಇದ್ದು ವಿಗ್ರಹ ಇರುವುದಿಲ್ಲ. ಈಗ ಆ ಗರ್ಭಗುಡಿಯನ್ನು ಶಯನೋತ್ಸವಕ್ಕೆ ಉಪಯೋಗಿಸುತ್ತಾರೆ. ಅಲ್ಲಿ ಇದ್ದ ವಿಗ್ರಹ ಯಾವುದು? ಏನು? ಎಂದು ನಾನು ಹಿರಿಯರನ್ನು ಕೇಳಿದ್ದೆ. ಆದರೆ ಯಾವುದೇ ವಿಷಯ ತಿಳಿದುಬರಲಿಲ್ಲ. ಗುಬ್ಬಿಹೊಸಹಳ್ಳಿ ಅರಸು ಮನೆತನದವರಲ್ಲಿ ದೊರೆತ ಈ ಪತ್ರದಿಂದ ಅಲ್ಲಿ ಇದ್ದ ವಿಗ್ರಹದ ಸ್ಪಷ್ಟ ಚಿತ್ರ ತಿಳಿದುಬಂದಂತೆ ಆಯಿತು.

ಹೊನ್ನಪ್ಪಗೌಡರ ಕಾಲಮಾನ ಯಾವುದು? ಮಹಿಶೂರ ಪ್ರಧಾನ ಚಂನಪೈಯನವರು ಯಾರ ಕಾಲದಲ್ಲಿ ಪ್ರಧಾನರಾಗಿದ್ದರು? ಈ ಪ್ರಶ್ನೆಗಳಿಗೆ ಈಗ ನನ್ನಲ್ಲಿ ಉತ್ತರವಿಲ್ಲ. ಗುಬ್ಬಿಹೊಸಹಳ್ಳಿ ಪಾಳೆಯಗಾರರಲ್ಲಿ ಬಹಳಷ್ಟು ಜನರ ಹೆಸರಿನಲ್ಲಿ ಗೊಂದಲವಿದೆ. ಅಳಿದು ಉಳಿದಿರುವ ಕಾಗದಪತ್ರಗಳ ಅಧ್ಯಯನದ ನಂತರ ಈ ವಿಚಾರದಲ್ಲಿ ಸ್ಪಷ್ಟತೆ ಮೂಡಬಹುದು.

ಮೈಸೂರು ಪ್ರಧಾನರು ಗುಬ್ಬಿಹೊಸಹಳ್ಳಿ ಹೊನ್ನಪ್ಪಗೌಡನಿಗೆ ಸಸ್ನೇಹಾ ವಿನಯಾರ್ಥ ಮಾಡಿಕೊಂಡು ತಮ್ಮ ಕ್ಷೇಮಕ್ಕೆ ಅಥವಾ ಪರಿಣಾಮಕ್ಕೆ ಬರಸಿ ಕಳುಹಿಸಿ, ನವಾಬ ನಾಸರಜಂಗರವರು ಯಿೂ ಪ್ರಾಂತ್ಯಕ್ಕೆ ಬಂದು ಇದ್ದಾಗ ಕೈದಾಳ ಚೆನ್ನಿಗರಾಯಸ್ವಾಮಿ ವಿಗ್ರಹವನ್ನು ಭಿನ್ನ ಮಾಡಿದ್ದರಿಂದ ಯಿೂ ಸ್ಥಳದಲ್ಲಿ ಪ್ರತಿಷ್ಠೆ ಮಾಡಿಸತಕ್ಕ ಬಗ್ಗೆ ಗುಬ್ಬಿ ಕೋಟೆಯಲಿ ಬೇಟೆರಾಯಸ್ವಾಮಿ ದೇವಸ್ಥಾನದಲ್ಲಿ ಇರುವ ಚನ್ನಕೇಶವ ವಿಗ್ರಹ ಇರುವದರಿಂದಲೂ ಈ ಬಗ್ಗೆ ಹರಕಾರರ ಕಳುಹಿಸಿ ಇದ್ದೀತು ಆ ಪ್ರಕಾರಕ್ಕೆ ಗುಬ್ಬಿ ಕೋಟೆ ಒಳಗೆ ಬೇಟೆರಾಯಸ್ವಾಮಿಯವರ ದೇವಸ್ಥಾನದಲ್ಲಿ ಪೂಜೆಯಿಲ್ಲದೆಯಿರುವ ಚನ್ನಕೇಶವಸ್ವಾಮಿ ವಿಗ್ರಹವನ್ನು ಕೈದಾಳ ಸ್ಥಳಕ್ಕೆ ಯಿೂ ಹರಿಕಾರರ ಸಂಗಡ ಜೋಪಾನದಲಿ ಸಾಗಿಸಿ ಕಳುಹಿಸುವ ಹಾಗೆ ಮಾಡಿಸಿ ಆ ವಿವರಕ್ಕು ನಿಮ್ಮ ಪರಿಣಾಂಕ್ಕು ಬರೆ[ಸಿ]ಕಳುಹಿಸುವ ಹಾಗೆ ಮಾಡಿಸುವುದು, ಎಂದು ಬರೆದಿರುವ ಪತ್ರದಿಂದ ಕೈದಾಳದಲ್ಲಿ ಮೊದಲು ಇದ್ದ ವಿಗ್ರಹ, ಅಂದರೆ ಭಗ್ನ ವಿಗ್ರಹ ಏನಾಯಿತು ಮುಂತಾದ ಯಾವ ಮಾಹಿತಿಯೂ ಇಲ್ಲ. ಈ ಕಾಗದದಿಂದ ಕೈದಾಳದ ದೇವಾಲಯದಲ್ಲಿ ವಿಗ್ರಹ ಮರುಪ್ರತಿಷ್ಠೆ ಗೊಂಡಿರುವುದು ಖಚಿತಗೊಂಡಿದೆ.

ಧರ್ಮಾಭಿಮಾನಿಗಳಾದ ಮೈಸೂರು ಅರಸರು ಅನ್ಯರಿಂದ ದುರಾಕ್ರಮಣಗೊಂಡ ದೇವಾಲಯದ ಪುನಃ ಪ್ರತಿಷ್ಠಾಪನೆ ಬಗ್ಗೆ ಕೈಗೊಳ್ಳುತ್ತಾ ಇದ್ದ ಕ್ರಮಗಳ ಬಗ್ಗೆ ಸಹ

ಬೆಳಕು ಚೆಲ್ಲುತ್ತದೆ. ಹರಿಕಾರರನ್ನು ಅಲ್ಲಿಂದ ಇಲ್ಲಿಗೆ ಕಳುಹಿಸಿ, ಗುಬ್ಬಿಹೊಸಹಳ್ಳಿ ಅರಸರ ಗಮನಕ್ಕೆ ತಂದು ಮತ್ತೆ ಹರಿಕಾರರನ್ನು ಕಳುಹಿಸಿ ಗುಬ್ಬಿಯಿಂದ ಕೈದಾಳಕ್ಕೆ ವಿಗ್ರಹವನ್ನು ಜೋಪಾನವಾಗಿ ಸಾಗಿಸುವ ಬಗ್ಗೆ ವ್ಯವಸ್ಥೆ ಮಾಡುವಂತೆ ವಿನಯಾರ್ಥ ಬರೆದು ಆ ಕೆಲಸವೆಲ್ಲ ಮುಗಿದ ನಂತರ ಪರಿಣಾಮಕ್ಕೆ ಬರೆದು ತಿಳಿಸುವ ಹಾಗೆ ಈ ಪತ್ರ ತಿಳಿಸುತ್ತದೆ. ಈ ಮೂಲಪತ್ರವನ್ನು ನೋಡಲು ಅವಕಾಶ ಮಾಡಿಕೊಟ್ಟ ಆ ಅರಸು ಮನೆತನದವರಿಗೆ ನನ್ನ ಕೃತಜ್ಞತೆಗಳು.

**ಶ್ರೀರಾಮ**

೧ ಶ್ರೀಮತ್ಸಕಲಗುಣಸಂಪಂನರಾದ ಗುಬ್ಬಿಹೊಸಹಳ್ಳಿ ಹೂಂನಪಗೌಡರ್ರಿಗೆ ಮಹಿಶೂರ ಪ್ರಧಾನ ಚೆಂನಪಯನವರು

೨ ಸ್ವಸ್ನೇಹಾಉ ಸಂಪ್ರೀತಿಯಿಂಕಾರ್‍ಯಕ್ಕೆ ಕಳುಹಿದ ವಿನಯಾರ್ಥ । ನಾಉ ಕ್ಷೇಮದಲ್ಲಿ ಯಿಧೇವೆ ನಿಂಮ ಪರ್‍ರಿಣಾಮಕ್ಕೆ ಬರೆಸಿ

೩ ಕಳುಹಿಸುವ ಹಾಗೆ ಮಾಡಿಸುವದು ಅದಾಗಿ । ನವಾಬ ನಾಸರಜಂಗರವರು ಯೀ ಪ್ರಾಂತ್ಯಕ್ಕೆ ಬಂದು ಯಿದ್ದಾಗ ಕೈದಾಳ ಚೆಂ

೪ ನ್ನಿಗರ್‍ರಾಯಸ್ವಾಮಿ ವಿಗ್ರಹವಂನ್ನೂ ಭಿಂನ್ನಾ ಮಾಡಿದ್ದರ್‍ರಿಂದ ಯಿೊ ಸ್ಥಳದಲ್ಲಿ ಪ್ರತಿಷ್ಠೆ ಮಾಡಿಸತಕ್ಕ ಬಗ್ಗೆ ಗುಬ್ಬಿ ಕೋಟೆಯ

೫ ಲ್ಲಿ ಬೇಟೆರಾಯಸ್ವಾಮಿಯವರ ದೇವಸ್ಥಾನದಲ್ಲಿ ಯಿರುವ ಚೆಂನಕೇಶವ ವಿಗ್ರಹು[ವನ್ನು?] ಬೇಕಾಗಿಯಿರುವದ ರ್‍ರಿಂದ ಯಿೊ

೬ ಬಗ್ಗೆ ಹರಕಾರರ ಕಳುಹಿಸಿ ಯಿದ್ದಿತು ಆ ಪ್ರಕಾರಕ್ಕೆ ಗುಬ್ಬಿ ಕೋಟೆವಳಗೆ ಬೇಟೆರಾಯಸ್ವಾಮಿಯವರ ದೇವಸ್ಥಾ

೭ ನದಲ್ಲಿ ಪೂಜೆಯಿಲ್ಲದೆ ಯಿರುವ ಚೆಂನಕೇಶವಸ್ವಾಮಿೊ ವಿಗ್ರಹಂವನ್ನು ಕೈದಾಳ ಸ್ಥಳಕ್ಕೆ! ಯಿೊ ಹರಕಾರರ

೮ ಸಂಗಡ ಜೋಪಾನದಲ್ಲಿ ಸಾಗಿಸಿ ಕಳುಹಿಸುವ ಹಾಗೆ ಮಾಡ್ಸಿ ಆ ವಿವರಕ್ಕು ನಿಂಮ ಪರ್‍ರಿಣಾಮಕ್ಕು ಬರೆಸಿ ಕಳು

೯ ಹಿಸುವ ಹಾಗೆ ಮಾಡಿಸುವುದು । ಶ್ರೀರಾಮ

**ಆಂಗ್ಲೋ–ಫ್ರೆಂಚ್ ಯುದ್ಧಗಳು ಅಥವಾ ಕರ್ನಾಟಿಕ್ ಯುದ್ಧಗಳು**

ಕರ್ನಾಟಿಕ್ ಯುದ್ಧವು ಡೂಪ್ಲೆಯಿಂದ ದಕ್ಷಿಣ ಭಾರತದ ರಾಜ ಮನೆತನದ ಒಳಜಗಳದ ಅವಕಾಶವನ್ನು ಉಪಯೋಗಿಸಿಕೊಂಡು ಮಾಡಿದ್ದು.

Nizam-ul-Mulk Asaf Jah Hyderabad & Carnatic 21/May 1948 ಇವನು ತನ್ನ ಎರಡನೇ ಮಗ ನಾಸಿರ ಜಂಗ್‌ನಿಗೆ ೧೭೪೮–೫೦ರಲ್ಲಿ ಸಿಂಹಾಸನಾರೋಹಣ ಮಾಡಿಸಿದ. ಆದರೆ, ಹಿಂದಿನ ನಿಜಾಮನ ಮೊಮ್ಮಗ Muzafar Jung ಆತ ತಾನೆ ಸಿಂಹಾಸನದ ಹಕ್ಕುದಾರ ಎಂದ. ಆರ್ಕಾಟ್‌ನಲ್ಲಿ Anwar-ud-din ಇದ್ದ. ಚಂದಸಾಹೇಬ್ ನವಾಬ್‌ನ ಅಳಿಯ. ಈ ಎರಡು ಜಗಳಗಳು ಒಟ್ಟಿಗೆ ಸೇರಿ ಆಗ ಡೊಪ್ಲೆಯು Mazafar Jung ನನ್ನು ಸುಭೇದಾರನನ್ನಾಗಿ, ಚಂದಸಾಹೇಬ್‌ನನ್ನು ಆರ್ಕಾಟ್‌ನ ನವಾಬನನ್ನಾಗಿ ಮಾಡಿದ.

ಆಗ ಇಂಗ್ಲೀಷರು ನಾಸಿರ್ ಜಂಗ್, Anwar-ud-din ಅವರುಗಳ ಸಹಾಯಕ್ಕೆ ನಿಂತುಕೊಂಡರು. ಈ ಯುದ್ಧದಲ್ಲಿ ಮುಜಾಫರ್ ಜಂಗ್ ಚಂದಾಸಾಹೇಬ್ ಮತ್ತು ಫ್ರೆಂಚರು ಆನ್ವರ್ ಉದ್ದೀನ್‌ನನ್ನು ೧೭೪೯ರಲ್ಲಿ ಸೋಲಿಸಿ ಯುದ್ಧದಲ್ಲಿ ಕೊಂದರು ವೆಲ್ಲೂರು ಪಕ್ಕದ ಅಬೂರುನಲ್ಲಿ ನಾಸಿರ್ ಜಂಗ್ ೧೭೫೦ರಲ್ಲಿ ಸತ್ತ. ಮುಜಫರ್ ಜಂಗ್ ಸುಭೇದಾರನಾದ. ನಾಸಿರ್‌ಜಂಗ್ ೧೭೫೦ ರಲ್ಲಿ ಸತ್ತಿರುವುದರಿಂದ ಅದಕ್ಕಿಂತ ಹಿಂದೆ ಈ ಪ್ರದೇಶಕ್ಕೆ ಬಂದಾಗ ಕೈದಾಳದ ದೇವಾಲಯದ ವಿಗ್ರಹವನ್ನು ನಾಶಮಾಡಿರಬೇಕು. ತದನಂತರ ಅಂದರೆ ೧೭೬೦ರ ಸುಮಾರಿನಲ್ಲಿ ಗುಬ್ಬಿಯಿಂದ ಕೈದಾಳಕ್ಕೆ ವಿಗ್ರಹವನ್ನು ಸಾಗಿಸಿರಬೇಕು. ಈ ವಿಷಯದ ಕಡೆ ನನ್ನ ಗಮನ ಸೆಳೆದ ಡಾ. ಡಿ.ಎನ್. ಯೋಗೀಶರವರಿಗೆ ಧನ್ಯವಾದಗಳು.

❑

ಅಂಗವ ಬೆರಸದ ಲಿಂಗ ಪ್ರಾಣವ
ಬೆರಸುವ ಪರಿಯೆಂತೊ?
ಬೆನಕನ ತೋರಿ ಬೆಲ್ಲವ ಮೆಲುವಂತೆ
ಇಷ್ಟಲಿಂಗವ ತೋರಿ ಹೊಟ್ಟೆಯ ಹೊರೆವರು.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ದೂರ ನೀ ಹೊತ್ತೆ
ಸೂರೆಯನಾರಿಕೆ ಕೊಂಡರು.

**ಸಿದ್ಧರಾಮ**

# ಬರವಣಿಗೆ : ಒಂದು ತಪಸ್ಸು

ಡಾ. ಎಸ್. ಆರ್. ಗುಂಜಾಳ

ಯಾವುದೇ ಒಂದು ಭಾಷೆಯಲ್ಲಿ ಗ್ರಂಥ ರಚನೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಬರಹಗಾರನಿಗೆ ಇರಬೇಕಾದ ಕೆಲವು ಕ್ಷಣಗಳನ್ನು ಕನ್ನಡದ ಒಬ್ಬ ಕವಿ ಹೀಗೆ ಹೇಳುತ್ತಾನೆ :

**ಪ್ರತಿಭಾನಂ ಕಾವ್ಯವಿದ್ಯಾ ಪ್ರಚಯ ಪರಿಚಯಂ,**
**ವೃದ್ಧಸೇವಾನುರಾಗಂ ಸತತಾಭ್ಯಾಸ ಪ್ರಯತ್ನಂ ಕೃತಿಗೆ ನಿಯತಂ ಕಾರಣಂ**

ಇಲ್ಲಿ ಬರಹಗಾರನಿಗೆ ಮೂಲತಃ ಪ್ರತಿಭೆ ಇರಬೇಕು. ರವಿ ಕಾಣದ್ದನ್ನು ಬರಹಗಾರನು ಕಾಣಬೇಕು. ಅವನ ಬುದ್ಧಿ ಚುರುಕಾಗಿರಬೇಕು. ಲೋಕಾನುಭವದಿಂದ ಸಮೃದ್ಧವಾಗಿರಬೇಕು. ಆ ಸಾಹಿತ್ಯದಲ್ಲಿ ಅಂದಂದಿನವರೆಗೆ ಪ್ರಕಟವಾದ ಸುಪ್ರಸಿದ್ಧ ಬರಹಗಾರರ ಶ್ರೇಷ್ಠ ಕೃತಿಗಳನ್ನು ಅವಲೋಕಿಸಿರಬೇಕು. ಅವುಗಳಿಂದ ತನ್ನ ಅನುಭವಗಳನ್ನು ಹಿಗ್ಗಿಸಿಕೊಂಡಿರಬೇಕು. ಈ ಬಗೆಯ ಸಾಹಿತ್ಯಚರಿತ್ರೆಯ ಪರಿಚಯವು ಅತ್ಯವಶ್ಯಕವಾಗಿ ಬರಹಗಾರನಿಗೆ ಬೇಕಾಗುತ್ತದೆ. ಜ್ಞಾನದಿಂದ ವಯೋವೃದ್ಧರಾದವರ ಸತ್ಸಂಗದಲ್ಲಿ ಇರಬೇಕು. ಅವರ ಒಡನಾಟದಲ್ಲಿರಬೇಕು. ಅವರು ತಮ್ಮ ಜೀವನಾನುಭವವನ್ನು ಹೇಳಿಕೊಡುತ್ತಾರೆ. ತಾವು ಓದಿದ ನೂರಾರು ಕಾವ್ಯಗಳ ಸಾರವನ್ನು ಸಂಗ್ರಹವಾಗಿ ತಿಳಿಸಿಕೊಡುತ್ತಾರೆ. ಆದುದರಿಂದ ಅವರ ಸೇವೆಯಲ್ಲಿ ಬರಹಗಾರನಾಗಬೇಕೆನ್ನುವವನು ನಿರತನಾಗಿರಬೇಕು. ಇವುಗಳ ಜೊತೆಗೆ ನಿರಂತರವಾಗಿ ಅಧ್ಯಯನವನ್ನು ಮಾಡುತ್ತಿರಬೇಕು. ಇದೆಲ್ಲವನ್ನೂ ಹೃದ್ಗತ ಮಾಡಿಕೊಂಡ ಬರಹಗಾರನು ತನ್ನ ಸ್ವಂತ ಕೃತಿಗಳನ್ನು ರಚಿಸಲು ಪ್ರಯತ್ನಿಸಬೇಕು. ಈ ರೀತಿಯ ವಿಶಿಷ್ಟ ಗುಣಗಳನ್ನು ಅಳವಡಿಸಿಕೊಳ್ಳುವುದು ಒಂದು ಮಹಾ ತಪಸ್ಸು ಇದ್ದ ಹಾಗೆ.

ಇಂಥ ವಿಶೇಷ ಗುಣಗಳನ್ನು ಅವಗತ ಮಾಡಿಕೊಂಡ ವಿದ್ವಾಂಸ-ಅನುಭಾವಿಯು ಉತ್ತಮ ಕೃತಿಗಳನ್ನು ರಚಿಸಲು ಸಮರ್ಥನಾಗುತ್ತಾನೆ. ಅದು ಅವನ ತಪಸ್ಸಿನ ಫಲವೆನ್ನಬಹುದು. ಇಂಥ ಬರಹಗಾರನಿಗೆ ನವೀನ ವಿಚಾರವು ಫಕ್ಕನೆ ಬುದ್ಧಿಗೆ ಗೋಚರಿಸುತ್ತದೆ. ಅವನ ಮನದ ಮುಂದೆ ಸುಳಿದುಹೋಗುತ್ತದೆ. ಸಮಯ ಸರಿದಂತೆ ಆ ವಿಚಾರದ ಸ್ಪಷ್ಟ ಕಲ್ಪನೆಯು ಮನದಲ್ಲಿ ಗಟ್ಟಿಯಾಗುತ್ತದೆ. ಆಗ ಅವನಿಗೆ ಅದನ್ನು

ಭಾಷೆಯಲ್ಲಿ ಬರೆಯಬೇಕೆಂದು ಪ್ರೇರಣೆಯಾಗುತ್ತದೆ. ಅವನ ಮನದ ಮೊನೆಯ ಕೊನೆಯಲ್ಲಿ ತೂಗಿ ತೊನೆಯುತ್ತಿರುವ ಆ ನೂತನ ವಿಚಾರವು ಸೂಕ್ಷ್ಮರೂಪದಲ್ಲಿ ಇರುತ್ತದೆ. ಅದು ಕಾಲ ಗತಿಸಿದಂತೆ ಟಿಪ್ಪಣಿಯ ರೂಪದಲ್ಲಿ ಅವತರಿಸುತ್ತದೆ. ಅದನ್ನು ತಿದ್ದಿ ತೀಡಿ ಭಾಷೆಯ ಮೆರಗನ್ನು ಕೊಟ್ಟಾಗ ಅದು ಲೇಖನವಾಗುತ್ತದೆ. ಲೇಖನವು ಪತ್ರಿಕೆಗಳಲ್ಲಿ ಪ್ರಕಟವಾಗಿ ಅಂತಹದೇ ವಿಚಾರವುಳ್ಳ ಅನೇಕ ವಿದ್ವಾಂಸರ ಗಮನವನ್ನು ಸೆಳೆಯುತ್ತದೆ. ಅವರು ಅದಕ್ಕೆ ಪ್ರತಿಕ್ರಿಯೆ ತೋರಿಸುತ್ತಾರೆ. ಅವು ಭಿನ್ನ ವಿಭಿನ್ನ ರೂಪದಲ್ಲಿರುತ್ತವೆ. ಅವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಗ್ರಾಹ್ಯವಾದ ಅಭಿಪ್ರಾಯಗಳನ್ನು ಸಂಕಲಿಸಿ ತಮ್ಮ ಲೇಖನವನ್ನು ವಿಸ್ತರಿಸಿ ಬರೆದಾಗ ಅದು ಗ್ರಂಥ ರೂಪವನ್ನು ಧರಿಸುತ್ತದೆ. ಇದು ಕೃತಿಕಾರ ಅಥವಾ ಬರಹಗಾರನ ತಪಸ್ಸಿನ ಸಿದ್ಧಿಯ ಸ್ಥೂಲ ರೂಪವೆಂದು ಹೇಳಬಹುದು. ಇದು ಸಾವಿರ ಪ್ರತಿಗಳಲ್ಲಿರಲಿ, ಹತ್ತು ಸಾವಿರ ಪ್ರತಿಗಳಲ್ಲಿ ಇರಲಿ, ಅದು ಪ್ರಕಟವಾಗಿ ಆ ಜ್ಞಾನಕೋಟಿಯ ಬೆಳವಣಿಗೆಗೆ ಪೂರಕವಾಗುತ್ತದೆ. ಮುಂಬರುವ ವಿದ್ವಾಂಸರು ಈ ಕೃತಿಯನ್ನು ಅವಲೋಕಿಸಿ ಅದರ ಶಾಖೋಪಶಾಖೆಗಳನ್ನು ಗ್ರಹಿಸುತ್ತಾರೆ, ಮತ್ತು ವಿಸ್ತರಿಸಿ ಬರೆಯುತ್ತಾರೆ. ಹೀಗೆ ಒಬ್ಬ ಬರಹಗಾರನ ತಪಸ್ಸಿನಿಂದ ರೂಪುಗೊಂಡ ಗ್ರಂಥವು ಶಾಖೋಪಶಾಖೆಯಾಗಿ ವಿಸ್ತರಿಸುತ್ತ ಹೋಗುತ್ತದೆ.

ಹೀಗಾಗಿ ಮಾನವನು ಒಂದು ಹಂತಕ್ಕೆ ಬಂದಾಗ ಸೃಷ್ಟಿಯನ್ನು ದೃಷ್ಟಿಸಿದ. ಆಗ ಅದು ಸೃಷ್ಟಿವಿಜ್ಞಾನವಾಯಿತು. ಅದು ಇಬ್ಭಾಗವಾಗಿ ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರವೆಂದು ಕವಲೊಡೆಯಿತು. ಸಸ್ಯಶಾಸ್ತ್ರದಲ್ಲಿ ಮಾನವನಿಗೆ ಉಪಯುಕ್ತವಾದ ಸಸ್ಯಗಳನ್ನು ಕುರಿತು ಸೂಕ್ಷ್ಮ ಅಭ್ಯಾಸ ಮಾಡಿದಾಗ ಅದು ಕೃಷಿಯಾಗಿ ಕವಲೊಡೆಯಿತು. ಹೀಗೆ ಬರಹಗಾರನ ತಪಸ್ಸಿನಿಂದ ಈ ಎಲ್ಲ ಶಾಸ್ತ್ರಗಳು ದಿನದಿನವೂ ವಿಸ್ತೃತವಾಗುತ್ತಲೇ ಹೋಗುತ್ತವೆ. ಅವು ಮನುಷ್ಯ ಪ್ರಗತಿಗೆ ಕಾರಣವಾಗುತ್ತವೆ. ಇಡೀ ಮಾನವಕುಲದ ಶ್ರೇಷ್ಠತೆಗೆ ಸಹಕಾರಿಯಾಗುತ್ತದೆ.

ಉದಾಹರಣೆಗಾಗಿ : ಸರ್ವೋದಯದ ಕನಸನ್ನು ಕಾರ್ಯರೂಪಕ್ಕೆ ತರುವಲ್ಲಿ ಶ್ರಮಿಸಿದ ಗಾಂಧಿಯವರನ್ನೇ ತೆಗೆದುಕೊಳ್ಳಬಹುದು. ಅವರು ಬರೆದ "ನನ್ನ ಸತ್ಯಾನ್ವೇಷಣೆ" "ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಟ್ರೂತ್" ಎಂಬ ಆತ್ಮಚರಿತ್ರೆಯು ಸಮಗ್ರ ಮಾನವಕುಲಕ್ಕೇ ಸತ್ಯದರ್ಶನ ಮಾಡಿಸಿತು. ಭಾರತದೇಶಕ್ಕೆ ಸ್ವಾತಂತ್ರ್ಯ ಲಭಿಸುವಂತೆ ಮಾಡಿತು. ಅದರ ಪ್ರಭಾವದಿಂದ ಅನೇಕ ಜನರ ಬುದ್ಧಿ, ಮನಸ್ಸು ವಿಕಾಸಗೊಂಡು ರಾಷ್ಟ್ರೀಯತೆಯ ಪ್ರಜ್ಞೆ ಉಂಟಾಯಿತು. ಇದೇ ರೀತಿ ಹೆರಿಯಟ್ ಬೀಚರ್ ಸ್ಟೋವ್ ಎಂಬ ಮಹಿಳೆಯು ಬರೆದ "ಟಾಮ್ ಕಾಕಾನ ಗುಡಿಸಲು" (ಅಂಕಲ್ ಟಾಮ್ಸ್ ಕ್ಯಾಬಿನ್) ಎಂಬ ಗ್ರಂಥವು ಇಡೀ ಅಮೇರಿಕೆಯ ಸರಕಾರವನ್ನೇ ನಡುಗಿಸಿತು. ಬಿಳಿಯ ಜನರು ಆಫ್ರಿಕಾದಿಂದ ಅಮೇರಿಕಾಕ್ಕೆ ಕರೆದೊಯ್ದ ಕಪ್ಪು ಜನರ ಗುಲಾಮಗಿರಿಯನ್ನು ನಿರ್ಮೂಲನ ಮಾಡುವಲ್ಲಿ

ಪ್ರಮುಖ ಪಾತ್ರ ವಹಿಸಿತು. ಇಂದು ಬಿಳಿಯ ಜನರು ಮತ್ತು ಕಪ್ಪು ಜನರು ಒಂದೇ ಕಾಯಿದೆ ಅಡಿಯಲ್ಲಿ ಇದ್ದಾರೆ.

ಇಂಥ ಗ್ರಂಥಗಳೆಲ್ಲವೂ ಬರಹಗಾರನ ಅನುಭಾವದ ಅಮೃತಸರೋವರಗಳೆಂದೇ ಹೇಳಬಹುದು. ಇದರಂತೆ ಕಾರ್ಲ್ ಮಾರ್ಕ್ಸನ "ದಾಸ್ ಕ್ಯಾಪಿಟಲ್", ಡಾ. ಬಿ.ಆರ್. ಅಂಬೇಡ್ಕರರ "ಹೂ ಆರ್ ಶೂದ್ರಾಸ್", ನೆಹರೂರವರ "ಡಿಸ್ಕವರಿ ಆಫ್ ಇಂಡಿಯಾ" ಮುಂತಾದ ಕೃತಿಗಳು ಆಯಾ ಲೇಖಕರ ತಪಸ್ಸಿನ ಫಲವೆಂದು ಹೇಳಬಹುದು.

❑

ಅಂಗ ಅನಂಗವೆಂಬೆರಡರ ಸಂದಳಿದ ಮಹಂತನ
ಅಂಗ ಸೋಂಕಿತ್ತೆಲ್ಲಾ ಪವಿತ್ರ ಕಾಣಿರೆ
ಪವಿತ್ರವಿರ್ದಲ್ಲಿ ಪದಾರ್ಥವಿಹುದು
ಪದಾರ್ಥವಿರ್ದಲ್ಲಿ ಮನವಿಹುದು
ಮನವಿರ್ದಲ್ಲಿ ಹಸ್ತವಿಹುದು
ಹಸ್ತವಿರ್ದಲ್ಲಿ ಜಿಹ್ವೆಯಿಹುದು
ಜಿಹ್ವೆಯಿರ್ದಲ್ಲಿ ರುಚಿಯಿಹುದು
ರುಚಿಯಿರ್ದಲ್ಲಿ ಅವಧಾನವಿಹುದು
ಅವಧಾನವಿರ್ದಲ್ಲಿ ಭಾವವಿಹುದು
ಭಾವವಿರ್ದಲ್ಲಿ ಲಿಂಗವಿಹುದು
ಲಿಂಗವಿರ್ದಲ್ಲಿ ಅರ್ಪಿತವಿಹುದು
ಅರ್ಪಿತವಿರ್ದಲ್ಲಿ ಪ್ರಸಾದವಿಹುದು
ಪ್ರಸಾದವಿರ್ದಲ್ಲಿ ಪರಿಣಾಮವಿಹುದು
ಇದು ಕಾರಣ ಮಹಾಘನ ಸದ್ಗುರು ಸಿದ್ಧಸೋಮನಾಥಾ
ನಿಮ್ಮ ಶರಣರು ಪ್ರಾಣಲಿಂಗಪ್ರವೇಶಿಗಳಾಗಿ
ಪರಿಣಾಮಪ್ರಸಾದಿಗಳಯ್ಯಾ.

**ಅಮುಗಿ ದೇವಯ್ಯ**

## ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ

# ಕಿಗ್ಗ ಗ್ರಾಮದ ಕ್ಷೇತ್ರದರ್ಶನ

**ಡಾ. ಎಸ್.ಜಿ. ರಾಮದಾಸ ರೆಡ್ಡಿ**

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಿಂದ ಪಶ್ಚಿಮಕ್ಕೆ 9 ಕಿ.ಮೀ. ದೂರದಲ್ಲಿದೆ. ಇದು ಪುರಾಣಪ್ರಸಿದ್ಧ ಸ್ಥಳ. ತುಂಗಾ ನದಿಯ ಉಪನದಿಯಾದ ನಂದಿನಿ ನದಿಯ ತೀರದಲ್ಲಿದೆ. ಮರಕಲು ಹಾಗೂ ಶ್ರೀಋಷ್ಯಶೃಂಗಪುರ ದೇವಳ ಎಂಬ ಹೆಸರುಗಳಿಂದಲೂ ಪರಿಚಿತವಾಗಿರುವ ಗ್ರಾಮವಾಗಿದೆ. ಎತ್ತ ನೋಡಿದರೂ ಪಶ್ಚಿಮ ಘಟ್ಟಗಳ ದಟ್ಟಾರಣ್ಯದ ಕಾವಲು, ಎತ್ತೆತ್ತರವಾಗಿ ಬೆಳೆದ ಗಿಡಮರಗಳ ಮಧ್ಯದಲ್ಲಿ ಹಸಿರಿನ ಹಾಸಿಗೆಯಿಂದ ಸಿಂಗರಿಸಿಕೊಂಡ ಹುಲ್ಲುಕಡ್ಡಿಗಳು, ಮುಳ್ಳು ಪೊದೆಗಳು, ಮಳೆಗಾಲದಲ್ಲಾದರೆ ಗಿಡಮರಗಳ, ರೆಂಬೆಗಳ, ಹೂ ಹಣ್ಣುಗಳ, ಎಲೆಗಳ ಮೇಲಿಂದ ಮುತ್ತಿನಂತೆ ಧಾರಾಕಾರವಾಗಿ ಭೂಮಿಗೆ ಉದುರುವ ನೀರಿನ ಹನಿಗಳು, ಎಲ್ಲೆಡೆ ಪ್ರಶಾಂತತೆ, ಹಸಿರಿನಾಚೆ ಭವ್ಯವಾದ ಹಾಗೂ ಗಂಭೀರವಾಗಿ ಸೆಟೆದು ನಿಂತಿರುವ ಪರ್ವತ. ಇದು ಕಿಗ್ಗ ಎಂಬ ಸುಂದರ ಸ್ಥಳದ ವ್ಯಾಖ್ಯಾನವನ್ನು ನೀಡುತ್ತದೆ. ನರಸಿಂಹ ಪರ್ವತ, ಆಗುಂಬೆ ಘಾಟ್‌ಗಳಲ್ಲಿನ ಎತ್ತರವಾದ ಶಿಖರ, ಸಿರಿಮನೆ ಜಲಪಾತ ಇವೆಲ್ಲವೂ ಕಿಗ್ಗ ಗ್ರಾಮದ ಬಳಿ ಇವೆ.

ಕಿಳ್ಗ ಎಂಬ ಶಬ್ದದ ವಿಕೃತರೂಪವೇ ಕಿಗ್ಗ ಎಂದಾಗಿದೆ. ಗ್ರಾಮದ ಪ್ರಾಚೀನತೆಯ ಬಗ್ಗೆ ಇಲ್ಲಿ ದೊರೆತ ಶಾಸನಗಳು, ಕೋಟೆಯ ಅವಶೇಷಗಳು ವಿಫಲವಾದ ಮಾಹಿತಿ ಒದಗಿಸುತ್ತವೆ. ಕ್ರಿ.ಶ. 7ನೇ ಶತಮಾನದ ನಾಲ್ಕು ಶಾಸನಗಳು, ಸುಮಾರು 11 ನೇ ಶತಮಾನದ ಒಂದು ಶಾಸನ ಹಾಗೂ ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಹಳೆಯ ಕೋಟೆಯ ಅವಶೇಷಗಳು ಇಲ್ಲಿವೆ. ಗ್ರಾಮವು ಕಿಗ್ಗಶೃಂಗೇಶ್ವರ ಅಥವಾ ಶ್ರೀಋಷ್ಯಶೃಂಗೇಶ್ವರ ದೇವಾಲಯದಿಂದಾಗಿ ಪ್ರಖ್ಯಾತವಾಗಿದೆ. ಶೃಂಗೇಶ್ವರರ ಪತ್ನಿ ಶಾಂತಮ್ಮನವರು ದೇವಾಲಯದೊಳಗೆ ನೆಲೆಸಿರು ವುದರಿಂದ ಈ ದೇವಾಲಯವನ್ನು ಶ್ರೀಶಾಂತಿ ಸಮೇತ ಋಷ್ಯಶೃಂಗೇಶ್ವರಸ್ವಾಮಿ ಎಂಬ ಹೆಸರಿನಿಂದ ಕರೆಯುತ್ತಾರೆ.

ಪುರಾಣದಲ್ಲಿ ಮೋಡಗಳನ್ನು ಆಕರ್ಷಿಸಿ ಮಳೆ ತರಿಸುವ ವಿಶಿಷ್ಟ ಶಕ್ತಿಯಿದ್ದ ಕಾರಣಕ್ಕೆ ಮಳೆ ಮಹರ್ಷಿ ಎಂದು ಕರೆಯುತ್ತಿದ್ದ ಋಷ್ಯಶೃಂಗರ ಹಿನ್ನೆಲೆ ಕಿಗ್ಗದ ಋಷ್ಯಶೃಂಗೇಶ್ವರ ದೇವಸ್ಥಾನಕ್ಕೆ ಇದೆ.

ಕಶ್ಯಪ ಬ್ರಹ್ಮನ ಮೊಮ್ಮಗನಾದ ಋಷ್ಯಶೃಂಗರು ಸರ್ವವಿದ್ಯಾಪಾರಂಗತರು. ದೇವವಾಣಿಯಂತೆ ಅವರು ಶೃಂಗೇರಿ ಸಮೀಪದ ಬೆಟ್ಟದ ಬುಡದಲ್ಲಿ ಚಂದ್ರಮೌಳೀಶ್ವರನನ್ನು ಕುರಿತು ತಪಸ್ಸನ್ನು ಆಚರಿಸುತ್ತಾರೆ. ಶಿವ ಪ್ರತ್ಯಕ್ಷನಾದಾಗ 'ನಾನು

ನಿನ್ನಲ್ಲಿ ಐಕ್ಯನಾಗಬೇಕು' ಎಂದು ವರ ಕೇಳುವ ಭರದಲ್ಲಿ ತಪ್ಪಾಗಿ 'ನೀನು ನನ್ನಲ್ಲಿ ಐಕ್ಯನಾಗು' ಎಂದು ಕೇಳಿದ ಪರಿಣಾಮವಾಗಿ ಚಂದ್ರಮೌಳೀಶ್ವರ ಈ ಮಹಾಮಹಿಮನಲ್ಲಿ ಐಕ್ಯನಾಗುತ್ತಾನೆ. ಎಂಬ ಐತಿಹ್ಯವಿದೆ.

ವರವನ್ನು ಕೋರುವಾಗ ಉಂಟಾದ ಪದಗಳ ವ್ಯತ್ಯಾಸದಿಂದಾಗಿ ಈ ಪ್ರದೇಶ ಕಿಗ್ಗ ಎಂಬ ಹೆಸರಿನಿಂದ ಗುರುತಿಸಿಕೊಂಡಿತು. ಈ ಹಿನ್ನೆಲೆಯಲ್ಲಿ ಮಳೆ–ಬೆಳೆ ಹಾಗೂ ಸಂತಾನಪ್ರಾಪ್ತಿಗಾಗಿ ಚಂದ್ರಮೌಳೀಶ್ವರನು ಐಕ್ಯಾಗಿರುವ ಋಷ್ಯಶೃಂಗೇಶ್ವರರನ್ನು ಆರಾಧಿಸುವ ಪರಿಪಾಠ ಬೆಳೆದು ಬಂದಿದೆ.

**ಹಿಮಾಲಯದಿಂದ ಆರಸಿ ಬರುವ ಸನ್ಯಾಸಿಗಳು :** ಋಷ್ಯಶೃಂಗ ಮಹರ್ಷಿಗಳು ನೆಲೆಸಿರುವ ಈ ಸ್ಥಳಕ್ಕೆ ಹಿಮಾಲಯದಿಂದ ಬರುವ ಸನ್ಯಾಸಿಗಳು ಇಲ್ಲಿ ತಿಂಗಳುಗಟ್ಟಲೆ ಮೌನವ್ರತ, ಉಪವಾಸಗಳನ್ನು ಆಚರಿಸಿ ಕಠಿಣ ತರನಾದ ಧ್ಯಾನದಲ್ಲಿ ತಲ್ಲೀನರಾಗುವ ದೃಶ್ಯಗಳು ಕಂಡುಬರುತ್ತವೆ.

ಋಷ್ಯಶೃಂಗರಲ್ಲಿ ಪರಂಜ್ಯೋತಿ ಲೀನವಾದ ಸ್ಥಳದಲ್ಲಿಯೇ ಋಷ್ಯಶೃಂಗರ ದೇವಾಲಯವಿದೆ ಎಂಬ ಐತಿಹ್ಯ ಇದೆ. ಇನ್ನೊಂದು ಪ್ರತೀತಿಯ ಪ್ರಕಾರ ಇಲ್ಲಿ ಋಷ್ಯಶೃಂಗರ ಹೆಸರಿನಲ್ಲಿ ಲಿಂಗ ಪ್ರತಿಷ್ಠಾಪಿಸಲಾಯಿತು ಎಂಬ ಮಾಹಿತಿ ಇದೆ.

**ಶ್ರೀಋಷ್ಯಶೃಂಗೇಶ್ವರ ದೇವಾಲಯ**

ಕಿಗ್ಗದ ಈ ದೇವಾಲಯ ಕರ್ನಾಟಕದ ಪ್ರಾಚೀನ ದೇವಾಲಯಗಳಲ್ಲಿ ಒಂದು. ಆದರೆ ಈಗಿರುವ ಕಟ್ಟಡದ ಬಹು ಭಾಗ ವಿಜಯನಗರ ಕಾಲಕ್ಕೆ ಸೇರಿದೆ.

ಗ್ರಾಮವನ್ನು ಪ್ರವೇಶಿಸುತ್ತಿದ್ದಂತೆ ಸ್ವಾಗತ ಕೋರುವ ಮಹಾ ಕಮಾನುಗೋಪುರ ಸ್ವಾಗತಿಸುತ್ತದೆ. ದೇವಾಲಯದ ಮುಂದೆ ಸಾಗಿದಾಗ ಅದರ ಸುತ್ತಲೂ ಪೌಳಿಗೋಡೆ ನಿರ್ಮಿಸಿರುವುದು ಕಾಣುತ್ತದೆ. ಪೌಳಿಗೋಡೆಗೆ ಹೆಬ್ಬಾಗಿಲನ್ನು ನಿರ್ಮಿಸಿದ್ದು, ಅದನ್ನು ದಾಟಿ ಒಳನಡೆಯಬೇಕಾದರೆ ಮೆಟ್ಟಿಲುಗಳನ್ನು ಹತ್ತಿ ಹೋಗಬೇಕು. ವಿಶಾಲವಾದ ಪ್ರದಕ್ಷಿಣಾಪಥ ಇದ್ದು, ಅಲ್ಲಿಯೇ ಗರ್ಭಗುಡಿಗೆ ಎದುರಾಗಿ ಎತ್ತರವಾದ ದೀಪಸ್ತಂಭ ಇದೆ. ದೇವಾಲಯದ ಒಳಗಡೆ ಪ್ರದಕ್ಷಿಣಾಪಥಕ್ಕೆ ಹೊಂದಿಕೊಂಡಂತೆ ತಂಗುಮಂಟಪಗಳು ಸಾಲಾಗಿ ಇವೆ. ಮೂರು ಹಂತಗಳ ಗೋಪುರ, ಐದು ಕಳಸಗಳು ಇವೆ.

ಗರ್ಭಗೃಹ, ಸುಕನಾಸಿ, ನವರಂಗ, ಪ್ರದಕ್ಷಿಣಾಪಥ, ನಂದಿಮಂಟಪ, ಗೋಪುರಗಳು ಇವೆ. ಬೆಟ್ಟ ಮತ್ತು ನಿತ್ಯಹರಿದ್ವರ್ಣದ ದಟ್ಟ ಕಾಡಿನ ಹಿನ್ನೆಲೆಯಲ್ಲಿ ನೆಲಮಟ್ಟದಿಂದ ತುಸು ಎತ್ತರದಲ್ಲಿ ನಿಂತಿರುವ ಶ್ರೀ ಋಷ್ಯಶೃಂಗೇಶ್ವರ ದೇವಾಲಯವು ದ್ರಾವಿಡ ಶೈಲಿಯಲ್ಲಿ ನಿರ್ಮಿತವಾದ ಕಗ್ಗಲ್ಲಿನ ದೊಡ್ಡ ಕಟ್ಟಡವಾಗಿದೆ.

ಗರ್ಭಗೃಹವು 12x12 ಅಡಿ ಚತುರಸ್ರಾಕಾರವಾಗಿದೆ. ಸರಳವಾದ ಅಂತರಾಳ ಅಥವಾ ಸುಕನಾಸಿ 10x8 ಆಕಾರದಲ್ಲಿದೆ. ನವರಂಗ 30x30 ಅಡಿ ವಿಸ್ತೀರ್ಣದಲ್ಲಿದೆ. ಮುಖಮಂಟಪ, ಪ್ರದಕ್ಷಿಣಾಪಥ, ನಂದಿಮಂಟಪ ಇವೆ.

ಗರ್ಭಗೃಹದಲ್ಲಿ ಲಿಂಗವು ಸ್ತಂಭಾಕೃತಿಯಲ್ಲಿ 4 ಅಡಿ ಎತ್ತರ ಇದೆ. ರುದ್ರಾಕ್ಷಾಕಾರದ ಲಿಂಗದ ಮೇಲೆ ಮೂರು ಕೋಡುಗಳನ್ನು ಬಿಡಿಸಲಾಗಿದೆ. ಗರ್ಭಗೃಹದ ಎರಡು ಪಾರ್ಶ್ವಗಳಲ್ಲಿ ಗಣಪತಿ ಹಾಗೂ ಮಹಿಷಾಸುರಮರ್ದಿನಿ ಮೂರ್ತಿಗಳಿರುವ ಚಿಕ್ಕ ಗುಡಿಗಳಿವೆ. ಗಣೇಶನ ಗುಡಿಯಲ್ಲಿ ಬಲಗಡೆಗೆ ಸೊಂಡಿಲು ತಿರುಗಿರುವ ದ್ವಿಭುಜ ಗಣಪತಿಯ ಅಪರೂಪದ ವಿಗ್ರಹ ಇರುವುದು ಗಮನಾರ್ಹವಾಗಿದೆ.

ನವರಂಗಕ್ಕೆ ಮೂರು ಪ್ರವೇಶದ್ವಾರಗಳಿವೆ. ನವರಂಗದ ಕಂಬಗಳು ತಳಭಾಗದಲ್ಲಿ ಚೌಕವಾಗಿಯೂ, ಯಷ್ಟಿಭಾಗದಲ್ಲಿ ಅಷ್ಟಮುಖವಾಗಿಯೂ ಮತ್ತು ಮೇಲ್ಭಾಗದಲ್ಲಿ ಗುಂಡಾಗಿಯೂ ಇವೆ. ಕಂಬಗಳ ಮೇಲೆ ಕೆತ್ತಿರುವ ಶಿಲ್ಪಗಳಲ್ಲಿ ಮನುಷ್ಯ, ಪ್ರಾಣಿ, ಮುಂತಾದವುಗಳ ವಿಶಿಷ್ಟ ಸಮ್ಮಿಲನದ ಸಂಯೋಜನಾ ಚಾತುರ್ಯವನ್ನು ಮತ್ತು ಕಲ್ಪನಾಪ್ರತಿಭೆಯನ್ನು ಗುರುತಿಸಬಹುದು. ಕಾಳಿಂಗಮರ್ದನ, ಜೋಡಿ ಹಂಸ, ಉಗ್ರನರಸಿಂಹ, ಮಕರದ ಮೇಲೆ ನಿಂತಿರುವ ದೇವತೆ, ವಾದ್ಯಗಳೊಂದಿಗೆ ನರ್ತಿಸುತ್ತಿರುವ ಯೋಗಿ, ಗೋಪೀಕೃಷ್ಣ, ಸೀತಾಲಕ್ಷ್ಮಣಸಹಿತ ಶ್ರೀರಾಮಚಂದ್ರ, ವಿಷ್ಣುವಾಹನ ಗರುಡ, ಎರಡು ಸರ್ಪಗಳ ಅಲಂಕರಣದ ಜ್ಯಾಮಿತೀಯ ವಿನ್ಯಾಸ, ಒಂದು ತಲೆ ಮತ್ತು ಎರಡು ದೇಹಗಳ ಕಿನ್ನರಿ, ಅಲಂಕೃತ ಕಮಲ, ಬಳ್ಳಿ ವಿನ್ಯಾಸ ಸಹಿತವಾದ ಮಕರ, ಮೂರು ಹಂಸಗಳ ವಿನ್ಯಾಸದಿಂದ ಮೂಡಿದ ಚಕ್ರ, ಅಲಂಕೃತ ವೃಕ್ಷ, ಕಮಲ, ಕನ್ನಡಿಯೊಡನೆ ಕನ್ಯೆ, ಮಕರ, ಗಣಪತಿ, ಅಲಂಕಾರದ ವಿನ್ಯಾಸಗಳು, ಹನುಮಂತ, ಹಂಸ, ಕೇಶಶೃಂಗಾರ ದಲ್ಲಿ ತೊಡಗಿರುವ ರಮಣಿ, ಅಶ್ವಾರೋಹಿ, ಆನೆ, ಕನ್ನಡಿಯನ್ನು ನೋಡುತ್ತಿರುವ ಸ್ತ್ರೀ ಈ ಶಿಲ್ಪಗಳು ವಿಜಯನಗರ ಶೈಲಿಯನ್ನು ಹೋಲುತ್ತವೆ. ಆರು ಕಂಬಗಳಿಂದ ಕೂಡಿದ ಮುಖಮಂಟಪ ಇದೆ, ಒಳಮಂಟಪದ ಭಾಗದಂತಿರುವ ಎರಡು ಕಂಬಗಳು ಪ್ರಾಚೀನ ಕಾಲಕ್ಕೆ ಸೇರಿವೆ. ಮಂಟಪದ ಸುತ್ತಲೂ ಕುಳಿತುಕೊಳ್ಳಲು ಕಲ್ಲುಬಂಡೆಗಳನ್ನು ಹಾಸಿದ್ದಾರೆ. ದೇವಾಲಯದ ಎದುರಿನಲ್ಲಿ ಪುಟ್ಟ ನಂದಿಮಂಟಪ ಇದೆ. ಈ ಮಂಟಪದಲ್ಲಿರುವ ನಂದಿವಿಗ್ರಹವು ಮನೋಹರವಾಗಿದೆ. ಲಿಂಗದ ಎದುರಿಗೆ ನಂದಿಯ ಶಿಲ್ಪ ಇದೆ.

**ಮಳೆ ದೇವರು :** ಶ್ರೀ ಋಷ್ಯಶೃಂಗೇಶ್ವರ ಮಳೆದೇವರೆಂದೇ ಪ್ರಸಿದ್ಧಿ ಪಡೆದಿದ್ದಾನೆ. ಕ್ಷಾಮನಿವಾರಕ ದೇವತೆಯೂ ಆದ ಋಷ್ಯಶೃಂಗನನ್ನು ಭಕ್ತರು ಸಕಾಲಿಕ ಮಳೆಯನ್ನು ಕರುಣಿಸಬೇಕೆಂದು ಪ್ರಾರ್ಥಿಸುತ್ತಾರೆ. ಈ ದೇವಳದಲ್ಲಿ ಪೂಜೆ ಮಾಡಿದ ನಂತರ ತುಂಗಭದ್ರಾ ನದಿ ತುಂಬಿ ಹರಿಯುತ್ತದೆ ಎಂಬ ಪ್ರತೀತಿ ಇದೆ.

**ಪೂಜಾಕಾರ್ಯಗಳು :** ಶ್ರಾವಣ–ಕಾರ್ತಿಕ ಮಾಸಗಳ ಸೋಮವಾರದಂದು ಶ್ರೀಋಷ್ಯಶೃಂಗೇಶ್ವರ ದೇವರಿಗೆ ರುದ್ರಹೋಮ ನಡೆಯುತ್ತದೆ. ಶಿವರಾತ್ರಿಯ ದಿನ ಇಲ್ಲಿ ಹೆಚ್ಚು ಜನ ಸೇರುತ್ತಾರೆ. ಅತಿವೃಷ್ಟಿ, ಅನಾವೃಷ್ಟಿ ಪರಿಹಾರಕ್ಕಾಗಿ ರುದ್ರಹೋಮ, ಪರ್ಜನ್ಯ ಜಪ ಇತ್ಯಾದಿ ಸೇವೆಗಳು ನಡೆಯುತ್ತವೆ. ವರ್ಷದಲ್ಲಿ ಒಂದು ಬಾರಿ ಫಾಲ್ಗುಣ ಮಾಸದಲ್ಲಿ ಮಹಾರುದ್ರ ಹೋಮ ನಡೆಯುತ್ತದೆ.

**ಮಹಾರಥೋತ್ಸವ ಹಾಗೂ ಜಾತ್ರೆ :** ಚೈತ್ರ ಶುದ್ಧ ಆರ್ದ್ರಾ ನಕ್ಷತ್ರದಂದು (ಪ್ರತಿ ವರ್ಷ ಮಾರ್ಚ್–ಏಪ್ರಿಲ್ ತಿಂಗಳಿನಲ್ಲಿ)ಮಹಾರಥೋತ್ಸವ ಹಾಗೂ ಜಾತ್ರೆ ನಡೆಯುತ್ತದೆ. ಸಾವಿರಾರು ಜನ ಭಕ್ತಾದಿಗಳು ಬಂದು ದೇವರ ಕೃಪೆಗೆ ಪಾತ್ರರಾಗುತ್ತಾರೆ.

**ಶಾಸನಗಳ ಬಗ್ಗೆ ಮಾಹಿತಿ :** ಕ್ರಿ.ಶ. 7ನೆಯ ಶತಮಾನದಲ್ಲಿ ಕಿಗ್ಗವು ಕದಂಬ ಮಂಡಲಕ್ಕೆ ಸೇರಿದ ಗ್ರಾಮವಾಗಿತ್ತೆಂದು ಕೊಪ್ಪ–38 ರ ಶಾಸನ ತಿಳಿಸುತ್ತದೆ ಹಾಗೂ ಆ ಕಾಲದಲ್ಲಿ ಆಳುಪ ಅರಸನು ಆಳುತ್ತಿದ್ದು, ಅವನಿಗೆ ಗುಣಸಾಗರನೆಂಬ ಹೆಸರಿತ್ತು. ಆತ ಕಿಳ್ಗಾನದೇವರಿಗೆ ಎಲ್ಲ ಮಾನ್ಸರ್ವಪರಿಹಾರಂ ಬಿಟ್ಟ ಎಂದು ಉಲ್ಲೇಖವಿದೆ. ಗುಣಸಾಗರ ಮತ್ತು ಚಿತ್ರವಾಹನರು  ದಕ್ಷಿಣ ಕನ್ನಡ ಪ್ರದೇಶದಲ್ಲಿ ಆಳುತ್ತಿದ್ದ ಆಳುಪ ಮನೆತನಕ್ಕೆ ಸೇರಿದವರು. ಇದೇ ಕಾಲಕ್ಕೆ ಸೇರಿದ ಇನ್ನೆರಡು ಶಾಸನಗಳು ಸಾಂತರಸರ ಆಳ್ವಿಕೆಗೆ ಸೇರಿದವಾಗಿದ್ದು ಕಿಳ್ಗದ ಭಟರಿಗೆ ಭೂಮಿ ದಾನ ನೀಡಿದ ವಿಷಯವನ್ನು ನಿರೂಪಿಸುತ್ತದೆ.ಗ್ರಾಮದಲ್ಲಿ ದೊರೆತಿರುವ ಕ್ರಿ.ಶ.11 ನೇ ಶತಮಾನದ ಅಂತ್ಯಭಾಗದ ಶಾಸನದಲ್ಲಿ ಪೊಂಬುಚ್ಚದಿಂದ ಪೃಥ್ವೀವಲ್ಲಭ ಸಾಂತರಸ ಆಳುತ್ತಿದ್ದಾಗ ಭೂದಾನವೊಂದನ್ನು ನೀಡಿದ ಬಗ್ಗೆ ಉಲ್ಲೇಖವಿದೆ.

ಶ್ರೀ ಋಷ್ಯಶೃಂಗೇಶ್ವರ ದೇವರ ಉತ್ಸವ ವಿಗ್ರಹದ ಪೀಠದ ಮೇಲೆ ಇರುವ ಬರಹದಿಂದ ಕೆಳದಿ ರಾಣಿ ಚೆನ್ನಮ್ಮಾಜಿಯ (1671–91) ಬಳಿ ಅಧಿಕಾರಿಯಾಗಿದ್ದ ಗುರುಬಸಪ್ಪನು ಆ ವಿಗ್ರಹವನ್ನು ಮಾಡಿಸಿ ದೇವಾಲಯಕ್ಕೆ ಅರ್ಪಿಸಿದನೆಂದು ತಿಳಿದು ಬರುತ್ತದೆ.

18 ನೇ ಶತಮಾನಕ್ಕೆ ಸೇರಿದ ಲಿಂಗಣ್ಣ ಕವಿಯ 'ಕೆಳದಿ ನೃಪವಿಜಯಂ' ಕೃತಿಯಲ್ಲಿ ಭದ್ರಪ್ಪನಾಯಕನು ಕಿಗ್ಗಕ್ಕೆ ಹೋಗಿ ಶೃಂಗೇಶ್ವರದೇವರ ದರ್ಶನ ಪಡೆದ ಬಗ್ಗೆ ಉಲ್ಲೇಖವಿದೆ.

**ಸುತ್ತಮುತ್ತ ಏನಿದೆ** ? ನರಸಿಂಹ ಪರ್ವತ ;  ಶ್ರೀಋಷ್ಯಶೃಂಗೇಶ್ವರ ದೇವಸ್ಥಾನದಿಂದ 7 ಕಿ.ಮೀ. ದೂರದಲ್ಲಿ ನರಸಿಂಹ ಪರ್ವತ ಇದೆ. ಇದನ್ನು 'ಚಾರಣಿಗರ ಸ್ವರ್ಗ' ಎಂದೇ ಕರೆಯುತ್ತಾರೆ. ಇದು ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ಇದೆ. ಅಗುಂಬೆ ಘಟ್ಟಗಳ ಅತಿ ಎತ್ತರದ ಶಿಖರವಾಗಿದೆ. ಸುಮಾರು 3,772 ಅಡಿ ಎತ್ತರದಲ್ಲಿದೆ. ಇಲ್ಲಿ ಆಗುಂಬೆ ಕಣಿವೆ ಮತ್ತು ಸೂರ್ಯಾಸ್ತದ ನೋಟ ವಿಶೇಷವಾಗಿದೆ. ಪ್ರಕೃತಿಪ್ರಿಯರಿಗೆ ಹೇಳಿ ಮಾಡಿಸಿದ ಸ್ಥಳ.

**ಸಿರಿಮನೆ ಜಲಪಾತ :** ದೇವಸ್ಥಾನದಿಂದ 5 ಕಿ.ಮೀ. ಮುಂದೆ ಹೋದರೆ ಹಾಲ್ನೊರೆಯ  ಸಿರಿಯಾದ ಸಿರಿಮನೆ ಜಲಪಾತ ನೋಡಲು ಸಿಗುತ್ತದೆ. ಇದು ಕರ್ನಾಟಕದ ಪಶ್ಚಿಮ ಘಟ್ಟದಲ್ಲಿರುವ ಒಂದು ಸುಂದರ ಜಲಪಾತ. ಇದಲ್ಲದೆ ಶೃಂಗೇರಿ ಶಾರದಾಂಬೆ ದೇವಸ್ಥಾನ, ಕಳಸ, ಹೊರನಾಡು, ಆಗುಂಬೆಯಂತಹ ಹಲವಾರು ಪ್ರೇಕ್ಷಣೀಯ ಸ್ಥಳಗಳು ನೋಡಲು ಸಿಗುತ್ತವೆ. ದೇವಾಲಯದ ಸಂದರ್ಶನ ಸಮಯ ಬೆಳಗ್ಗೆ 5.30ರಿಂದ ಮಧ್ಯಾಹ್ನ 1.30ರವರೆಗೆ, ಸಂಜೆ 4.30ರಿಂದ ರಾತ್ರಿ 8.15ರವರೆಗೆ.

❑

# ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಚನಗಳು

**ರಂಗನಾಥ್ ಮೈಸೂರು**

ಅವರಿವರಂತಲ್ಲ ನೀವು ಅಕ್ಷರಘನದ
ಉತ್ತುಂಗವಯ್ಯಾ
ಅವರಿವರಂತಲ್ಲ ನೀವು ಕರುಣೆ ತುಂಬಿದ
ಕಲ್ಪವೃಕ್ಷವಯ್ಯ
ಅವರಿವರಂತಲ್ಲ ನೀವು ಮಾತೆಯ
ಮಮತೆಯ ಮಹಾಪ್ರವಾಹದಂತಯ್ಯ
ನಿಮ್ಮನುಗ್ರಹದ ಮಡಿಲಲ್ಲಾಡುವ
ಮುಗ್ಧ ಶಿಶು ನಾನು ಸದಾ ಎನ್ನ ಪೊರೆಯಯ್ಯಾ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಸಿರಿಯನಿತ್ತು ನಿನ್ನ ಒಲಿಸಲೆತ್ನಿಸಿ
ವಿಫಲರಾದವರೆಷ್ಟೋ
ಭುವಿಯನಿತ್ತು ನಿನ್ನ ಒಲಿಸಲೆತ್ನಿಸಿ
ವಿಫಲರಾದವರೆಷ್ಟೋ
ಅಧಿಕಾರ ಅಂತಸ್ತುಗಳಲಿ ನಿನ್ನ ಒಲಿಸಲೆತ್ನಿಸಿ
ವಿಫಲರಾದವರೆಷ್ಟೋ
ಎನ್ನ ಅಕ್ಷರದ ಅರ್ಚನೆಗೆ ಮೆಚ್ಚಿ ಮೈದಡವಿದ
ನಿನ್ನ ಮೃದುಹೃದಯಕ್ಕೆ ಬೆಚ್ಚಿ ಬೆರಗಾದೆನಯ್ಯಾ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಗುರುವ ಕಾಣಲು ಹೊರಟೆ ಗುರು ಕಾಣಲಿಲ್ಲ
ಶಿವನ ಹುಡುಕುತ ಹೊರಟೆ ಶಿವ ಕಾಣಲಿಲ್ಲ
ಕಾಯಕರ್ಮವ ಮಾಡಿದರೂ ಫಲ ಕಾಣಲಿಲ್ಲ
ಅರಿವ ಹುಡುಕುತ್ತ ಹುಡುಕುತ್ತ ಸೋತು ಸೊರಗಿರಲು
ನಿರಂಜನ ಪ್ರಣವ ಸ್ವರೂಪಿಯಾಗಿ ಗೋಚರಿಸಿ

ಸಂತೈಸಿ ಅರಿವೆಂಬ ಕ್ಷೀರವಿತ್ತು ಪೊರೆದೆಯಯ್ಯಾ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಎದುರು ನಿಂತರೆ ಬಾಯಿ ಬಾರದು ಕಾಣಾ
ಮೂಕಾಗುತ್ತೇನೆ ಮಾತು ಮೌನವಾಗುತ್ತದೆ
ಕಣ್ತುಂಬ ತುಂಬಿಕೊಳ್ಳುತ್ತೇನೆ
ಮನದ ತುಂಬೆಲ್ಲ ಹರಡಿಕೊಳ್ಳುತ್ತೇನೆ
ಕಾಣದ ದೈವವ ಕಂಡುಕೊಳ್ಳುತ್ತೇನೆ
ಅರಿವಿಲ್ಲದೆಯೆ ಶಿರಬಾಗಿ ನಮಿಸುತ್ತೇನೆ
ಕಂದನೆಂಬ ಭಾವದಿ ಕರುಣೆ ತೋರಿ ಹರಸಯ್ಯಾ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಮಲ್ಲಿಗೆಗೆ ಮುದುಡಿಹೋಗುವ ಚಿಂತೆ
ತಾವರೆಗೆ ಬಾಡಿಹೋಗುವ ಚಿಂತೆ
ಸಂಸಾರಸಾಗರದಿ ಸಾವಿರದಲೆಗಳ ಚಿಂತೆ
ಗುರುವೆ ಚಿತ್ ಸ್ವರೂಪಿಯಾಗಿ ನೀ
ಎನ್ನ ಮನದಲ್ಲಿ ಸದಾ ನೆಲೆಸಿರಲು
ಎನಗಾವ ಚಿಂತೆ ಹೇಳಯ್ಯಾ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಗುರುಪರಂಪರೆಯ ಹಾದಿಯಲಿ ಮುನ್ನಡೆದಿರಿ
ಗುರು ಕಂಡ ಕನಸ ನನಸಾಗಿಸುತ್ತ ಅನವರತ ಶ್ರಮಿಸಿದಿರಿ
ಕಾಯಕದ ಪಥದಲ್ಲಿ ಹರಸಿದಿರಿ ಶ್ರೀಕ್ಷೇತ್ರ ಸುತ್ತೂರ
ಸುತ್ತೂರು ನಿತ್ಯ ನೆನೆವಂತೆ ಮಾಡಿದಿರಿ
ಕಾಯಕಯೋಗಿಯೆಂಬ ಹೆಸರು ನಿತ್ಯ ಅನ್ವರ್ಥ
ನಿಮಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಸಹಸ್ರ ಸಹಸ್ರ ಜನರಿಗೆ ಕಟ್ಟಿಕೊಟ್ಟಿರಿ ಬದುಕು
ನಿಮ್ಮೌದಾರ್ಯದ ನೀರನೆರೆದು
ಹಚ್ಚಿದ ದೀಪಗಳೆಷ್ಟೋ ಗೊತ್ತಿಲ್ಲ ನನಗೆ
ಬೆಳಕು ಮಾತ್ರ ನೀವು ಕಾಣಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಅಯ್ಯಾ ಮಾತಿನಾಡಂಬರವಿಲ್ಲದ
ಮೌನ ಯತಿ ನೀವು, ಆಡಿದ ಮಾತೆಲ್ಲವೂ
ಮುತ್ತು ಮಾಣಿಕ್ಯ, ನಿಮ್ಮ ಸೂಳ್ನುಡಿಯೇ
ಎನ್ನ ಬದುಕನೆತ್ತುವ ಹರಿಗೋಲು ಕಾಣಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ನೀಲಾಗಸದಷ್ಟು ವಿಸ್ತಾರ ನಿಮ್ಮ ಚಿಂತನಾಲಹರಿ
ವಿಶಾಲ ಸಾಗರದಷ್ಟು ಆಳ ನಿಮ್ಮ ದೂರದೃಷ್ಟಿ
ಸುತ್ತೂರು ಶ್ರೀಸಾಮ್ರಾಜ್ಯವನು ವಿಸ್ತರಿಸಿದ
ಅಧ್ಯಾತ್ಮಚಕ್ರವರ್ತಿ ನೀವು ಕಾಣಾ ಹೇ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಪ್ರಶಾಂತ ಕಣ್ಣುಗಳಲ್ಲಿ ಅದೆಂಥ ತಂಪು
ನುಡಿವ ಮಾತುಗಳಲ್ಲಿ ಅದೆಷ್ಟು ಹಿತ !
ಬರಡು ಪದಗಳಲ್ಲಿ ಬಣ್ಣಿಸಲಾದೀತೆ?
ಅನುಭವಿಸಬೇಕಷ್ಟೇ ಹೇಳಲಾಗದು ಹೆಚ್ಚು
ಕಾವಿಯುಟ್ಟ ಕರುಣಾಮಯಿ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಬರೆವ ಲೇಖನಿಗೆ ಬೇಕಯ್ಯಾ ನಿಮ್ಮ ಕರುಣೆ
ನೋಡುವ ನೋಟಕ್ಕೆ ಬೇಕಯ್ಯಾ ನಿಮ್ಮ ಕರುಣೆ
ಹಸಿದ ಒಡಲು ತುಂಬಲೂ ನೆಮ್ಮದಿ ನೆಲೆ ನಿಲ್ಲಲು
ಬೇಕಯ್ಯ ನಿಮ್ಮ ಕರುಣೆ
ಅನ್ನ ವಸತಿ ವಿದ್ಯೆಯನಿತ್ತಿರಯ್ಯಾ
ಕಂದ ಅತ್ತು ಅಮ್ಮ ಎಂದಾಗ ಮಿಡಿವ ತಾಯ
ಹೃದಯದಂತೆ ಕಾಣಾ ನಿಮ್ಮ ಕರುಣೆ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಭುವಿಗೆ ಬಿದ್ದ ಮಳೆಯ ಹನಿಗಳ ಎಣಿಸುವವರಾರು
ಸಾಗರದ ಅಲೆಗಳನು ಗಣಿಸುವವರಾರು
ಗುರುಕರುಣೆಗೆ ಎಣೆಯುಂಟೆ
ನಿಮ್ಮ ದಿವ್ಯದೃಷ್ಟಿಯ ಹೊನಲು ಬಿದ್ದೊಡೆ

ಕಾಡುಗಲ್ಲೂ ದಿವ್ಯಮೂರ್ತಿಯಾಗಬಲ್ಲದು ಕಾಣಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ವಚನ ಬರೆದವನು ನಾನಲ್ಲ
ಅಂತರಾತ್ಮದ ಅನಂತ ತೇಜಸ್ಸೊಂದು
ಒತ್ತಿ ಒತ್ತಿ ಬಿತ್ತರಿಸಿ
ಭಾವಸ್ಫೋಟವಾದಾಗ ಬಂದೀ
ಅಕ್ಷರಕಿರಣಗಳನ್ನು ಒಪ್ಪಿಸಿಕೊಂಡು
ಅನುಗ್ರಹಿಸಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಇದೆಯಲ್ಲ ಅಂಕಿತವೊಂದು
ಮುಕುಂದಪ್ರಿಯನೆಂದು ಮತ್ತೇಕೆ
ಇನ್ನೊಂದು ಅಂಕಿತ ಎಂದು ಕೇಳಿದವರಿಗೆ
ಏನೆಂದು ಹೇಳಲಯ್ಯಾ?
ಹರಸುವಯ್ಯನಿಗೆ ಹದಿನಾರು ಹೆಸರು
ಅಂತರಂಗದ ಗುರುವೆ ನಿನ್ನ ಅಂಕಿತಕೆ
ನೀನೇ ಸಾಕ್ಷಿ ಕಾಣಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ಸಾಧನೆಗೆ ಸಾವಿರ ದಾರಿ
ಧರ್ಮಕ್ಕೆ ನೂರು ದಿಕ್ಕು
ಗುರಿ ತಲುಪುವಲ್ಲಿ ಗಾವುದ ದೂರವಿದ್ದೇನೆ
ಕೈಹಿಡಿದು ಕರೆದೊಯ್ದು ಹರಸು ನೀ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

ನೂರು ನಕ್ಷತ್ರದ ಕಿರಣ
ಹೊಳೆವ ಸೂರ್ಯನ ಬೆಳಕಾಗಬಲ್ಲುದೆ
ನೂರು ನದಿ ಸೇರಿದರೂ ಹೆದ್ದೊರೆಯಲ್ಲದೆ
ಸಾಗರವಾಗಬಲ್ಲದೆ
ನೂರು ದೈವದ ಕರುಣೆಗಿಂತ ಹೇ ಗುರುವೇ
ನಿನ್ನ ಕಣ್ನೋಟದ ಬೆಳದಿಂಗಳು ಮೇಲು ಕಾಣಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ...

(ಮುಂದುವರಿಯುವುದು)

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ವಿಶೇಷಚೇತನರಿಗೆ ಗೌರವಯುತ ಕಲಿಕೆಯ ವಾತಾವರಣ ಸೃಷ್ಟಿಸಬೇಕು**

ವಿಶೇಷಚೇತನ ವಿದ್ಯಾರ್ಥಿಗಳಿಗೆ ಸಮಗ್ರ ಮತ್ತು ಗೌರವಯುತ ಕಲಿಕೆಯ ವಾತಾವರಣವನ್ನು ಸೃಷ್ಟಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 1ರಂದು ಮೈಸೂರು ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ವಿದ್ಯಾರ್ಥಿನಿಲಯದಲ್ಲಿ ಚೆಲ್ಲಾರಾಂ ಫೌಂಡೇಷನ್ ವತಿಯಿಂದ ನೂತನವಾಗಿ ನಿರ್ಮಿಸಿರುವ ಭೋಜನಾಲಯ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ವಿಶೇಷಚೇತನ ವಿದ್ಯಾರ್ಥಿಗಳನ್ನು ಉತ್ತೇಜಿಸುವಲ್ಲಿ ಇಂತಹ ಸೌಲಭ್ಯಗಳು ಮಹತ್ವದ್ದಾಗಿರುತ್ತವೆ. ಈ ನೂತನ ಭೋಜನಾಲಯವು ಕೇವಲ ಒಂದು ರಚನಾತ್ಮಕ ಸೇರ್ಪಡೆಯಲ್ಲ ಇದು ಕಾಳಜಿ, ಸಮಾನತೆ ಮತ್ತು ದೂರದೃಷ್ಟಿಯನ್ನು ಹೊಂದಿದೆ. ಇತರ ತಾಂತ್ರಿಕ ಸಂಸ್ಥೆಗಳಿಗೂ ಇಂತಹ ಕಾರ್ಯಗಳು ಮಾದರಿಯಾಗಿ ನಿಲ್ಲುತ್ತವೆ ಎಂದು ಹೇಳಿದರು.

ಚೆಲ್ಲಾರಾಂ ಫೌಂಡೇಶನ್‌ನ ಸಿಎಸ್‌ಆರ್ ಮುಖ್ಯಸ್ಥರಾದ ಡಾ. ಅಶೋಕ್ ಗವಂಡೆರವರು ವಿದ್ಯಾರ್ಥಿಗಳ ಕಲ್ಯಾಣ ಮತ್ತು ಅಂತರ್ಗತ ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ ಸಂಸ್ಥೆಯ ಬದ್ಧತೆಯನ್ನು ಶ್ಲಾಘಿಸಿದರು. ಈ ಭೋಜನಾಲಯ ಕೇವಲ ಕಟ್ಟಡವಲ್ಲ, ಸಂಸ್ಥೆಯು ವಿದ್ಯಾರ್ಥಿಗಳ ಬಗ್ಗೆ ಹೊಂದಿರುವ ಕಾಳಜಿಯನ್ನು ಪ್ರತಿಬಿಂಬಿಸುತ್ತದೆ ಎಂದು ತಿಳಿಸಿದರು.

ನೂತನ ಭೋಜನಾಲಯದಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯನ್ನು ಮಾಡಬಹುದಾಗಿದೆ. ವಿದ್ಯಾರ್ಥಿಗಳ ಅನುಕೂಲತೆಗಾಗಿ ಆಸನ ವ್ಯವಸ್ಥೆಗಳನ್ನು ಹಾಗೂ ಡಂಬ್‌ವೇಟರ್ ಅಳವಡಿಸಿದೆ. ವಿದ್ಯಾರ್ಥಿನಿಲಯದಲ್ಲಿ ಉತ್ತಮ ಹಾಗೂ ಪೌಷ್ಟಿಕ ಆಹಾರವನ್ನು ಒದಗಿಸುವ ವ್ಯವಸ್ಥೆ ಮಾಡಲಾಗಿರುತ್ತದೆ.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಬಿ. ಸುರೇಶ್‌ರವರು ಉಪಸ್ಥಿತರಿದ್ದರು. ಶ್ರೀಮತಿ ಸತ್ಯವತಿ ಚಾರ್ ಮೆಮೋರಿಯಲ್ ಚಾರಿಟಬಲ್ ಟ್ರಸ್ಟ್‌ನ ಶ್ರೀಮತಿ ವೈದೇಹಿ ಅಯ್ಯಂಗಾರ್ ಮತ್ತು ಡಾ. ಪುಷ್ಪ ಅಯ್ಯಂಗಾರ್‌ರವರು ಪೀಠೋಪಕರಣಗಳನ್ನು ಕೊಡುಗೆಯಾಗಿ ನೀಡಿದರು. ಶ್ರೀ ಬಿ.

ಇಳಂಗೋವನ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಕೆ. ಕುಶಾಲ್ ಸ್ವಾಗತಿಸಿದರು. ಕು. ಅಮೂಲ್ಯ ಪ್ರಾರ್ಥಿಸಿದರು. ಡಾ. ಎಸ್.ಜಿ. ಶ್ರೀಕಂಠಸ್ವಾಮಿ ವಂದಿಸಿದರು.

**ಭಾರತದ ಧಾರ್ಮಿಕ ಪರಂಪರೆಗೆ ಮಹತ್ವದ ಶಕ್ತಿಯಿದೆ**

ಭಾರತದ ಧಾರ್ಮಿಕ ಪರಂಪರೆಗೆ ಮಹತ್ವದ ಶಕ್ತಿಯಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 4ರಂದು ಮಾಗಡಿ ತಾಲ್ಲೂಕು ಬ್ಯಾಲಕೆರೆ ಶ್ರೀ ಹೊನ್ನಾದೇವಿ ದೇವಾಲಯದ ರಾಜಗೋಪುರ, ಕಲಶ ಸ್ಥಾಪನೆ, ಕುಂಭಾಭಿಷೇಕ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕೆಂಪೇಗೌಡರು, ಸಿದ್ಧಗಂಗೆ ಹಾಗೂ ಆದಿಚುಂಚನಗಿರಿ ಮಠಾಧೀಶರುಗಳು ಮೊದಲಾದವರುಗಳನ್ನು ನಾಡಿಗೆ ಕೊಡುಗೆಯಾಗಿ ನೀಡಿದ ಮಾಗಡಿ ಪುಣ್ಯಭೂಮಿ. ಆಧ್ಯಾತ್ಮಿಕತೆಯನ್ನು ಗರ್ಭಿಕರಿಸಿಕೊಂಡಿರುವ ದೇಶ ಭಾರತ. ಹಿಂದೂ ಧರ್ಮದ ಪಾವಿತ್ರ್ಯತೆ ಬಗ್ಗೆ ಸಂದೇಶ ನೀಡಿದ ವಿವೇಕಾನಂದರು ಜಗತ್ತನ್ನೆಲ್ಲ ಸಂಚರಿಸಿ ಭಾರತದಂತಹ ದೇಶವನ್ನು ಎಲ್ಲೂ ಕಾಣಲು ಸಾಧ್ಯವಿಲ್ಲ. ಭಾರತೀಯರಾದ ನಾವು ಅಭಿಮಾನಪಡಬೇಕು ಎಂದರು. ಹೊನ್ನಾದೇವಿ ಶಿವಗಂಗೆಯಿಂದ ಮೂರು ಹೆಜ್ಜೆ ಇಟ್ಟು ಬ್ಯಾಲಕೆರೆ ಗ್ರಾಮಕ್ಕೆ ಬಂದು ನೆಲೆಸಿರುವಳು. ದೇವಾಲಯಕ್ಕೆ ಬಂದರೆ ಮನುಷ್ಯನ ಭಾವನೆ ಬದಲಾಗುತ್ತದೆ ಮತ್ತು ವಿಕಾಸಗೊಳ್ಳುತ್ತದೆ. ಮನುಷ್ಯನಿಗೆ ತಾಳ್ಮೆ, ಸಹನೆ ಬಹಳ ಮುಖ್ಯ. ಯಾವುದೆ ಸಮಸ್ಯೆ ಬಂದರೂ ಎದೆಗುಂದಬಾರದು, ಧೈರ್ಯವಾಗಿ ಎದುರಿಸಬೇಕು ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಆಶೀರ್ವದಿಸಿದರು. ಶ್ರೀ ಗದ್ದುಗೆ ಮಠದ ಶ್ರೀ ಮಹಾಂತ ಸ್ವಾಮಿಗಳು, ಸಂಸದರಾದ ಡಾ. ಸಿ.ಎನ್. ಮಂಜುನಾಥ್, ಶಾಸಕರಾದ ಶ್ರೀ ಎನ್. ಶ್ರೀನಿವಾಸ್, ಮಾಜಿ ಸಚಿವರಾದ ಶ್ರೀ ಎಚ್.ಎಂ. ರೇವಣ್ಣ, ಮಾಜಿ ಶಾಸಕರಾದ ಶ್ರೀ ಎ. ಮಂಜುನಾಥ್, ಶ್ರೀ ಲಿಂಗೇಶ್, ಶ್ರೀ ಅ. ದೇವೇಗೌಡ, ಶ್ರೀ ಬಿ.ಎಸ್. ಪರಮಶಿವಯ್ಯ ಉಪಸ್ಥಿತರಿದ್ದರು.

**ಬಸವಣ್ಣನವರ ಆದರ್ಶ ಸಮಾಜಕ್ಕೆ ಮಾದರಿ**

ಬಸವಣ್ಣನವರ ಆದರ್ಶಗಳಿಂದ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 4ರಂದು ಮಾಗಡಿ ತಾಲ್ಲೂಕು ಸೋಲೂರು ಸರ್ಕಾರಿ ಬಸ್ ನಿಲ್ದಾಣದಲ್ಲಿ ಶ್ರೀ ಚಿಲುಮೆ ಮಠ ಅಭಿವೃದ್ಧಿ ಸೇವಾ ಟ್ರಸ್ಟ್‌ನಿಂದ ನಡೆದ ಬಸವ ಜಯಂತಿಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಬಸವಣ್ಣನವರು ಸಮಾಜ ಸುಧಾರಕರು ಹಾಗೂ ತತ್ವಜ್ಞಾನಿಗಳಾಗಿದ್ದರು. ವಚನಗಳ ಮೂಲಕ ಸಾಮಾಜಿಕ ಜಾಗೃತಿ ಮೂಡಿಸಿದರು. ಅವರು ನೀಡಿರುವ ಕಾಯಕತತ್ವ ಇಡೀ ಜಗತ್ತಿಗೆ ಆದರ್ಶವಾಗಿದೆ. ಜಾತಿ ವ್ಯವಸ್ಥೆ, ಲಿಂಗತಾರತಮ್ಯದ

ವ್ಯವಸ್ಥೆ ತೀಕ್ಷ್ಣವಾಗಿದ್ದ 12ನೇ ಶತಮಾನದಲ್ಲಿ ಎಲ್ಲಾ ಕಾಯಕಗಳ ಪ್ರತಿನಿಧಿಗಳನ್ನು ಒಳಗೊಂಡ ಅನುಭವ ಮಂಟಪ ಸ್ಥಾಪಿಸುವ ಮೂಲಕ ಸಮಾಜದಲ್ಲಿ ಜಾತಿ ಪದ್ಧತಿ, ಬೇಧಭಾವ, ಅಸ್ಪೃಶ್ಯತಾ ಮತ್ತು ಮೂಢನಂಬಿಕೆಗಳ ವಿರುದ್ಧ ಹೋರಾಟ ಮಾಡಿದರು ಎಂದು ಹೇಳಿದರು.

ವೀರಶೈವ-ಲಿಂಗಾಯತ ಮಹಾಸಭಾ ಅಧ್ಯಕ್ಷರಾದ ಶ್ರೀ ಬ್ಯಾಲಕೆರೆ ಜಯಣ್ಣ, ಶ್ರೀ ಎಸ್.ಸಿ.ಬಿ.ಎಸ್. ಶಿವರುದ್ರಯ್ಯ, ಬಿಎಂಟಿಸಿ ಮಾಜಿ ನಿರ್ದೇಶಕರಾದ ಶ್ರೀ ಕೆ.ಪಿ. ಬೃಂಗೇಶ್, ಶ್ರೀ ಕೆ.ಪಿ. ಆನಂದ್, ಶ್ರೀ ಎಸ್‌ಸಿಬಿಎಸ್ ಮಂಜುನಾಥ್, ಶ್ರೀ ನಾಗರುದ್ರಶರ್ಮ, ಶ್ರೀ ಸಿ. ಮಹಾಂತೇಶ್, ಶ್ರೀ ಎ.ಆರ್. ಮೃತ್ಯುಂಜಯಸ್ವಾಮಿ ಉಪಸ್ಥಿತರಿದ್ದರು.

**ಎಚ್ಚರಿಕೆಯ ಹೆಜ್ಜೆಗಳನ್ನಿಟ್ಟರೆ ಜೀವನ ಸಾರ್ಥಕ**

ಮನುಷ್ಯ ಜೀವನವನ್ನು ಎಚ್ಚರಿಕೆಯಿಂದ ಸಾಗಿಸಿದರೆ ಸಾರ್ಥಕತೆಯನ್ನು ಕಾಣಬಹುದು ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 6ರಂದು ಕೊಡ್ಲಿಪೇಟೆ ಶ್ರೀ ಕಲ್ಲುಮಠದಲ್ಲಿ ಶ್ರೀ ಬಸವೇಶ್ವರ ಜಯಂತಿ, ಡಾ. ಶಿವಕುಮಾರ ಸ್ವಾಮಿಗಳ ಜಯಂತಿ, ಶ್ರೀ ನಂಜುಂಡ ಸ್ವಾಮಿಗಳ ಸಂಸ್ಮರಣೋತ್ಸವ, ಶ್ರೀ ನಂಜುಂಡೇಶ್ವರ ವಿದ್ಯಾಸಂಸ್ಥೆಯ ರಜತ ಮಹೋತ್ಸವ ಹಾಗೂ ಶ್ರೀ ಮಹಾಂತ ಸ್ವಾಮಿಗಳ ಪಟ್ಟಾಧಿಕಾರ ಸುವರ್ಣ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮಠ, ಮತ್ತು ಶರಣರ ಸಂಪರ್ಕದಿಂದ ದುಃಖ ದುಮ್ಮಾನಗಳು ದೂರವಾಗುತ್ತವೆ. ಅದಕ್ಕಾಗಿಯೇ ಮಠಮಾನ್ಯಗಳಿದ್ದು ಈ ನಿಟ್ಟಿನಲ್ಲಿ ಮಠಗಳಿಗೆ ಭಕ್ತರು ಭೇಟಿ ನೀಡುವುದರಿಂದ ಅವರ ಕಷ್ಟ ಕಾರ್ಪಣ್ಯಗಳು ದೂರವಾಗುತ್ತವೆ. ಆಧ್ಯಾತ್ಮಿಕ, ಸಾಂಸ್ಕೃತಿಕ ಪರಂಪರೆಯಲ್ಲಿ ಕೊಡಗಿನ ಅರಸರ ಕೊಡುಗೆ ಅಪಾರ. ಈ ದಿಸೆಯಲ್ಲಿ ಕೊಡಗಿನಲ್ಲಿ ಹಲವಾರು ಮಠಗಳು ಆಧ್ಯಾತ್ಮಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಯಾಗುತ್ತಿದ್ದು ಈ ಪೈಕಿ ಕಲ್ಲುಮಠವೂ ಅಭಿವೃದ್ಧಿಗೊಳ್ಳುತ್ತಿದೆ. ಇದಕ್ಕೆ ಶ್ರೀ ಮಹಾಂತಸ್ವಾಮಿಗಳ 50 ವರ್ಷಗಳ ಪರಿಶ್ರಮವೆ ಕಾರಣವಾಗಿದೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಪೂಜ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳವರು ಧಾರ್ಮಿಕ ಪರಂಪರೆಯಲ್ಲಿ ಕೊಡಗಿನ ರಾಜರ ಕೊಡುಗೆ ಅಪಾರ. ಕೊಡಗಿನ ರಾಜಾಳ್ವಿಕೆ ಕಾಲದಲ್ಲಿ 108 ಮಠಗಳು ಅಸ್ತಿತ್ವದಲ್ಲಿದ್ದವು. ಈ ಪೈಕಿ ಕಲ್ಲುಮಠವು ಅಸ್ತಿತ್ವವನ್ನು ಉಳಿಸಿಕೊಂಡಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

ವೀರಶೈವ-ಲಿಂಗಾಯತ ಮಹಾಸಭಾದ ರಾಜ್ಯಾಧ್ಯಕ್ಷರಾದ ಶ್ರೀ ಶಂಕರ್ ಮಹದೇವ ಬಿದರಿಯವರು ನಾಡಿಗೆ ಮಠಗಳ ಕೊಡುಗೆ ಅಪಾರ. ವಿಶ್ವದಾದ್ಯಂತ ವೀರಶೈವ-ಲಿಂಗಾಯತ ಸಮಾಜದ ಬಾಂಧವರು ಐದು ಕೋಟಿಗಿಂತ ಹೆಚ್ಚಿದ್ದಾರೆ. ಆದರೆ ಸಮುದಾಯಕ್ಕೆ ಸರ್ಕಾರದಿಂದ ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ

ಸ್ಥಾನಮಾನಗಳು ದೊರೆತಿಲ್ಲ. ಇದಕ್ಕೆ ಸಮುದಾಯದ ಸಂಘಟನೆಯ ಕೊರತೆಯೇ ಕಾರಣವಾಗಿದೆ. ಇನ್ನಾದರೂ ಒಗ್ಗಟ್ಟಿನಿಂದ ಸಮಾಜವನ್ನು ಅಭಿವೃದ್ಧಿಪಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅರಮೇರಿ ಕಳಂಚೇರಿ ಮಠ, ಕಿರಿಕೊಡ್ಲಿ ಮಠ, ಕುಂದೂರು ಮಠ, ಗಾವಡಗೆರೆ, ಕನಕಪುರ ದೇಗುಲಮಠದ ಶ್ರೀಗಳು ಉಪಸ್ಥಿತರಿದ್ದರು. ಶ್ರೀ ಕಲ್ಲುಮಠದ ಶ್ರೀ ಮಹಾಂತ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ವಿದ್ಯಾಶಂಕರ್ ಸ್ವಾಗತಿಸಿದರು. ಶ್ರೀ ಎಚ್.ಎಂ. ದಿವಾಕರ್ ವಂದಿಸಿದರು.

**ಶ್ರೀ ಸುತ್ತೂರು ಮಠದಲ್ಲಿ ಜ್ಯೋತಿರ್ಲಿಂಗಕ್ಕೆ ವಿಶೇಷಪೂಜೆ**

ಮೇ 6 ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಆಶ್ರಮದಿಂದ ತರಲಾಗಿದ್ದ ಶ್ರೀ ಸೋಮನಾಥ ಜೋತಿರ್ಲಿಂಗಕ್ಕೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷಪೂಜೆ, ಮಹಾಮಂಗಳಾರತಿ ನೆರವೇರಿಸಿ ಪುಷ್ಪಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಆರ್ಟ್ ಆಫ್ ಲಿವಿಂಗ್ ಆಶ್ರಮದ ಶ್ರೀ ವಿಷ್ಣುಪಾದಜೀಯವರು ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಜ್ಯೋತಿರ್ಲಿಂಗಕ್ಕೆ ವಿಶೇಷ ಸ್ಥಾನವಿದೆ. ಶಿವನು ಹನ್ನೆರಡು ಸ್ಥಳಗಳಲ್ಲಿ ಜ್ಯೋತಿರ್ಲಿಂಗ ಸ್ವರೂಪಿಯಾಗಿ ಭಕ್ತರಿಂದ ಪೂಜಿಸಲ್ಪಡುತ್ತಿದ್ದಾನೆ. ಜ್ಯೋತಿರ್ಲಿಂಗಗಳಲ್ಲಿ ಶ್ರೀ ಸೋಮನಾಥ ಲಿಂಗ ಮೊದಲನೆಯದು. ಸೌರಾಷ್ಟ್ರ ಸೋಮನಾಥ ಎಂದೇ ಪ್ರಸಿದ್ಧಿ ಹೊಂದಿದೆ. ಆಕ್ರಮಣಕಾರರಿಂದ ಪ್ರತ್ಯೇಕಗೊಂಡು ತಮಿಳುನಾಡಿನಲ್ಲಿ ದೊರೆತಿದ್ದ ಜೋತಿರ್ಲಿಂಗವನ್ನು 200 ವರ್ಷಗಳ ನಂತರ ಶ್ರೀ ರವಿಶಂಕರ್ ಗುರೂಜಿಯವರಿಗೆ ತಲುಪಿಸಲಾಗಿದ್ದು, ಅದಕ್ಕೆ ದೇಶದೆಲ್ಲೆಡೆ ಪೂಜೆ ಸಲ್ಲಿಸಿ ನಂತರ ಸೋಮನಾಥ ದೇವಾಲಯಕ್ಕೆ ತಲುಪಿಸಲಾಗುತ್ತದೆ ಎಂದು ಹೇಳಿದರು.

ಆರ್ಟ್ ಆಫ್ ಲಿವಿಂಗ್ ಆಶ್ರಮದ ಶ್ರೀ ಕಿಶೋರ್ ಪ್ರಸಾದ್‌ರವರು ಹಾಗು ಸದಸ್ಯರು, ಭಕ್ತಾದಿಗಳು, ಶ್ರೀಮಠದ ಗುರುಕುಲ ಸಾಧಕರು, ಸೇವಾ ಸಿಬ್ಬಂದಿವರ್ಗದವರು ಹಾಗು ಸಾರ್ವಜನಿಕರು ಪಾಲ್ಗೊಂಡಿದ್ದರು. ನೂರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಜ್ಯೋತಿರ್ಲಿಂಗದ ದರ್ಶನ ಪಡೆದರು. ನಂತರ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

**ಗುಬ್ಬಿ ತೋಟದಪ್ಪನವರು ವಿದ್ಯಾರ್ಥಿಗಳ ಶಾಶ್ವತ ದಾರಿದೀಪ**

ಗುಬ್ಬಿ ತೋಟದಪ್ಪನವರು ವಿದ್ಯಾರ್ಥಿನಿಲಯಗಳನ್ನು ತೆರೆಯುವುದರ ಮೂಲಕ ಸಾವಿರಾರು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಶಾಶ್ವತವಾದ ದಾರಿದೀಪವಾಗಿದ್ದಾರೆ ಎಂದು

ಪರಮಪೂಜ್ಯ ಜಗದ್ಗುರುಗಳವರು ಮೇ 10ರಂದು ಚಾಮರಾಜನಗರ ಜಿಲ್ಲೆ ಕರಿನಂಜನಪುರದಲ್ಲಿ ರಾವ್‌ಬಹದ್ದೂರ್ ಧರ್ಮಪ್ರವರ್ತಕ ಶ್ರೀ ಗುಬ್ಬಿ ತೋಟದಪ್ಪನವರ ವೀರಶೈವ ಲಿಂಗಾಯತ ಮಹಿಳಾ ಉಚಿತ ವಿದ್ಯಾರ್ಥಿನಿಲಯ ನೂತನ ಕಟ್ಟಡದ ಭೂಮಿಪೂಜೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಹೆಣ್ಣುಮಕ್ಕಳು ಶಿಕ್ಷಣ ಪಡೆದರೆ ಇಡೀ ಕುಟುಂಬವೇ ಸಂಸ್ಕಾರ ಪಡೆಯುತ್ತದೆ. ಗುಬ್ಬಿ ತೋಟದಪ್ಪನವರು ತಮ್ಮ ದಾನಧರ್ಮಗಳಿಂದಾಗಿ ಮಹಾರಾಜರಿಂದ ರಾವ್ ಬಹದ್ದೂರ್ ಎಂದು ಗೌರವಿಸಲ್ಪಟ್ಟವರು. ಸಿದ್ದಗಂಗೆಯ ಡಾ. ಶಿವಕುಮಾರ ಮಹಾಸ್ವಾಮಿಗಳು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ಸಹ ಗುಬ್ಬಿ ತೋಟದಪ್ಪನವರ ವಿದ್ಯಾರ್ಥಿ ನಿಲಯದಲ್ಲಿ ಇದ್ದು ವಿದ್ಯಾಭ್ಯಾಸ ಮಾಡಿದವರು. ವೈರಾಗ್ಯಮೂರ್ತಿ ಅಕ್ಕಮಹಾದೇವಿಯವರ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಿ ತೋಟದಪ್ಪನವರ ವೀರಶೈವ ಲಿಂಗಾಯತ ಮಹಿಳಾ ಉಚಿತ ವಿದ್ಯಾರ್ಥಿನಿಲಯ ಸ್ಥಾಪಿಸುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್‌ರವರು 12ನೇ ಶತಮಾನದ ಶಿವಶರಣರು, ಮಹಾಪುರುಷರು ಕಂಡಂತಹ ಸಮಾನತೆಯ ಸಮಾಜದ ಕನಸು ನನಸಾಗಬೇಕಾದರೆ ಅದು ಶಿಕ್ಷಣದಿಂದ ಮಾತ್ರ ಸಾಧ್ಯ. ಸಮಾನತೆಯ ಕನಸು ನನಸಾಗಬೇಕಾದರೆ ಶಿಕ್ಷಣದ ಜೊತೆ ಎಲ್ಲರ ಸಹಕಾರವೂ ಮುಖ್ಯ. ಶಿವಶರಣರ ಹಾದಿಯಲ್ಲಿ ನಡೆದ ಗುಬ್ಬಿ ತೋಟದಪ್ಪನವರು ಸಮಾಜದ ಬಡಮಕ್ಕಳ ಶಿಕ್ಷಣಕ್ಕಾಗಿ ತನು, ಮನ, ಧನವನ್ನು ಅರ್ಪಿಸಿ ರಾಜ್ಯದಾದ್ಯಂತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ ದಾರಿದೀಪವಾಗಿದ್ದಾರೆ. ಪ್ರಕೃತಿಯ ಮಡಿಲಿನಲ್ಲಿರುವ ಈ ಸುಂದರ ಜಿಲ್ಲೆಯಲ್ಲಿ ಸುಸಜ್ಜಿತ ಮಹಿಳಾ ವಿದ್ಯಾರ್ಥಿನಿಲಯ ನಿರ್ಮಾಣವಾಗುತ್ತಿರುವುದು ಹೆಮ್ಮೆಯ ಸಂಗತಿ. ಇದಕ್ಕಾಗಿ ದಾನಿಗಳು ಮುಂದೆ ಬಂದಿರುವುದು ಶ್ರೇಷ್ಠ ಕೆಲಸ ಎಂದರು.

ಮರಿಯಾಲ ಮತ್ತು ಚಾಮರಾಜನಗರ ಮಠಗಳ ಶ್ರೀಗಳು, ಶಾಸಕರಾದ ಶ್ರೀ ಸಿ. ಪುಟ್ಟರಂಗಶೆಟ್ಟಿ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಕಾಡಾ ಅಧ್ಯಕ್ಷರಾದ ಶ್ರೀ ಪಿ. ಮರಿಸ್ವಾಮಿ, ಚಾಮುಲ್ ಅಧ್ಯಕ್ಷರಾದ ಶ್ರೀ ನಂಜುಂಡಸ್ವಾಮಿ, ಶ್ರೀ ಎಲ್. ರೇವಣಸಿದ್ಧಯ್ಯ, ಶ್ರೀ ಕಾಳನಹುಂಡಿ ಗುರುಸ್ವಾಮಿ, ಶ್ರೀ ನಿಶಾಂತ್, ಶ್ರೀ ಮಹಮದ್ ಅಸ್ಗರ್, ಶ್ರೀ ರಾಮದಾಸ್, ಶ್ರೀ ಮನೋಜ್ ಪಟೇಲ್, ಶ್ರೀ ಗೀತಾ ಹುಡೇದ, ನಿವೇಶನ ದಾನಿಗಳಾದ ಶ್ರೀಮತಿ ವಿಜಯಾಂಬ, ಶ್ರೀ ಎಚ್.ಜಿ. ಕುಮಾರಸ್ವಾಮಿ, ಶ್ರೀಮತಿ ರೂಪ, ಶ್ರೀ ಎಚ್.ಜಿ. ಮಹದೇವಪ್ರಸಾದ್ ಮೊದಲಾದವರು ಉಪಸ್ಥಿತರಿದ್ದರು.

**ಶ್ರೀ ಸುತ್ತೂರು ಮಠದಲ್ಲಿ ಮಂತ್ರಮಹರ್ಷಿಗಳ 140ನೇ ಜಯಂತಿ**

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಮೇ 15ರಂದು ಶ್ರೀಮಠದ 22ನೇ ಪೀಠಾಧಿಪತಿಗಳಾಗಿದ್ದ ಪರಮಪೂಜ್ಯ ಜಗದ್ಗುರು ಮಂತ್ರಮಹರ್ಷಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರ 140ನೇ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸರಳವಾಗಿ ಆಚರಿಸಲಾಯಿತು.

ಪೂಜ್ಯರ ಭಾವಚಿತ್ರಕ್ಕೆ ವಿಶೇಷ ಪೂಜೆ ನೆರವೇರಿಸಿ, ಪುಷ್ಪಾಂಜಲಿ ಸಲ್ಲಿಸಲಾಯಿತು. ಸಂಸದರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕರಾದ ಶ್ರೀ ಎಲ್. ನಾಗೇಂದ್ರರವರುಗಳು ಭಾಗವಹಿಸಿದ್ದರು. ಭಕ್ತಾದಿಗಳು, ಸಾರ್ವಜನಿಕರು ಶ್ರೀಮಠದ ಗುರುಕುಲದ ಸಾಧಕರು ಹಾಗೂ ಸೇವಾ ಸಿಬ್ಬಂದಿವರ್ಗದವರು ಪಾಲ್ಗೊಂಡಿದ್ದರು. ಗೋಕಾಕದ ಶ್ರೀಮತಿ ವಿದ್ಯಾ ಸೋಮಶೇಖರ್ ಮಗದುಂ ಹಾಗೂ ಜೆಎಸ್‌ಎಸ್ ಲಲಿತಕಲಾ  ತಂಡದವರು ಪ್ರಾರ್ಥನೆ ಮತ್ತು ವಚನಗಾಯನ ನಡೆಸಿದರು. ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

**ಉತ್ತಮ ಆರೋಗ್ಯವೇ ನೆಮ್ಮದಿ ಜೀವನದ ಸೂತ್ರ**

ಉತ್ತಮ ಆರೋಗ್ಯವೇ ನೆಮ್ಮದಿ ಜೀವನದ ಸೂತ್ರ ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 17ರಂದು ಕೆ.ಆರ್. ಪೇಟೆಯಲ್ಲಿ ನ್ಯೂ ಅಪೂರ್ವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಆಧುನಿಕ ಬದುಕಿನ ಒತ್ತಡಗಳಿಗೆ  ಸಿಲುಕಿ ಮನುಷ್ಯ ತನ್ನ ಆರೋಗ್ಯವನ್ನು ಕಳೆದುಕೊಳ್ಳುತ್ತಿದ್ದಾನೆ. ಮನುಷ್ಯ ಎಷ್ಟೇ ಸಾಧನೆ ಮಾಡಿದರೂ ಸಾಧನೆಯ ಫಲವನ್ನು ಅನುಭವಿಸಲು ಉತ್ತಮ ಆರೋಗ್ಯವಿರಬೇಕು. ಇದನ್ನು ಮನಗಂಡು ಹಿರಿಯರು ಆರೋಗ್ಯವೇ ಭಾಗ್ಯ ಎಂದಿದ್ದಾರೆ. ಈಗ ಬೆಳೆಯುವ ಭೂಮಿ ವಿಷಯುಕ್ತವಾಗಿ ತಿನ್ನುವ ಆಹಾರ ಬೆಳೆಯುವ ಮೊಳಕೆಯಲ್ಲಿಯೇ ವಿಷವಾಗುತ್ತಿದೆ. ರಾಸಾಯನಿಕ ಕೃಷಿ ಪದ್ಧತಿಯಿಂದ ಮತ್ತೆ ಪ್ರಾಚೀನ ನೈಸರ್ಗಿಕ ಕೃಷಿ ಪದ್ಧತಿ ಕಡೆ ಹೋಗಬೇಕಾದ ಅಗತ್ಯವನ್ನು ಕೃಷಿ ವಿಜ್ಞಾನಿಗಳು ಪ್ರತಿಪಾದಿಸುತ್ತಿದ್ದಾರೆ. ಆರೋಗ್ಯ ರಕ್ಷಣೆಗೆ ಆಸ್ಪತ್ರೆಗಳು ರಕ್ಷಾಕವಚದಂತೆ ಕೆಲಸ ಮಾಡುತ್ತಿವೆ ಎಂದು ಹೇಳಿದರು.

ಕೆಂಗೇರಿ ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಡಾ. ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮಿಗಳು ಕೆ.ಆರ್. ಪೇಟೆ ನನ್ನ ತಾಯಿಯ ಮನೆಯಿದ್ದಂತೆ. ಇಲ್ಲೊಂದು ಸರ್ವ ಸೌಲಭ್ಯಗಳ ಸುಸಜ್ಜಿತ ಆಸ್ಪತ್ರೆ ಆರಂಭವಾಗಬೇಕು ಎನ್ನುವ ಕನಸು ನನಗಿತ್ತು. ಅದು ಇಂದು ಈಡೇರಿದೆ. ಆಸ್ಪತ್ರೆಗಳು ರೋಗಿಗಳು ಮತ್ತು ಅವರ ಕುಟುಂಬದ ಭಾವನೆಗಳಿಗೆ ಸ್ಪಂದಿಸಬೇಕು. ಶ್ರೀಸಾಮಾನ್ಯನಿಗೆ ಬೇಕಾದ ಎಲ್ಲಾ ಬಗೆಯ ಸೌಲಭ್ಯಗಳು ಅವನ ಪರಿಸರದಲ್ಲಿಯೇ ದೊರಕುವಂತಾಗಬೇಕು ಎಂದರು.

ಜಿಲ್ಲಾಧಿಕಾರಿಗಳಾದ ಡಾ. ಕುಮಾರರವರು ಅನ್ನ, ಅಕ್ಷರ ಮತ್ತು ಆರೋಗ್ಯದ ಮೇಲೆ ಮನುಷ್ಯನ ಬದುಕು ನಿಂತಿದೆ. ಸನಾತನ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಕೆಲಸವನ್ನು ಸುತ್ತೂರು ಶ್ರೀಗಳು ಮಾಡುತ್ತಿದ್ದಾರೆ. ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಿದರೆ ಮಾತ್ರ ದೇಶದಲ್ಲಿ ಒಳ್ಳೆಯ ಪ್ರಜೆಗಳು ರೂಪುಗೊಳ್ಳಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಶ್ರೀ ಕೆ.ಬಿ. ಚಂದ್ರಶೇಖರ್, ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ, ಪುರಸಭೆ ಅಧ್ಯಕ್ಷರಾದ ಶ್ರೀಮತಿ ಪಂಕಜ ಪ್ರಕಾಶ್, ಶ್ರೀ ಆರ್.ಟಿ.ಒ. ಮಲ್ಲಿಕಾರ್ಜುನ್, ಡಾ. ಅಜಿತ್, ಡಾ. ಶಶಿಧರ್, ಶ್ರೀ ಡಿ. ಪ್ರೇಮ್‌ಕುಮಾರ್, ಶ್ರೀ ಕೆ.ಎಸ್. ಪ್ರಮೋದ್‌ಕುಮಾರ್, ಶ್ರೀ ನಾಟನಹಳ್ಳಿ ಗಂಗಾಧರ, ಶ್ರೀ ಬಸ್ತಿ ರಂಗಪ್ಪ, ಮೊದಲಾದವರು ಉಪಸ್ಥಿತರಿದ್ದರು.

**ಸ್ವಯಂಕಲಿಕೆಗೆ ಒತ್ತು ನೀಡಬೇಕು**

ಹಿಂದಿನಂತೆ ಇನ್ನೊಬ್ಬರನ್ನು ನೋಡಿ ತಿಳಿದುಕೊಳ್ಳುವುದಕ್ಕಿಂತ ಸ್ವಯಂಕಲಿಕೆಗೆ ಒತ್ತು ನೀಡುವ ಸ್ಪರ್ಧಾತ್ಮಕ ಕಾಲ ಇದು ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 19ರಂದು ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ನವೀಕೃತ ಅಣಕು ನ್ಯಾಯಾಲಯ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಇಂದು ವ್ಯಕ್ತಿಯೋರ್ವ ತಾನು ಕಲಿತದ್ದನ್ನು ಹೇಗೆ ಪ್ರಸ್ತುತಪಡಿಸುತ್ತಾನೆ ಎಂಬುದು ಮುಖ್ಯವಾಗುತ್ತದೆ. ಮೊದಲೆಲ್ಲಾ ಹೇಳಿಕೊಡುತ್ತಿದ್ದರು. ಆದರೆ, ಈಗ ಸ್ವತಃ ಕಲಿಯಬೇಕಾದ ದಿನಮಾನವಿದು. ವಕೀಲಿ ವೃತ್ತಿಯಲ್ಲಿ ಎಲ್ಲಿ ಓದಿದ್ದಾರೆ? ಯಾವ ಸಂಸ್ಥೆ? ಎಂಬುದಕ್ಕಿಂತ ಸಂವಹನ ಕಲೆ ಹೇಗಿದೆ? ಕೇಸ್ ಗೆಲ್ಲುವ ಬುದ್ಧಿವಂತಿಕೆ ಇದೆಯಾ? ವೃತ್ತಿ ಅನುಭವ ಇದೆಯೇ? ಹೇಗೆ ವಾದ ಮಂಡಿಸುತ್ತಾರೆ? ಎಂಬುದು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಅಣಕು ನ್ಯಾಯಾಲಯ ಸಹಕಾರಿಯಾಗಿರಲಿದೆ ಎಂದು ಹೇಳಿದರು.

ಕರ್ನಾಟಕ ಉಚ್ಚನ್ಯಾಯಾಲಯದ ಗೌರವಾನ್ವಿತ ನ್ಯಾಯಾಧೀಶರಾದ ಶ್ರೀ ಇ.ಎಸ್. ಇಂದಿರೇಶ್‌ರವರು ಸಂವಿಧಾನವನ್ನು ಪರಿಣಾಮಕಾರಿಯಾಗಿ ಕಾಪಾಡುವುದು ವಕೀಲರ ಕರ್ತವ್ಯ. ಕಾನೂನು ಅಧ್ಯಯನದ ನಂತರ ವಕೀಲ ವೃತ್ತಿಯನ್ನು ಗಂಭೀರವಾಗಿ ಪರಿಗಣಿಸಿ, ನ್ಯಾಯಾಲಯಕ್ಕೆ ಹಾಜರಾಗಿ ವ್ಯಾಜ್ಯಗಳ ಇತ್ಯರ್ಥ ಮಾಡಲು ಹೆಚ್ಚು ಒತ್ತು ನೀಡಬೇಕು. ಅಣಕು ನ್ಯಾಯಾಲಯವು ಕಾನೂನು ಅಧ್ಯಯನದ ಜೊತೆಗೆ ವೃತ್ತಿಯ ಅನುಭವವನ್ನು ನೀಡುತ್ತದೆ. ನ್ಯಾಯಾಂಗ ವ್ಯವಸ್ಥೆಯನ್ನು ಸರಿಯಾಗಿ ಅರ್ಥೈಸಿಕೊಂಡು, ನ್ಯಾಯಾಲಯದ ರೀತಿ–ನೀತಿಗಳನ್ನು ಅರ್ಥೈಸಿಕೊಳ್ಳಲು ಇದು ಸಹಕಾರಿಯಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಸಿ. ಬಸವರಾಜು, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಉಪಸ್ಥಿತರಿದ್ದರು. ಕಾಲೇಜಿನ ಕಾರ್ಯನಿರ್ವಾಹಕರಾದ ಪ್ರೊ. ಕೆ.ಎಸ್. ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಂಶುಪಾಲರಾದ ಡಾ. ಎನ್. ವಾಣಿಶ್ರೀ ವಂದಿಸಿದರು. ಶ್ರೀ, ಪ್ರೊ. ನಾಗೇಂದ್ರಮೂರ್ತಿ ಸ್ವಾಗತಿಸಿದರು. ಕು. ಕೆ. ಮೇಘಾ ಪ್ರಾರ್ಥಿಸಿದರು. ಡಾ. ಎ.ಟಿ. ಜಗದೀಶ್ ಕಾರ್ಯಕ್ರಮ ನಿರೂಪಿಸಿದರು.

**ಬಸವಣ್ಣ ದೇಶದ ಬಹುದೊಡ್ಡ ಸಂಪತ್ತು**

ಆಧ್ಯಾತ್ಮಿಕತೆ, ಸಮಾನತೆ, ಅಸ್ಪೃಶ್ಯತೆ ವಿಚಾರವಾಗಿ ಅನುಭವ ಮಂಟಪದ ಮೂಲಕ ಜನರಿಗೆ ಅರಿವು ಮೂಡಿಸಿದ ಬಸವಣ್ಣನವರು ದೇಶದ ಬಹುದೊಡ್ಡ ಸಂಪತ್ತು ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 23ರಂದು ಪಾಂಡವಪುರದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಘಟಕದಿಂದ ಆಯೋಜಸಿದ್ದ ಶ್ರೀ ಜಗಜ್ಯೋತಿ ಬಸವೇಶ್ವರರವರ ಜಯಂತ್ಯುತ್ಸವದ ದಿವ್ಯಸಾನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಬಸವಣ್ಣನವರು 12ನೇ ಶತಮಾನದಲ್ಲಿ ಜನರಿಗೆ ಅರಿವು ಮೂಡಿಸುವ ಮೂಲಕ ಸಮಾಜದಲ್ಲಿ ತಂದ ಸುಧಾರಣೆಯಿಂದಾಗಿ ಒಂಬತ್ತು ಶತಮಾನಗಳು ಕಳೆದರೂ ಅವರನ್ನು ಸ್ಮರಿಸುತ್ತಿದ್ದೇವೆ ಎಂದರೆ ಅವರ ದಿವ್ಯಶಕ್ತಿ ಎಷ್ಟಿರಬಹುದು ಎಂಬುದನ್ನು ಅರ್ಥೈಸಿಕೊಳ್ಳಬೇಕು ಎಂದು ಹೇಳಿದರು.

ಚಂದ್ರವನ ಆಶ್ರಮ, ಕುಂದೂರು ಮಠ ಮತ್ತು ಸಾಲೂರು ಮಠಗಳ ಶ್ರೀಗಳು, ಮಾಜಿ ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜು, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ವಿಜಯಾನಂದ ಕಾಶಪ್ಪನವರ್, ಶಾಸಕರಾದ ಶ್ರೀ ದರ್ಶನ್ ಪುಟ್ಟಣ್ಣಯ್ಯ, ಶ್ರೀ ಎಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಎಂ. ಶಿವಕುಮಾರ್, ಶ್ರೀ ಮೂಡ್ಲುಪುರ ನಂದೀಶ್ ಮೊದಲಾದವರು ಉಪಸ್ಥಿತರಿದ್ದರು.

**ಬಸವಣ್ಣನವರ ಸಂದೇಶಗಳು ಸಾರ್ವತ್ರಿಕವಾದವು**

ಬಸವಣ್ಣನವರು ಜಗತ್ತಿಗೆ ಸಾರ್ವತ್ರಿಕ ಸಂದೇಶಗಳನ್ನು ನೀಡಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 24ರಂದು ಬಸವ ಬಳಗಗಳ ಒಕ್ಕೂಟ ಹಾಗೂ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆಯ ವತಿಯಿಂದ ಮೈಸೂರು ಕಲಾಮಂದಿರದಲ್ಲಿ ಆಯೋಜಿಸಿದ್ದ ಬಸವ ಜಯಂತಿಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಬಸವಣ್ಣನವರು ಶಾಶ್ವತ ಸತ್ಯದ ಸೂತ್ರಗಳನ್ನು ಕೊಡುಗೆಯಾಗಿ ನೀಡಿದ ವಿಭೂತಿಪುರುಷರು. ಅವರ ಅಪೂರ್ವ ತತ್ತ್ವಾದರ್ಶಗಳನ್ನು ಸಮಾಜ ನಿರಂತರವಾಗಿ ಪಾಲಿಸಬೇಕು. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ

ಸುಖವಾಗಿ ಬದುಕುಬಹುದು. ಜಗತ್ತಿನ ಎಲ್ಲ ಸಂತರು–ಶರಣರುಗಳ ಸಂದೇಶ ಒಂದೆಯಾಗಿದೆ. ಶಾಂತಿ, ಸಹಬಾಳ್ವೆ, ಪರಸ್ಪರ ವಿಶ್ವಾಸಗಳಿಂದ ಜೀವನ ನಡೆಸಬೇಕು. ಯಾವುದೇ ಧರ್ಮ ದ್ವೇಷವನ್ನು ಬಿತ್ತುವ ಸಂದೇಶವನ್ನು ಜಗತ್ತಿಗೆ ನೀಡಿಲ್ಲ. ಆದರೂ ಜಗತ್ತಿನಲ್ಲಿ ರಾಗ, ದ್ವೇಷ, ವೈಷಮ್ಯಗಳಿಂದ ಕಲುಷಿತವಾದ ವಾತವಾವರಣ ನಿರ್ಮಾಣವಾಗಿದೆ. ಧಾರ್ಮಿಕ ಮತ್ತು ಆಧ್ಯಾತ್ಮಿಕತೆಯಲ್ಲಿ ತೊಡಗುವುದೇ ಇದಕ್ಕೆ ಪರಿಹಾರವಾಗಿದೆ. ಬಸವಣ್ಣನವರು ಧಾರ್ಮಿಕ ತಳಹದಿಯ ಮೇಲೆ ಶಾಶ್ವತವಾದ ಸಮಾಜ ಸುಧಾರಣೆಯನ್ನು ಮಾಡಿದರು. ಕೈಂಕರ್ಯ ಭಾವವಿರುವಲ್ಲಿ ಹೃದಯ ವೈಶಾಲ್ಯತೆಯಿರುತ್ತದೆ ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಬಸವಣ್ಣ ಕ್ರಾಂತಿಪುರುಷ ಮಾತ್ರವಲ್ಲ, ಖ್ಯಾತ ಆರ್ಥಿಕತಜ್ಞರೂ ಆಗಿದ್ದರು. ಬಸವಣ್ಣನವರು ಪ್ರತಿಪಾದಿಸಿದ ಕಾಯಕ, ದಾಸೋಹವನ್ನು ಎಲ್ಲರೂ ಪಾಲಿಸಬೇಕು. ಸಮಾಜದಲ್ಲಿ ಬಹುಸಂಖ್ಯಾತ ಜನ ಅಕ್ಷರದಿಂದ ವಂಚಿತರಾಗಿದ್ದರು. ಬಸವಣ್ಣನವರು ಜನರಲ್ಲಿ ಅಕ್ಷರದ ಅರಿವು ಮೂಡಿಸಿದರು. ಜಾತಿ ವ್ಯವಸ್ಥೆ, ವರ್ಗ ವ್ಯವಸ್ಥೆ ವಿರುದ್ಧ ಹಾಗೂ ಸಮಾಜದಲ್ಲಿನ ಅಸಮಾನತೆ ವಿರುದ್ಧ ಹೋರಾಟ ಮಾಡಿದರು. ಅವರು ಎಲ್ಲರೂ ಮನುಷ್ಯರಾಗಿ ಬಾಳಬೇಕೆಂದು ಪ್ರತಿಪಾದಿಸಿದ ಕ್ರಾಂತಿಪುರುಷರು. ಬಸವಾದಿ ಶರಣರು ನುಡಿದಂತೆ ನಡೆದರು. ನುಡಿದಂತೆ ನಡೆಯುವುದು ಬಹಳ ಮುಖ್ಯ. ಅವರು ಪ್ರಾಮಾಣಿಕವಾಗಿ ಬದುಕಿದರು. ಜಾತಿರಹಿತ ವರ್ಗರಹಿತ ಸಮಾನತೆಯಿಂದ ಕೂಡಿದ ಸಮಾಜಕ್ಕಾಗಿ ಶ್ರಮಿಸಿದರು. ಶರಣರ ಅನುಭಾವದ ಮಾತುಗಳೇ ವಚನಗಳಾಗಿವೆ. ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಕನ್ನಡ ಸಾಹಿತ್ಯದ ಮೈಲಿಗಲ್ಲು ಎಂದರು.

ಸಚಿವರುಗಳಾದ ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ರಹೀಂ ಖಾನ್, ಶಾಸಕರಾದ ಶ್ರೀ ತನ್ವೀರ್ ಸೇಠ್, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಹೆಚ್.ಎಂ. ಗಣೇಶಪ್ರಸಾದ್, ಶ್ರೀ ದರ್ಶನ್ ಧ್ರುವನಾರಾಯಣ, ಶ್ರೀ ಟಿ.ಎಸ್. ಶ್ರೀವತ್ಸ. ಶ್ರೀ ಡಿ. ರವಿಶಂಕರ್, ಶ್ರೀ ಕೆ. ಹರೀಶ್‌ಗೌಡ, ಡಾ. ಡಿ. ತಿಮ್ಮಯ್ಯ, ಶ್ರೀ ಎ.ಎಸ್. ಪೊನ್ನಣ್ಣನವರುಗಳು ಉಪಸ್ಥಿತರಿದ್ದರು. ಮಹಾಸಭಾ ಜಿಲ್ಲಾಧ್ಯಕ್ಷ ಶ್ರೀ ಹಿನಕಲ್ ಬಸವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ನಾಗರಾಜು ಬ್ಯಾತಹಳ್ಳಿ ಸ್ವಾಗತಿಸಿದರು.

**ಧರ್ಮ ಪಾಲನೆಯಿಂದಲೇ ಶಾಂತಿ**

ಎಲ್ಲರೂ ಧರ್ಮವನ್ನು ಪಾಲಿಸುವ ಕೆಲಸ ಮಾಡಿದರೆ ಇಡೀ ದೇಶದಲ್ಲಿ ಶಾಂತಿ ನೆಲೆಸಲಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 26ರಂದು ಮೈಸೂರು ಶ್ರೀ ಅವಧೂತ ದತ್ತಪೀಠದಲ್ಲಿ ನಡೆದ ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 26ನೇ ಬ್ರಹ್ಮೋತ್ಸವ, ನಾದಮಂಟಪದ 27ನೇ ವಾರ್ಷಿಕೋತ್ಸವ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ

ಸ್ವಾಮಿಗಳವರ 83ನೇ ಜನ್ಮದಿನೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ದೇಶವನ್ನು ರಕ್ಷಿಸಲು ಹೋರಾಟ ಮಾಡುತ್ತಿರುವ ಯೋಧರನ್ನು ಗೌರವಿಸಬೇಕು. ಪ್ರಾಣದ ಹಂಗು ತೊರೆದು ದೇಶ ಕಾಯುತ್ತಿರುವವರಿಗಾಗಿ ಎಲ್ಲರೂ ಪ್ರಾರ್ಥಿಸಬೇಕು. ಅವಧೂತ ದತ್ತಪೀಠ ಮತ್ತು ಗಣಪತಿ ಸಚ್ಚಿದಾನಂದ ಆಶ್ರಮ ಆಸುಪಾಸಿನಲ್ಲೇ ಇವೆ. ಇಂತಹ ಅತ್ಯುತ್ತಮ ತಾಣವನ್ನು ಶ್ರೀಗಳು ಕೊಡುಗೆಯಾಗಿ ಕೊಟ್ಟಿರುವುದು ಪುಣ್ಯದ ಕಾರ್ಯ. ಪೆಹಲ್ಗಾಂನಲ್ಲಿ ದಾಳಿ ನಡೆಸಿರುವುದನ್ನು ತೀವ್ರವಾಗಿ ಖಂಡಿಸಬೇಕು. ಅಂದಿನ ದಾಳಿಯಿಂದ ನಮ್ಮ ದೇಶದ ಅದೆಷ್ಟೋ ಕುಟುಂಬಗಳು ನೋವು ಅನುಭವಿಸುತ್ತಿವೆ. ಇತ್ತೀಚಿಗೆ ಮೈಸೂರಿನಲ್ಲಿ ಹಮ್ಮಿಕೊಂಡಿದ್ದ ತಿರಂಗಾ ಯಾತ್ರೆಯಲ್ಲಿ ಕಾಲು ನೋವಿನಲ್ಲೂ ಸ್ವತಃ ಗಣಪತಿ ಸಚ್ಚಿದಾನಂದ ಶ್ರೀಗಳು ಭಾಗವಹಿಸಿದ್ದು ಅವರ ದೇಶಪ್ರೇಮಕ್ಕೆ ಸಾಕ್ಷಿಯಾಗಿದೆ. ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಮತ್ತು ಸುತ್ತೂರು ಶ್ರೀಮಠಕ್ಕೂ ಅವಿನಾಭಾವ ಸಂಬಂಧವಿದೆ. ಈ ಎರಡೂ ಆಶ್ರಮಗಳು ಮಧುರ ಬಾಂಧವ್ಯದ ಸಂಕೇತವಾಗಿವೆ. ಶ್ರೀಗಳು ಆರೋಗ್ಯವಂತರಾಗಿ ಶತಮಾನದ ಕಡೆಗೆ ಮುನ್ನಡೆಯಲಿ. ಭಾರತಕ್ಕೆ ಭವ್ಯ ಪರಂಪರೆ ಇದೆ. ನದಿಗಳು ನಿರಂತರವಾಗಿ ಹರಿಯುತ್ತವೆ. ಅದೇ ರೀತಿ ಧಾರ್ಮಿಕ ಪರಂಪರೆಯು ನಿರಂತರವಾಗಿ ಹರಿಯುತ್ತಲೇ ಇರುತ್ತದೆ. ಅಂತಹ ಧಾರ್ಮಿಕ ಪರಂಪರೆಯನ್ನು ಗಣಪತಿ ಸಚ್ಚಿದಾನಂದ ಶ್ರೀಗಳು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಜಗತ್ತಿನಾದ್ಯಂತ ಗಣಪತಿ ಸಚ್ಚಿದಾನಂದ ಆಶ್ರಮದ ಶಾಖೆಗಳು ಇವೆ. ಅವುಗಳ ಮೂಲಕ ಆಯಾ ಭಾಗದ ಜನರಿಗೆ ಶ್ರೀಗಳು ಅನುಗ್ರಹಿಸುತ್ತಾ ಬಂದಿದ್ದಾರೆ. ಜಗತ್ತಿನಲ್ಲಿ ಶಾಂತಿ, ನೆಮ್ಮದಿ, ಪ್ರೀತಿ ಉಂಟು ಮಾಡಬೇಕು ಎಂಬ ಮಹಾದಾಸೆಯನ್ನು ಶ್ರೀಗಳು ಇಟ್ಟುಕೊಂಡಿದ್ದಾರೆ ಎಂದು ಹೇಳಿದರು.

ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳವರನ್ನು ಪೂಜ್ಯರು ಸನ್ಮಾನಿಸಿ ಗೌರವಿಸಿದರು. ಶ್ರೀ ದತ್ತ ವಿಜಯಾನಂದ ತೀರ್ಥ ಮಹಾಸ್ವಾಮಿಗಳು ಉಪಸ್ಥಿತರಿದ್ದರು.

**ಹೊಂದಾಣಿಕೆಯ ಜೀವನ ಮುಖ್ಯ**

ಜೀವನದಲ್ಲಿ ಹೊಂದಾಣಿಕೆ ಅತಿ ಮುಖ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಬಿಳಿಗಿರಿರಂಗನ ಬೆಟ್ಟದಲ್ಲಿ ಮೇ 28ರಂದು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜೀವನದಲ್ಲಿ ಕೇವಲ ತಪ್ಪುಗಳನ್ನು ಗುರುತಿಸುತ್ತಾ ಹೋದರೆ ಅದು ಮನಸ್ತಾಪಕ್ಕೆ ಕಾರಣವಾಗುತ್ತದೆ. ಒಳ್ಳೆಯ ಅಂಶಗಳನ್ನು ಗುರುತಿಸುತ್ತಾ ಪ್ರೋತ್ಸಾಹಿಸಿದರೆ ಬದುಕು ಸ್ವರ್ಗದಂತಿರುತ್ತದೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿರಬೇಕಾದರೆ

ಸಮಚಿತ್ತದಿಂದ ಇರಬೇಕು. ಪ್ರಕೃತಿಯಲ್ಲಿ ಹಾಗೂ ಎಲ್ಲರಲ್ಲೂ ಭಗವಂತನನ್ನು ಕಾಣಬೇಕು. ಜೀವನದಲ್ಲಿ ಅತಿ ಆಸೆಯೇ ದುಃಖಕ್ಕೆ ಕಾರಣವಾಗುತ್ತದೆ. ಕಾಯಕದೊಂದಿಗೆ ಭಗವಂತನ ಸ್ಮರಣೆ ಮಾಡುತ್ತಾ ನೆಮ್ಮದಿಯಿಂದ ಜೀವನ ಸಾಗಿಸಬೇಕು. ಐವತ್ತು ವರ್ಷಗಳ ಹಿಂದೆ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮಠಾಧಿಪತಿಗಳಿಗಾಗಿಯೇ ಶಿಬಿರವನ್ನು ಪ್ರಾರಂಭಿಸಿದರು. ಶಿಬಿರಗಳು ಮನಸ್ಸಿನ ತೊಳಲಾಟಗಳನ್ನು ನಿಯಂತ್ರಿಸಿ ನೆಮ್ಮದಿಯನ್ನು ನೀಡುತ್ತವೆ ಎಂದು ಹೇಳಿದರು.

ಮೈಸೂರು ದಕ್ಷಿಣ ವಲಯದ ಡಿಐಜಿಪಿಯವರಾದ ಡಾ. ಎಂ.ಬಿ. ಬೋರಲಿಂಗಯ್ಯನವರು ಸುತ್ತೂರು ಶ್ರೀಮಠವು ಮಾನವ ಕಲ್ಯಾಣಕ್ಕಾಗಿ ಮಾಡುತ್ತಿರುವ ಸಾಮಾಜಿಕ ಮತ್ತು ಧಾರ್ಮಿಕ ಸೇವೆ ಅನುಪಮವಾದುದು. ಶಿಬಿರಗಳು ಬದುಕಿಗೆ ನವಚೈತನ್ಯವನ್ನು ನೀಡುತ್ತವೆ. ಅಸ್ತವ್ಯಸ್ತಗೊಂಡಿರುವ ಆಹಾರ ಪದ್ಧತಿ ಮತ್ತು ಪರಿಸರವನ್ನು ಪುನರುಜ್ಜೀವನಗೊಳಿಸಬೇಕಿದೆ. ಜೀವನದಲ್ಲಿ ಕಷ್ಟ–ನಷ್ಟ ಮತ್ತು ಕಲಹಗಳನ್ನು ಧೈರ್ಯದಿಂದ ಎದುರಿಸಬೇಕು. ಶಿಬಿರಾರ್ಥಿಗಳು ತಾವು ಇಲ್ಲಿ ಪಡೆದ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಟಿ. ಹೀರಾಲಾಲ್‌ರವರು ಮನುಷ್ಯನ ದುರಾಸೆಗಳಿಂದ ಜೀವನ ನಾಶವಾಗುತ್ತಿದೆ. ದುರಾಸೆಯನ್ನು ಬಿಟ್ಟು ಸಮಾಜಮುಖಿಯಾಗಿ ಕಾರ್ಯ ಮಾಡಬೇಕು. ಇಂದು ಪರಿಸರದ ಉಳಿವು ಅತಿ ಅವಶ್ಯಕವಾಗಿದೆ. ಹಬ್ಬ ಹರಿದಿನಗಳಲ್ಲಿ ಇತರ ಆಚರಣೆಗಳ ಜೊತೆಗೆ ಗಿಡಗಳನ್ನು ನೆಟ್ಟು ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದರು.

ಪ್ರೊ. ಎಂ. ಕೃಷ್ಣೇಗೌಡರು ಹಾಸ್ಯ ಎನ್ನುವುದು ಮಾನವನ ಜೀವನದ ಒಂದು ಅಮೂಲ್ಯವಾದ ಭಾವನೆ. ಅದಕ್ಕೆ ಮನುಷ್ಯನ ನೋವು, ದುಗುಡಗಳನ್ನು ಮರೆಸುವ ಶಕ್ತಿಯಿರುತ್ತದೆ. ಆಧುನಿಕ ಜೀವನದಲ್ಲಿ ಮನುಷ್ಯರು ಮಾನಸಿಕ ಒತ್ತಡದಲ್ಲಿ ಬದುಕುತ್ತಿದ್ದಾರೆ. ಇಂತಹ ಒತ್ತಡಕ್ಕೆ ಹಾಸ್ಯವೇ ಪರಮೌಷಧಿ. ಬಾಹ್ಯ ಸಮೃದ್ಧಿಗಿಂತ ಆಂತರಿಕ ಸಮೃದ್ಧಿ ಬಹಳ ಮುಖ್ಯ. ಹಾಸ್ಯವು ಸ್ನೇಹವನ್ನು ಹೆಚ್ಚಿಸುತ್ತದೆ. ಮಾನಸಿಕ ಮತ್ತು ದೈಹಿಕ ಆರೋಗ್ಯ ವೃದ್ಧಿಸುವುದರೊಂದಿಗೆ ಜೀವನವನ್ನು ಸುಂದರವಾಗಿಸುತ್ತದೆ ಎಂದು ತಿಳಿಸಿದರು.

ಶಿಬಿರಾರ್ಥಿಗಳಾದ ಡಾ. ಎಂ.ಸಿ. ಶಂಕರಪ್ಪ, ಶ್ರೀಮತಿ ಭವಾನಿ ನಟರಾಜ, ಶ್ರೀಮತಿ ಜಯಶ್ರೀ ಗೊಳಸಂಗಿ, ಶ್ರೀಮತಿ ಶಕುಂತಲ ರೆಡ್ಡಿ, ಶ್ರೀಮತಿ ರಾಜೇಶ್ವರಿ ಸ್ವಾಮಿ, ಶ್ರೀ ಬಿ.ಕೆ. ಗೊಟ್ಯಾಳ, ಶ್ರೀ ಎಂ.ಬಿ. ಸದಾಶಿವಯ್ಯನವರುಗಳು ಅನಿಸಿಕೆಗಳನ್ನು ಹಂಚಿಕೊಂಡರು. ಎಎಸ್‌ಪಿ ಶ್ರೀ ಎಂ.ಎನ್. ಶ್ರೀಧರ್, ಡಿವೈಎಸ್‌ಪಿ ಶ್ರೀ ಎಂ. ಧರ್ಮೇಂದ್ರ, ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಆರ್. ಶ್ರೀಕಾಂತ್ ಮೊದಲಾದರವರು, ವಿದ್ಯಾಪೀಠದ ಅಧಿಕಾರಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು. ಶ್ರೀ ಎಸ್. ಪುಟ್ಟರಾಜಪ್ಪ ಸ್ವಾಗತಿಸಿದರು.

ಶ್ರೀ ಜಿ. ಮಲ್ಲೇಶ್ ವರದಿ ಮಂಡಿಸಿದರು. ಶ್ರೀ ಎಂ.ಎಸ್. ಶರಣ್ ವಂದಿಸಿದರು. ಶ್ರೀಮತಿ ಶಶಿಕಲಾ ರುದ್ರಪ್ರಸಾದ್ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಎಚ್.ಎಂ. ನಾಗಭೂಷಣ ಕಾರ್ಯಕ್ರಮ ನಿರೂಪಿಸಿದರು.

**ಜೀವನದಲ್ಲಿ ಸಾತ್ವಿಕವಾದ ಕನಸುಗಳಿರಬೇಕು**

ಜೀವನದಲ್ಲಿ ಶ್ರದ್ಧೆ, ಪ್ರಾಮಾಣಿಕತೆ, ಸದಾಚಾರದಂತಹ ಸಾತ್ವಿಕ ಕನಸುಗಳನ್ನು ಕಾಣಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 29ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಶ್ರೀ ನಿಜಗುಣ ಶಿವಯೋಗಿಗಳವರ 'ಅನುಭವಸಾರ' ಕೃತಿಯ ಬಗ್ಗೆ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಏರ್ಪಡಿಸಿರುವ ಅಧ್ಯಯನ ಶಿಬಿರದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ನಿಜಗುಣ ಶಿವಯೋಗಿಗಳು ಶ್ರೇಷ್ಠ ದಾರ್ಶನಿಕರು ಮತ್ತು ಕವಿಹೃದಯವುಳ್ಳವರಾಗಿದ್ದರು. ಯೋಗ ಸಾಧನೆ ಮಾಡುತ್ತಲೇ ಅವರ ಅನುಭವಗಳನ್ನು ಕವಿತೆಗಳ ರೂಪದಲ್ಲಿ ಹಾಡುತ್ತಿದ್ದರು. ಅವರಿಗೆ ಸಂಗೀತದಲ್ಲಿಯೂ ಹೆಚ್ಚಿನ ಪಾಂಡಿತ್ಯವಿತ್ತು. ಆಧ್ಯಾತ್ಮದಂತಹ ಕಠಿಣ ವಿಷಯಗಳ ಬಗ್ಗೆ ಸರಳ ಮತ್ತು ಸುಂದರವಾಗಿ ಕನ್ನಡದಲ್ಲಿ ಆರು ಮಹತ್ವದ ಕೃತಿಗಳನ್ನು ರಚಿಸಿದರು. ಅವುಗಳನ್ನೇ ಷಟ್‌ಶಾಸ್ತ್ರಗಳು ಎಂದು ಕರೆಯಲಾಗುತ್ತದೆ. ಅವರ ಅನುಭವಸಾರ ಗ್ರಂಥವು ಜೀವ, ಜಗತ್ತು ಮತ್ತು ಭಗವಂತನ ಸ್ವರೂಪವನ್ನು ತಿಳಿಸುವ ಕೃತಿಯಾಗಿದೆ. ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಕಲ್ಪದ ಫಲವಾಗಿ ಆಧ್ಯಾತ್ಮಿಕ ಶಿಬಿರಗಳು 50 ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬಂದಿವೆ ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿಗಳಾದ ಶ್ರೀ ಎಂ. ಮದನ್‌ಗೋಪಾಲ್‌ರವರು ವಿಶ್ವದ ಪ್ರತಿಯೊಂದು ವಸ್ತುವು ಪರಮಾತ್ಮನ ಸೃಷ್ಟಿಯಾಗಿದೆ. ನಾವು ಮಾಡುವ ಪ್ರತಿಯೊಂದು ಕಾಯಕದಲ್ಲಿ ಅವನ ದೃಷ್ಟಿ ಇರುತ್ತದೆ. ನಾನು ಎಂಬ ಭಾವನೆ ಇಲ್ಲದೇ ಇದ್ದರೆ ಜೀವನ ಸಂತೋಷವಾಗಿರುತ್ತದೆ. 63 ಪುರಾತನ ಶಿವಭಕ್ತರ ಜೀವನವನ್ನು ಅಧ್ಯಯನ ಮಾಡಿದರೆ ಜೀವನ ಸಾರ್ಥಕವಾಗುತ್ತದೆ. ಭಗವಂತನಿಗೆ ಸಂಪೂರ್ಣ ಶರಣಾದರೆ ನಾನು ಎಂಬ ಭಾವ ಹೋಗುತ್ತದೆ. ಶಿವತತ್ವ ಹಾಗೂ ಅದ್ವೈತದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ನಿಜಗುಣ ಶಿವಯೋಗಿಗಳ ಷಟ್‌ಶಾಸ್ತ್ರವು ಕನ್ನಡದ ಶ್ರೇಷ್ಠ ಸಾಹಿತ್ಯವಾಗಿದೆ ಎಂದು ತಿಳಿಸಿದರು.

ಮಾಜಿ ಶಾಸಕರಾದ ಶ್ರೀ ಮಹಿಮ ಪಟೇಲ್‌ರವರು ನಮ್ಮ ಆಲೋಚನಾ ದೃಷ್ಟಿಯಲ್ಲಿ ಬದಲಾವಣೆಗಳಾಗಬೇಕು. ಭವಿಷ್ಯದ ಚಿಂತನೆ ಮಾಡುತ್ತಾ ನಮ್ಮೊಳಗಿರುವ ಸಂತೋಷವನ್ನು

ಹುಡುಕಬೇಕು. ಶಾಂತಿ, ತಾಳ್ಮೆ, ಪ್ರಾಮಾಣಿಕತೆಯ ಬಗ್ಗೆ ಜನರಲ್ಲಿ ಸಾಮೂಹಿಕ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಜೀವನದಲ್ಲಿ ಕನಸು ಕಾಣಬೇಕು ಹಾಗೂ ಅದನ್ನು ನನಸಾಗಿಸುವತ್ತ ಮಗ್ನರಾಗಿರಬೇಕು. ಭವಿಷ್ಯದಲ್ಲಿ ಶಿಕ್ಷಣ, ಪರಿಸರ ಹಾಗೂ ಆಡಳಿತ ವ್ಯವಸ್ಥೆ ಹೇಗಿರಬೇಕು ಎನ್ನುವುದರ ಬಗ್ಗೆ ಒಳ್ಳೆಯ ಕನಸುಗಳನ್ನು ಕಾಣಬೇಕು ಎಂದು ಹೇಳಿದರು.

ವಿಶ್ರಾಂತ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರು ಸಮಾಜದಲ್ಲಿ ಇಂದು ಮೌಲ್ಯಗಳು ಅವನತಿಯ ಹಾದಿಯಲ್ಲಿವೆ. ಆಧ್ಯಾತ್ಮಿಕ ಶಿಕ್ಷಣದಿಂದ ಅವುಗಳು ಉಳಿಯುವಂತೆ ಮಾಡಬೇಕು. ಇಂದ್ರಿಯಗಳ ನಿಗ್ರಹದಿಂದ ಆಂತರಿಕ ಶುದ್ಧೀಕರಣ ಸಾಧ್ಯ. ಗುರುವಿನ ಅನುಗ್ರಹದಿಂದ ತನ್ನ ತಾನರಿತು ಬದುಕಬೇಕು. ಅದಕ್ಕೆ ಇಂತಹ ಅಧ್ಯಯನ ಶಿಬಿರಗಳು ಪೂರಕವಾಗಿವೆ ಎಂದು ತಿಳಿಸಿದರು.

ವಿಷಯ ಮಂಡನೆ ಮಾಡಿದ ಘೋಡಗೇರಿ ಶ್ರೀ ಶಿವಾನಂದ ಮಠದ ಶ್ರೀ ಮಲ್ಲಯ್ಯ ಸ್ವಾಮಿಗಳು ಅನುಭವಸಾರವು ಒಂದು ತ್ರಿಪದಿ ಕೃತಿಯಾಗಿದ್ದು, ಜಗತ್ತಿನ ನಿರ್ಮಾಣಕ್ಕೆ ಉತ್ತರವಾಗಿದೆ. ಕವಿ ಹಾಗೂ ಶಾಸ್ತ್ರಗಾರರಾದ ನಿಜಗುಣರು ಶಿವಕಾರುಣ್ಯ, ಜೀವಸಂಬೋಧನೆ, ನೀತಿ ಕ್ರಿಯಾಚಯಾಕ್ತ ಯೋಗ, ಪ್ರತಿಪಾದನ ಹಾಗೂ ಜ್ಞಾನ ಪ್ರತಪಾದನಗಳನ್ನು ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ. ಗುರುವಿನ ಕೃಪೆಯಾದರೆ ಸುಖದ ಸಾಗರ ದೊರೆಯುತ್ತದೆ. ಭಗವಂತನೊಂದಿಗೆ ಗುರುವಿನ ಸ್ಮರಣೆಯು ಬಹಳ ಮುಖ್ಯ. ತ್ರಿಕಾಲದಲ್ಲಿಯೂ ನಿಜಭಕ್ತಿಯಿಂದ ಆ ಭಗವಂತನನ್ನು ಭಜಿಸಬೇಕು ಎಂದು ತಿಳಿಸಿದರು.

ಶಿಬಿರದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳು ಹಾಗೂ ಮಹಾರಾಷ್ಟ್ರದ ಸೊಲ್ಲಾಪುರ, ತೆಲಂಗಾಣದ ಹೈದರಾಬಾದ್‌ನಿಂದ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಸೇರಿದಂತೆ ಸುಮಾರು 113ಕ್ಕೂ ಹೆಚ್ಚು ಸಾಧಕರು ಪಾಲ್ಗೊಂಡಿದ್ದಾರೆ. ಬೆಳಗ್ಗೆ ಶಿಬಿರಾರ್ಥಿಗಳು ಯೋಗ ಮತ್ತು ಧ್ಯಾನದ ಅಭ್ಯಾಸ ಮಾಡಿದರು.

ಸಂಜೆ ಶ್ರೀ ಕೋಗಲಿ ಕೊಟ್ರೇಶ್ ಕೂಡ್ಲಗಿಯವರು ಹಾಸ್ಯದ ಜೊತೆಗೆ ಜನಪ್ರಿಯ ಕನ್ನಡ ಹಾಡುಗಳನ್ನು ಹಾಡಿದರು. ಕಾರ್ಯಕ್ರಮದಲ್ಲಿ ಮೈಸೂರಿನ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಹೆಚ್.ಎಂ. ನಾಗರಾಜು ಉಪಸ್ಥಿತರಿದ್ದರು. ಮಾತ್ರೋಶ್ರೀ ಪಾರ್ವತಮ್ಮ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಜಿ.ಎಲ್. ತ್ರಿಪುರಾಂತಕರವರು ಸ್ವಾಗತಿಸಿದರು. ಶ್ರೀ ಕೆ.ಪಿ. ಬಸವರಾಜುರವರು ತ್ರಿಪದಿ ವಾಚಿಸಿ, ವಂದಿಸಿದರು. ಶ್ರೀ ಮಹದೇವಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

**ರೈತರು ರಾಸಾಯನಿಕ ಮುಕ್ತ ಕೃಷಿಯತ್ತ ಗಮನ ಹರಿಸಬೇಕು**

ರೈತರು ರಾಸಾಯನಿಕ ಮುಕ್ತ ಕೃಷಿಯತ್ತ ಹೆಚ್ಚು ಗಮನಹರಿಸಬೇಕು ಎಂದು ಶ್ರೀ

ಸುತ್ತೂರು ಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮೇ 29ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಿಂದ ಆಯೋಜಿಸಿದ್ದ ವಿಕಸಿತ ಕೃಷಿ ಸಂಕಲ್ಪ ಅಭಿಯಾನದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ವಿಪರೀತ ರಾಸಾಯನಿಕಗಳ ಬಳಕೆಯಿಂದ ಇಂದು ಕೃಷಿಭೂಮಿ ಕಲುಷಿತಗೊಳ್ಳುತ್ತಿದೆ. ಇದರಿಂದ ಆಹಾರವೂ ವಿಷಪೂರಿತವಾಗುತ್ತಿದೆ. ರೈತರು ಸಾವಯವ ಕೃಷಿಯತ್ತ ಹೆಚ್ಚು ಗಮನ ಹರಿಸಬೇಕು. ಮನುಷ್ಯ ಆಗಾಗ ಆರೋಗ್ಯ ತಪಾಸಣೆಗೆ ಒಳಗಾಗುವಂತೆ ಕಾಲಕಾಲಕ್ಕೆ ಕೃಷಿಭೂಮಿಯ ಮಣ್ಣನ್ನು ಪರೀಕ್ಷೆ ಮಾಡಿಸಬೇಕು. ಪ್ರಾಚೀನ ಕೃಷಿ ಪದ್ಧತಿಯೊಂದಿಗೆ ಆಧುನಿಕ ತಂತ್ರಜ್ಞಾನವನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳಬೇಕು. ಕೃಷಿ ವಿಜ್ಞಾನ ಕೇಂದ್ರಗಳ ಸಲಹೆ–ಸಹಕಾರಗಳನ್ನು ಪಡೆದುಕೊಂಡು ಕೃಷಿಯಲ್ಲಿ ಹೆಚ್ಚು ಪ್ರಗತಿಯನ್ನು ಸಾಧಿಸಬೇಕು ಎಂದು ತಿಳಿಸಿದರು.

ಮೈಸೂರಿನ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಹೆಚ್.ಎಂ. ನಾಗರಾಜುರವರು ರೈತರ ಜ್ಞಾನವನ್ನು ಹೆಚ್ಚಿಸುವ ಕಾರ್ಯ ಮಾಡುವುದೇ ಈ ವಿಕಸಿತ ಕೃಷಿ ಸಂಕಲ್ಪ ಅಭಿಯಾನದ ಉದ್ದೇಶ. ಕರ್ನಾಟಕವು ಇಡೀ ಭಾರತದಲ್ಲಿ ಹೆಚ್ಚು ತೋಟಗಾರಿಕೆ ಬೆಳೆಯನ್ನು ಬೆಳೆಯುವ ರಾಜ್ಯವಾಗಿದೆ. ನೀರಿನ ಸಮರ್ಪಕ ಬಳಕೆಗಾಗಿ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಕೃಷಿಯಲ್ಲಿ ತಂತ್ರಜ್ಞಾನದ ಅಳವಡಿಕೆ ಅವಶ್ಯಕ. ಸಾವಯವ ಕೃಷಿಗೆ ಹೆಚ್ಚು ಒತ್ತುಕೊಟ್ಟು ಸರ್ಕಾರದ ವಿವಿಧ ಯೋಜನೆಗಳ ಉಪಯೋಗಗಳನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿಗಳಾದ ಶ್ರೀ ಎಂ. ಮದನ್‌ಗೋಪಾಲ್‌ರವರು ರೈತರ ಆದಾಯ ಹೆಚ್ಚಳವಾದರೆ ದೇಶ ಸಮೃದ್ಧವಾಗಿರುತ್ತದೆ. ಇಂದು ಭಾರತ ಅಕ್ಕಿ ಉತ್ಪಾದನೆಯಲ್ಲಿ ಪ್ರಪಂಚದಲ್ಲೇ ಮೊದಲ ಸ್ಥಾನದಲ್ಲಿದೆ. ರೈತರು ಋತುಮಾನಕ್ಕನುಗುಣವಾಗಿ ಬೆಳೆಗಳನ್ನು ಬೆಳೆಯಬೇಕು ಎಂದು ಹೇಳಿದರು.

ಮಾಜಿ ಶಾಸಕರಾದ ಶ್ರೀ ಮಹಿಮ ಪಟೇಲ್‌ರವರು ಕೃಷಿ ವಿಜ್ಞಾನದ ಕೇಂದ್ರಗಳು ಮಳೆಯಾಶ್ರಿತ ಬೆಳೆಗಳನ್ನು ಬೆಳೆಯುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಹೆಚ್ಚು ರಾಸಾಯನಿಕಗಳನ್ನು ಬಳಕೆ ಮಾಡದೆ ಕೃಷಿಯನ್ನು ಮಾಡಬೇಕು. ಸಾವಯವ ಕೃಷಿಯ ಜೊತೆಗೆ ಸಾವಯವ ರಾಜಕೀಯವೂ ಬೇಕು ಎಂದು ತಿಳಿಸಿದರು.

ವಿಶ್ರಾಂತ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರು ರೈತರು ನಮ್ಮ ಬದುಕಿನ ಜೀವನಾಡಿಯಾಗಿದ್ದಾರೆ. ಅವರ ಶ್ರೇಯೋಭಿವೃದ್ಧಿಗೆ ಸರ್ಕಾರ ಶ್ರಮಿಸಬೇಕು. ಕೃಷಿಕರು ಪಾರಂಪರಿಕ ವಿಧಾನಗಳ ಮೂಲಕವೂ ಕೃಷಿಕಾರ್ಯ ಕೈಗೊಳ್ಳಬೇಕು ಎಂದರು.

ಡಾ. ಬಿ.ಎನ್. ಜ್ಞಾನೇಶ್‌ರವರು ವಿಕಸಿತ ಕೃಷಿ ಸಂಕಲ್ಪ ಅಭಿಯಾನದ ಬಗ್ಗೆ ಮಾಹಿತಿ ನೀಡಿದರು, ಮಾತ್ರೋಶ್ರೀ ಪಾರ್ವತಮ್ಮ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಜಿ.ಎಲ್. ತ್ರಿಪುರಾಂತಕರವರು ಸ್ವಾಗತಿಸಿದರು. ಶ್ರೀ ಕೆ.ಪಿ. ಬಸವರಾಜುರವರು ವಂದಿಸಿದರು. ಶ್ರೀ ಮಹದೇವಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

**ಕಲಾ ಪರಂಪರೆ ಮುಂದುವರಿಯಬೇಕು**

ಸಂಗೀತ ಕಲಾವಿದರು ಅವರ ಕಲೆಯನ್ನು ಇತರರಿಗೆ ಕಲಿಸುವ ಮೂಲಕ ಪರಂಪರೆ ಮುಂದುವರಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 31ರಂದು ಮೈಸೂರು ಕಲಾ ಸಂವಹನ ಟ್ರಸ್ಟ್ ವತಿಯಿಂದ ರಮಾಗೋವಿಂದ ರಂಗಮಂದಿರದಲ್ಲಿ ಆಯೋಜಿಸಿದ್ದ ಸಿತಾರ್ ಮಾಧುರ್ಯ ಸಮೂಹ ಸಿತಾರ್ ವಾದನ, ರಾಗ್ ಚಿಕಿತ್ಸಾ ಪುಸ್ತಕ ಲೋಕಾರ್ಪಣೆ, ಸಿತಾರ್ ತರಗತಿಗಳ ಪ್ರಾರಂಭೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ವಿದೇಶೀ ವಾದ್ಯಗಳ ನಡುವೆ ಪಂ. ರವಿಶಂಕರ್‌ರವರು ಸಿತಾರ್ ವಾದನವನ್ನು ಜಗತ್ಪ್ರಸಿದ್ಧಗೊಳಿಸಿದರು. ಇಂಥ ವಾದ್ಯವನ್ನು ಮೈಸೂರಿನಲ್ಲಿ ಕಲಿಯುವವರ ಸಂಖ್ಯೆ ಹೆಚ್ಚಿರುವುದು ಹೆಮ್ಮೆಯ ಸಂಗತಿ. ಪಂ. ಬಸವರಾಜ ರಾಜಗುರು ಅವರ ಸಂಗೀತ ಕೇಳಬೇಕೆಂದರೆ ವಿದುಷಿ ಸಂಗೀತಾ ಕಟ್ಟಿ ಅವರ ಸಂಗೀತ ಆಲಿಸಬೇಕು. ಅವರು ರಾಜಗುರು ಸಂಗೀತ ಪರಂಪರೆಯನ್ನು ಉಳಿಸಿ, ಬೆಳೆಸುತ್ತಿದ್ದಾರೆ. ಹೀಗೆಯೇ ಪಂ. ಮಲ್ಲಿಕಾರ್ಜುನ ಮನ್ಸೂರ್, ಪಂ. ಸಿದ್ಧರಾಮ ಜಂಜಲದಿನ್ನಿ ಅವರು ಹಿಂದೂಸ್ತಾನಿ ಸಂಗೀತ ಪರಂಪರೆಯನ್ನು ಬೆಳೆಸಿದರು. ಉತ್ತರ ಕರ್ನಾಟಕದ ಸಿತಾರ್ ವಾದಕರಾದ ಉಸ್ತಾದ್ ಮೊಹಸಿನ್‌ಖಾನ್‌ರವರು ಪ್ರತಿಭಾವಂತರು. ಮೈಸೂರಿಗೆ ಬಂದು ಸಿತಾರ್ ಕಲಿಸುವ ಮೂಲಕ ಸಾಂಸ್ಕೃತಿಕ ವಿನಿಮಯ ಆಗುತ್ತಿರುವುದು ಶ್ಲಾಘನೀಯ ಎಂದರು.

ಅಬಕಾರಿ ಇಲಾಖೆ ಜಂಟಿ ಆಯುಕ್ತರಾದ ಶ್ರೀ ಬಸವರಾಜ ಹಡಪದ, ಗಾಯಕರಾದ ವಿದುಷಿ ಸಂಗೀತಾ ಕಟ್ಟಿ ಕುಲಕರ್ಣಿ, ರಂಗಕರ್ಮಿಗಳಾದ ಶ್ರೀ ಕೆ. ವೆಂಕಟರಾಜು, ಕಲಾ ಸಂವಹನ ಟ್ರಸ್ಟ್ ಅಧ್ಯಕ್ಷರಾದ ಶ್ರೀ ರಾಜೇಶ್ವರಿ ವಸ್ತ್ರದ ಉಪಸ್ಥಿತರಿದ್ದರು. ಉಸ್ತಾದ್ ಮೊಹಸಿನ್ ಖಾನ್‌ರವರು ಮತ್ತು ಶಿಷ್ಯರು ಸಿತಾರ್ ಮಾಧುರ್ಯ ಕಾರ್ಯಕ್ರಮ ಪ್ರಸ್ತುತಿಪಡಿಸಿದರು.

❑

# ಪ್ರಸಾದ



## ಕೃತಿ–ಸ್ವೀಕೃತಿ

**ಲಾಲ್‌ಬಾಗ್ ಕಲ್ಲಿನೊಂದಿಗೆ ಸಲ್ಲಾಪ (ಡಾ. ಟಿ.ಆರ್. ಅನಂತರಾಮು ಅವರ ಆಯ್ದ ಪ್ರಬಂಧಗಳು)**
ಡಾ. ಸುಕನ್ಯಾ ಸೂನಗಹಳ್ಳಿ
ಪ್ರ: ಹರಿವು ಕ್ರಿಯೇಷನ್ಸ್ ಪ್ರೈ.ಲಿ.
ಬಸವನಗುಡಿ, ಬೆಂಗಳೂರು

**ಅಹಲ್ಯಾಬಾಯಿ ಹೋಳ್ಕರ್ (ಮಾಳ್ವ ಸಾಮ್ರಾಜ್ಯದ ರಾಜಯೋಗಿನಿ)**
ಡಾ. ಗೀತಾ ಸೀತಾರಾಮ್
ಪ್ರ: ಗೀತಾಂಜಲಿ ಪಬ್ಲಿಕೇಷನ್ಸ್
ನಾಗರಬಾವಿ, ಬೆಂಗಳೂರು
ಪು : 563, ಬೆಲೆ : 550/–

**ಪದ್ಮಭೂಷಣ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು**
ಶ್ರೀ ಹೆಚ್.ಎಸ್. ಸಿದ್ಧಗಂಗಪ್ಪ
ಪ್ರ: ಕಲಾ ಪ್ರಕಾಶನ
ಮುನೇಶ್ವರ ಬ್ಲಾಕ್, ಪ್ಯಾಲೇಸ್ ಗುಟ್ಟಹಳ್ಳಿ
ಬೆಂಗಳೂರು
ಪು : 920, ಬೆಲೆ : 1380/–

**ಶರಣರ ಸಮಾಜೋಧಾರ್ಮಿಕ ಚಳುವಳಿ**
ಶ್ರೀ ಹೆಚ್.ಎಸ್. ಸಿದ್ಧಗಂಗಪ್ಪ
ಪ್ರ: ಎಲ್.ಎನ್.ಜಿ. ಪಬ್ಲಿಕೇಷನ್ಸ್
ಮುನೇಶ್ವರ ಬ್ಲಾಕ್
ರಾಜಮಹಲ್ ಗುಟ್ಟಹಳ್ಳಿ, ಬೆಂಗಳೂರು
ಪು : 148, ಬೆಲೆ : 135/–

**ವಂದೇಮಾತರಂ**
ಶ್ರೀ ಎಸ್.ಎನ್. ಸಿಂಪಿಗೇರ
ಪ್ರ: ಶ್ರೀರಾಮ ಪ್ರಕಾಶನ
ಕುಸುಮ ನಗರ, ಧಾರವಾಡ
ಪು : 328, ಬೆಲೆ : 300/–

**ತತ್ವ ಮನನ (ಧರ್ಮ, ತತ್ವದರ್ಶನ, ಪುರಾಣ ವಿಚಾರ)**
ಡಾ. ಎಂ. ಪ್ರಭಾಕ್ ಜೋಶಿ
ಪ್ರ: ಆಕ್ರಿತಿ ಆಶಯ ಪಬ್ಲಿಕೇಷನ್ಸ್
ಲೈಟ್ ಹೌಸ್ ಹಿಲ್ ರಸ್ತೆ
ಮಂಗಳೂರು, ದಕ್ಷಿಣ ಕನ್ನಡ
ಪು : 192, ಬೆಲೆ : 180/–

**ನುಡಿ ಸೊಗಡು**
ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ
ಪ್ರ: ಅನನ್ಯ ಪ್ರಕಾಶನ
ಶ್ರೀದೇವಿ ನಗರ, ವಿದ್ಯಾಗಿರಿ
ಧಾರವಾಡ
ಪು : 120, ಬೆಲೆ : 130/–

**ಸಖ್ಯದ ಆಖ್ಯಾನ**
ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ
ಪ್ರ: ಅನನ್ಯ ಪ್ರಕಾಶನ
ಶ್ರೀದೇವಿ ನಗರ, ವಿದ್ಯಾಗಿರಿ
ಧಾರವಾಡ
ಪು : 252, ಬೆಲೆ : 280/–

**ಮುಗಿಯದ ಮಾತು**
ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ
ಪ್ರ: ಅನನ್ಯ ಪ್ರಕಾಶನ
ಶ್ರೀದೇವಿ ನಗರ, ವಿದ್ಯಾಗಿರಿ, ಧಾರವಾಡ
ಪು : 232, ಬೆಲೆ : 250/–

**ಹೊಳೆಗೆ ಹೋಳೆದರ್ಥ ಕವಿತೆಗಳು**
ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ
ಪ್ರ: ಅನನ್ಯ ಪ್ರಕಾಶನ
ಶ್ರೀದೇವಿ ನಗರ, ವಿದ್ಯಾಗಿರಿ
ಧಾರವಾಡ
ಪು : 84, ಬೆಲೆ : 100/–

**ನಿನಾ–60 (ಕವಿತೆ ಮತ್ತು ಸ್ಪಂದನೆಗಳು**
ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ
ಪ್ರ: ಅನನ್ಯ ಪ್ರಕಾಶನ
ಶ್ರೀದೇವಿ ನಗರ, ವಿದ್ಯಾಗಿರಿ
ಧಾರವಾಡ
ಪು : 268, ಬೆಲೆ : 300/–

## ಲೇಖಕರ ವಿಳಾಸ

**ಡಾ. ಆರ್.ಬಿ. ಚಿಲುಮಿ**
ನಂ. 03, 'ಹೊಂಬೆಳಕು'
ಓಂ ಸ್ಕೂಲ್ ಹತ್ತಿರ
ಜಲದರ್ಶಿನಿ ನಗರ
ಧಾರವಾಡ 580003
ಮೊ: 9880206032

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ
ಆಯುರ್ವೇದ ಚಿಕಿತ್ಸಾಲಯ
ಬಿ.ಹೆಚ್. ರಸ್ತೆ
ತುಮಕೂರು 572 102
ಮೊ: 98809 96196

**ಡಾ. ಎಸ್.ಆರ್. ಗುಂಜಾಳ**
ಸಂತೂಬಾಯಿ ಅಪಾರ್ಟ್‌ಮೆಂಟ್
ಕೋರ್ಟ್ ರೋಡ್
ಧಾರವಾಡ 580 001

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಇತಿಹಾಸ ಪ್ರಾಧ್ಯಾಪಕರು
ಎಚ್.ಐ.ಜಿ. 32, ಗ್ರೂಪ್–1
ಕೆ.ಎಚ್.ಬಿ. ಕಾಲೋನಿ
ಹೂಟಗಳ್ಳಿ
ಮೈಸೂರು 570018
ಮೊ: 98453 09081

**ಶ್ರೀ ರಂಗನಾಥ್ ಮೈಸೂರು**
ನಂ.75, ಇ ಬ್ಲಾಕ್, 15ನೇ ಕ್ರಾಸ್
11ನೇ ಮುಖ್ಯರಸ್ತೆ
ಜೆ.ಪಿ.ನಗರ
ಮೈಸೂರು 570 008
ಮೊಬೈಲ್: 9845791252

ಹಿಂಬದಿ ಪುಟದ ಚಿತ್ರ

ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ 2025–26ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ಹರವೆ ಶ್ರೀಗಳು, ಶ್ರೀ ಹೆಚ್.ಎಂ. ನಾಗರಾಜು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಶ್ರೀ ಮಲ್ಲಯ್ಯ ಸ್ವಾಮಿಗಳು, ಶ್ರೀ ಮಹಿಮ ಪಟೇಲ್, ಶ್ರೀ ಎಂ. ಮದನ್‌ಗೋಪಾಲ್, ಶ್ರೀ ಎಸ್.ಪಿ. ಉದಯಶಂಕರ್, ಸಂಸ್ಥೆಯ ಮುಖ್ಯಸ್ಥರು ಹಾಗೂ ವಿದ್ಯಾರ್ಥಿಗಳಿದ್ದಾರೆ (29 ಮೇ 2025)



ಮೈಸೂರು ಕದಳಿ ಮಹಿಳಾ ವೇದಿಕೆಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮಹಿಳಾ ಸಾಧಕರಾದ ಶ್ರೀಮತಿ ಕಾತ್ಯಾಯಿನಿ ಹಾಗೂ ಶ್ರೀಮತಿ ನಂಜಮ್ಮನವರನ್ನು ಸನ್ಮಾನಿಸಲಾಯಿತು. ಶ್ರೀಮತಿ ಜಯಾಗೌಡ, ಶ್ರೀಮತಿ ರಾಧಾ ಮಲ್ಲಪ್ಪ, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಪ್ರೊ. ಪದ್ಮಾಶೇಖರ್, ಡಾ. ಪಿ. ಶಿವರಾಜು, ಶ್ರೀಮತಿ ಸುಧಾ ಮೃತ್ಯುಂಜಯಪ್ಪ ಹಾಗೂ ಶ್ರೀ ಮ.ಗು. ಸದಾನಂದಯ್ಯನವರುಗಳಿದ್ದಾರೆ (6 ಮೇ 2025)



ಮಳವಳ್ಳಿ ತಾಲ್ಲೂಕು ತೆಂಕಹಳ್ಳಿ ಕುಂದೂರು ಬೆಟ್ಟದ ಶ್ರೀ ರಸ ಸಿದ್ಧೇಶ್ವರ ಮಠದ ಪಟ್ಟಾಧಿಕಾರ ಮಹೋತ್ಸವವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ನೂತನ ಶ್ರೀಗಳಾದ ಶ್ರೀ ರುದ್ರಮಹಾಂತ ಸ್ವಾಮಿಗಳು ಹಾಗೂ ಹಿರಿಯ ಶ್ರೀಗಳಾದ ಶ್ರೀ ನಂಜುಂಡಸ್ವಾಮಿಗಳನ್ನು ಪೂಜ್ಯರು ಸನ್ಮಾನಿಸಿ ಆಶೀರ್ವದಿಸಿದರು (1 ಮೇ 2025)



ಮೈಸೂರು ಬಂಟರ ಸಂಘದ ಸುವರ್ಣ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮಾಜಿ ಸಚಿವರಾದ ಶ್ರೀ ಬಿ. ರಮಾನಾಥ ರೈಯವರು ಉದ್ಘಾಟಿಸಿದರು. ಶ್ರೀ ನಂದ್ಯಪ್ಪ ಶೆಟ್ಟಿ, ಡಾ. ಎಂ. ಮೋಹನ್ ಆಳ್ವ, ಶ್ರೀ ಕೆ. ಸದಾಶಿವ ಶೆಟ್ಟಿ, ಶ್ರೀ ಟಿ. ಪ್ರಭಾಕರ ಶೆಟ್ಟಿ ಹಾಗೂ ಡಾ. ಎಸ್. ಚಂದ್ರಶೇಖರ ಶೆಟ್ಟಿ ಮೊದಲಾದವರುಗಳಿದ್ದಾರೆ (11 ಮೇ 2025)




ಮೈಸೂರು ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನ ವಿದ್ಯಾರ್ಥಿನಿಲಯದಲ್ಲಿ ಚೆಲ್ಲಾರಾಂ ಫೌಂಡೇಷನ್ ವತಿಯಿಂದ ನಿರ್ಮಿಸಿರುವ ಭೋಜನ ಶಾಲೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಡಾ. ಅಶೋಕ್ ಗವಂಡೆಯವರು ಉದ್ಘಾಟಿಸಿದರು. ಶ್ರೀ ಬಿ. ಇಳಂಗೋವನ್, ಡಾ. ಬಿ. ಸುರೇಶ್, ಡಾ. ಸಿ.ಜಿ. ಬೆಟಸೂರಮಠ, ಶ್ರೀಮತಿ ಎ. ವೈದೇಹಿ ಅಯ್ಯಂಗಾರ್ ಹಾಗೂ ಡಾ. ಎ. ಪುಷ್ಪಾ ಅಯ್ಯಂಗಾರ್‌ರವರುಗಳಿದ್ದಾರೆ (1 ಮೇ 2025)



ಕೊಡಗು ಜಿಲ್ಲೆ ಕೊಡ್ಲಿಪೇಟೆ ಶ್ರೀ ಕಲ್ಲುಮಠದಲ್ಲಿ ಶ್ರೀ ನಂಜುಂಡೇಶ್ವರ ವಿದ್ಯಾ ಸಂಸ್ಥೆಯ ರಜತ ಮಹೋತ್ಸವ ಹಾಗೂ ಶ್ರೀ ಮಹಾಂತ ಸ್ವಾಮಿಗಳ ಪೀಠಾರೋಹಣ ಸುವರ್ಣ ಮಹೋತ್ಸವವನ್ನು ಜಗದ್ಗುರುಗಳವರು ಹಾಗೂ ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಶಂಕರ ಮಹದೇವ ಬಿದರಿಯವರು ಉದ್ಘಾಟಿಸಿದರು. ಕುಂದೂರು ಮಠ, ಕಲ್ಲಳ್ಳಿ ಮಠ, ಕಿರಿಕೊಡ್ಲಿ, ಕೊಡ್ಲಿಪೇಟೆ, ಅರಮೇರಿ, ಪಾಂಡೋಮಟ್ಟಿ ಹಾಗೂ ಗಾವಡಗೆರೆ ಮಠಗಳ ಶ್ರೀಗಳಿದ್ದಾರೆ (6 ಮೇ 2025)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಮಂತ್ರಮಹರ್ಷಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರ 140ನೇ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಚರಿಸಲಾಯಿತು. ಶ್ರೀ ಎಸ್. ಶಿವಕುಮಾರಸ್ವಾಮಿ, ಶ್ರೀ ಎಲ್. ನಾಗೇಂದ್ರ, ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಶಿವಪುರ ಸುರೇಶ್, ಶ್ರೀ ನಿಖಿಲೇಶ್, ಭಕ್ತಾದಿಗಳು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು (15 ಮೇ 2025)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಆಶ್ರಮದಿಂದ ತರಲಾಗಿದ್ದ ಶ್ರೀ ಸೋಮನಾಥ ಜ್ಯೋತಿರ್ಲಿಂಗಕ್ಕೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಆರ್ಟ್ ಆಫ್ ಲಿವಿಂಗ್ ಆಶ್ರಮದ ಶ್ರೀ ಸ್ವಾಮಿ ವಿಷ್ಣುಪಾದಜೀಯವರು ಮಾತನಾಡಿ ವಿವರ ನೀಡಿದರು. ಶ್ರೀ ಕಿಶೋರ್ ಪ್ರಸಾದ್‌ರವರು, ಗಣ್ಯರುಗಳು ಹಾಗೂ ಭಕ್ತಾದಿಗಳಿದ್ದಾರೆ (6 ಮೇ 2025)




ಬೆಂಗಳೂರು ಹೆಚ್‌ಬಿಆರ್ ಲೇಔಟ್‌ನಲ್ಲಿ ಸ್ಪರ್ಶ್ ಆಸ್ಪತ್ರೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಶರಣ್‌ಪ್ರಕಾಶ್ ಪಾಟೀಲ್, ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ದಿನೇಶ್ ಗುಂಡೂರಾವ್, ಶ್ರೀ ಶಾಮನೂರು ಶಿವಶಂಕರಪ್ಪ, ಗೌ.ನ್ಯಾ. ಶ್ರೀ ಶಿವರಾಜ್ ವಿ. ಪಾಟೀಲ್, ಶ್ರೀಮತಿ ಮೀನಾ ಶರಣ್ ಪಾಟೀಲ್ ಹಾಗೂ ಡಾ. ಶರಣ್ ಪಾಟೀಲ್‌ರವರುಗಳಿದ್ದಾರೆ (18 ಮೇ 2025)



ಕೆ.ಆರ್. ಪೇಟೆಯಲ್ಲಿ ನ್ಯೂ ಅಪೂರ್ವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ಪಂಕಜ ಪ್ರಕಾಶ್, ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ, ಡಾ. ಕುಮಾರ, ಶ್ರೀ ಹೆಚ್.ಕೆ. ಅನಿಲ್, ಶ್ರೀ ಕೆ.ಬಿ. ಚಂದ್ರಶೇಖರ್ ಮೊದಲಾದವರುಗಳಿದ್ದಾರೆ (17 ಮೇ 2025)



ಚಾಮರಾಜನಗರದ ಕರಿನಂಜಿಪುರದಲ್ಲಿ ಅಕ್ಕಮಹಾದೇವಿ ವಿದ್ಯಾರ್ಥಿನಿಯರ ಉಚಿತ ವಿದ್ಯಾರ್ಥಿನಿಲಯದ ಕಟ್ಟಡದ ಭೂಮಿಪೂಜಾ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಂಸದರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್‌ರವರು ನೆರವೇರಿಸಿದರು. ಶ್ರೀ ಎಲ್. ರೇವಣಸಿದ್ಧಯ್ಯ, ಶ್ರೀ ಸಿ. ಪುಟ್ಟರಂಗಶೆಟ್ಟಿ, ಮರಿಯಾಲ ಮತ್ತು ಚಾಮರಾಜನಗರ ಮಠಗಳ ಶ್ರೀಗಳು, ಶ್ರೀ ಪಿ. ಮರಿಸ್ವಾಮಿ, ಶ್ರೀ ಮಹಮ್ಮದ್ ಆಸ್ಗರ್ ಮುನ್ನ, ಶ್ರೀ ನಂಜುಂಡಸ್ವಾಮಿ ಹಾಗೂ ಶ್ರೀ ಮನೋಜ್ ಪಟೇಲ್‌ರವರುಗಳಿದ್ದಾರೆ (10 ಮೇ 2025)



ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ನವೀಕೃತ ಅಣಕು ನ್ಯಾಯಾಲಯವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕರ್ನಾಟಕ ಉಚ್ಚನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಇ.ಎಸ್. ಇಂದಿರೇಶ್‌ರವರು ಉದ್ಘಾಟಿಸಿದರು. ಪ್ರೊ. ಸಿ. ಬಸವರಾಜು, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಸುರೇಶ್‌ಬಾಬು, ಪ್ರೊ. ಕೆ.ಎಸ್. ಸುರೇಶ್, ಡಾ. ಎನ್. ವಾಣಿಶ್ರೀ ಮೊದಲಾದವರುಗಳಿದ್ದಾರೆ (19 ಮೇ 2025)



ನಂಜನಗೂಡಿನಲ್ಲಿ ಆಯೋಜಿಸಿದ್ದ ಬಸವ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಶಿವಪ್ಪದೇವರು, ಶ್ರೀ ಎಸ್.ಎಂ. ಕೆಂಪಣ್ಣ, ಹುಲ್ಲಹಳ್ಳಿ, ಗಾವಡಗೆರೆ ಶ್ರೀಗಳು, ಸಚಿವರಾದ ಶ್ರೀ ಈಶ್ವರ್ ಬಿ. ಖಂಡ್ರೆ, ಶ್ರೀ ಬಿ.ವೈ. ವಿಜಯೇಂದ್ರ, ಶ್ರೀ ಬಿ. ಹರ್ಷವರ್ಧನ್, ಶ್ರೀ ದರ್ಶನ್ ಧ್ರುವನಾರಾಯಣ್, ಶ್ರೀ ಕಳಲೆ ಕೇಶವಮೂರ್ತಿ ಮೊದಲಾದವರುಗಳಿದ್ದಾರೆ (25 ಮೇ 2025)



ವಿಸ್ಮಯ ಬಳಗದ 25ನೇ ವರ್ಷದ ಬೆಳ್ಳಿ ಬೆರಗು ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರು ಉದ್ಘಾಟಿಸಿದರು. ಶ್ರೀ ಪ್ರಕಾಶ್ ಚಿಕ್ಕಪಾಳ್ಯ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಡಾ. ಲತಾ ರಾಜಶೇಖರ್, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ. ನಾಗತಿಹಳ್ಳಿ ಚಂದ್ರಶೇಖರ್, ಕುಂದೂರು ಮಠ ಮತ್ತು ಚಂದ್ರವನದ ಶ್ರೀಗಳು, ಡಾ. ಮೀರಾ ಶಿವಲಿಂಗಯ್ಯ, ಪ್ರೊ. ನೀಲಗಿರಿ ಎಂ. ತಳವಾರ್ ಹಾಗೂ ಶ್ರೀ ಮಡ್ಡಿಕೆರೆ ಗೋಪಾಲ್‌ರವರುಗಳಿದ್ದಾರೆ (25 ಮೇ 2025)




ಹುಣಸೂರಿನಲ್ಲಿ ಬಸವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಕನಕಪುರ ಶ್ರೀಗಳು, ಶ್ರೀ ಚೇತನ್ ಶೇಖರ್, ಡಾ. ಬಿ.ಜಿ. ವಿನಯ್, ಡಾ. ಎಸ್.ಎಸ್. ಮನೋಜಿತ್ ಹಾಗೂ ಕುಟುಂಬವರ್ಗದವರುಗಳಿದ್ದಾರೆ (19 ಮೇ 2025)




ಬಿಳಗಿರಿರಂಗನ ಬೆಟ್ಟದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದ ಸಮಾರೋಪದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಿರುವುದು. ಶ್ರೀ ಟಿ. ಹೀರಾಲಾಲ್, ಡಾ. ಎಂ.ಬಿ. ಬೋರಲಿಂಗಯ್ಯ ಹಾಗೂ ಪ್ರೊ. ಎಂ. ಕೃಷ್ಣೇಗೌಡರವರುಗಳಿದ್ದಾರೆ (28 ಮೇ 2025)



ನಂಜನಗೂಡು ತಾಲ್ಲೂಕು ಕಾರ್ಯದಲ್ಲಿ ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿಯವರ ಪ್ರಥಮ ವರ್ಷದ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಅವರ ಸ್ಮಾರಕದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಪಾದಪೂಜೆ ಮಾಡಿಕೊಳ್ಳುತ್ತಿರುವುದು. ಶ್ರೀ ಕಾ.ಪು. ಸಿದ್ಧವೀರಪ್ಪ ಮತ್ತು ಕುಟುಂಬವರ್ಗದವರು ಮೊದಲಾದವರುಗಳಿದ್ದಾರೆ (26 ಮೇ 2025)



ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಿಂದ ಆಯೋಜಿಸಿದ್ದ ವಿಕಸಿತ ಕೃಷಿ ಸಂಕಲ್ಪ ಅಭಿಯಾನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸುತ್ತಿರುವುದು. ಶ್ರೀ ಬಿ.ಎನ್. ಜ್ಞಾನೇಶ್, ಶ್ರೀ ಮಲ್ಲಯ್ಯ ಸ್ವಾಮಿಗಳು, ಶ್ರೀ ಎಂ. ಮದನ್ ಗೋಪಾಲ್‌ರವರು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರು, ಶ್ರೀ ಮಹಿಮ ಪಟೇಲ್, ಶ್ರೀ ಹೆಚ್.ಎಂ. ನಾಗರಾಜುರವರು ಹಾಗೂ ಪ್ರಗತಿಪರ ರೈತರುಗಳಿದ್ದಾರೆ (29 ಮೇ 2025)



ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯೋಜಿಸಿದ್ದ ಅಧ್ಯಯನ ಶಿಬಿರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಎಂ. ಮದನ್ ಗೋಪಾಲ್‌ರವರು ಉದ್ಘಾಟಿಸುತ್ತಿರುವುದು. ಶ್ರೀ ಮಲ್ಲಯ್ಯ ಸ್ವಾಮಿಗಳು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಶ್ರೀ ಮಹಿಮ ಪಟೇಲ್, ಶ್ರೀ ಹೆಚ್.ಎಂ. ನಾಗರಾಜು ಹಾಗೂ ಶಿಬಿರಾರ್ಥಿಗಳಿದ್ದಾರೆ (29 ಮೇ 2025)



ಮಂಡ್ಯದಲ್ಲಿ ಏರ್ಪಡಿಸಿದ್ದ ಬಸವ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಸಚ್ಚಿದಾನಂದ, ಶ್ರೀ ಬಿ.ವೈ. ವಿಜಯೇಂದ್ರ, ಶ್ರೀ ಶಂಕರ ಮಹದೇವ ಬಿದರಿ, ಶ್ರೀ ಎಂ.ಬಿ. ಪಾಟೀಲ್, ಶ್ರೀ ಎಸ್. ಆನಂದ ತಾಳಶಾಸನ, ಶ್ರೀ ಪಿ. ರವಿಕುಮಾರ್ ಗಣಿಗ, ಶ್ರೀ ಬಿ.ಎಸ್. ಪುಟ್ಟರಾಜು ಹಾಗೂ ಶ್ರೀ ಮನೋಹರ್ ಅಬ್ಬಿಗೆರೆಯವರುಗಳಿದ್ದಾರೆ (31 ಮೇ 2025)

Registered with the Registrar of Newspapers in India Under No. 50622 / 1986
'Prasada' Monthly, Vol. 40 Issue No. 5, May 2025



ISSN 2583-7648

ಬಿಡಿ ಪ್ರತಿ : ರೂ.10/-

e-mail: prasada@jssonline.org ⋆ www.jssonline.org